ಸಂಪುಟ: 05 ಸಂಚಿಕೆ: 01 ಪುಟಗಳು: 08 ಶನಿವಾರ 15 ಮಾರ್ಚ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

UDAYAVAHINI KANNADA DAILY NEWS PAPER 5th ANNIVERSARY

# ಉದಯ ವಾಹಿನಿ

UV 5 ಸಂಭ್ರಮ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ



ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಡಿಕೆಶಿ ಡಿನ್ನರ್ ಪಾರ್ಟಿ ಶುಭ ಸೂಚನೆಯ ಮುನ್ಸೂಚನೆಯಾ

• ಉದಯವಾಹಿನಿ, ಬೆಂಗಳೂರು

ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಿ.ಟಿ.ರವಿ ಮತ್ತು ಎನ್.ರವಿಕುಮಾರ್ ನಡುವೆ ಹಾಸ್ಯಭರಿತ ಮಾತುಕತೆಗೆ ವಿಧಾನ ಪರಿಷತ್ ಸಾಕ್ಷಿಯಾಯಿತು. ಬಿಜೆಪಿ ನಾಯಕರ ಪ್ರಶ್ನೆಗೆ, ಡಿಕೆಶಿ ಹಸನ್ಮುಖದಿಂದಲೇ ಛೇಡಿಸಿದರು. ವಿಧಾನ ಪರಿಷತ್‌ನಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ಸಿ.ಟಿ.ರವಿ ಮುಖಾಮುಖಿಯಾಗಿದ್ದಾರೆ. ಡಿಕೆಶಿ, ಗ್ಯಾರಂಟಿ ಯೋಜನೆಗಳ ಅನುಕೂಲದ ಬಗ್ಗೆ ಮಾತನಾಡುತ್ತಿದ್ದರು. ಈ ವೇಳೆ, ಸಿ.ಟಿ.ರವಿ ಗ್ಯಾರಂಟಿ ಯೋಜನೆಗೆ ಬಗ್ಗೆ ವಿರೋಧವನ್ನು ವ್ಯಕ್ತ ಪಡಿಸಿದರು. ಇಬ್ಬರು ನಾಯಕರ ಮಧ್ಯೆ ಕೆಲ ಹೊತ್ತು ಮಾತಿನ ಸಮರ ಜೋರಾಗಿ ನಡೆಯಿತು. ಬೆಳಗಾವಿ ಪ್ರಕರಣದ ನಂತರ ವಿಧಾನ ಪರಿಷತ್‌ನಲ್ಲಿ ಇಬ್ಬರು ನಾಯಕರು ಭೇಟಿಯಾಗಿ ಮಾತನಾಡಿದ್ದು ವಿಶೇಷವಾಗಿತ್ತು. ಇದಾದ ನಂತರ, ಶೂನ್ಯ ವೇಳೆಯಲ್ಲಿ ಮತ್ತೆ ಮಾತನಾಡಲು ಆರಂಭಿಸಿದ ರವಿ, ಯಾಕೋ ನೀವು ಬೆಳಗ್ಗೆಯಿಂದ ಲವಲವಿಕೆಯಿಂದ ಇದ್ದೀರಿ, ಏನಾದರೂ ಸಂತೋಷದ ಸುದ್ದಿ ಇದೆಯೇ ಎಂದು ಪ್ರಶ್ನಿಸಿದರು. ನೀವು ಇಂದು ಅತ್ಯಂತ ಪ್ರಸನ್ನರಾಗಿ ಕಾಣುತ್ತಿದ್ದೀರಿ, ಏನಾದರೂ ಶುಭ ಸೂಚನೆ ನಿಮಗೆ ಸಿಕ್ಕಿದೆಯಾ ಸೂಕ್ತಕಾಲ ಎನ್ನುವ ಮಾತನ್ನು ಉಪಯೋಗಿಸಿದ್ದೀರಿ, ನೀವು ಹಾಕಿಕೊಂಡಿರುವ ಶಾಲು ಕೂಡಾ ನಿಮಗೆ ಕಳೆಕೊಡುತ್ತಿದೆ ಎಂದು ಸಿ.ಟಿ.ರವಿ, ಡಿ.ಕೆ.ಶಿವಕುಮಾರ್ ಅವರನ್ನು ಪ್ರಶ್ನಿಸಿದರು.

## ಗ್ಯಾರಂಟಿ ಯೋಜನೆಗೆ ದಲಿತರ ಹಣ ಸದನದಲ್ಲಿ ಕೋಲಾಹಲ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗುತ್ತಿದೆ ಎಂಬ ವಿಚಾರ ವಿಧಾನಪರಿಷತ್‌ನಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಯ್ತು. ಜೆಡಿಎಸ್ ಸದಸ್ಯ ಟಿ ಎ ಶರವಣ ಕೇಳಿದ ಪ್ರಶ್ನೆಯು ಪರಿಷತ್ ನಲ್ಲಿ ಆಡಳಿತ ಮತ್ತು ವಿಪಕ್ಷಗಳ ನಡುವಿನ ಜಟಾಪಟಿಗೆ ಕಾರಣವಾಯ್ತು. ಜಟಾಪಟಿ ತೀವ್ರ ಸ್ವರೂಪಕ್ಕೆ ತಿರುಗಿದ ಹಿನ್ನಲೆಯಲ್ಲಿ ಗದ್ದಲ ಮಾಡಿದರೆ ಸದನದಿಂದ ಹೊರಗೆ ಹಾಕ್ತೇನೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ವಾರ್ನಿಂಗ್ ನೀಡಿದರು. ಶುಕ್ರವಾರ ಪರಿಷತ್ ನಲ್ಲಿ ಈ ಕುರಿತಾಗಿ ಪ್ರಶ್ನೆ ಕೇಳಿದ ಶರವಣ ಆ ಸಮುದಾಯಕ್ಕೆ ಅಂತಾ ಮೀಸಲಿಟ್ಟ ಹಣವನ್ನು ಸರಿಯಾಗಿ ಖರ್ಚು ಮಾಡ್ತಾ ಇಲ್ಲ ಏಕೆ? ಎಂದು ಪ್ರಶ್ನಿಸಿದರು. ಸದಸ್ಯರು ಎತ್ತಿದ ಪ್ರಶ್ನೆಗೆ ಸಾಥ್ ನೀಡಿದ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಡಳಿತ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು. ದಲಿತರಿಗೆ ಈ ಸರ್ಕಾರದಿಂದ ಆಗಿರುವಷ್ಟು ಅನ್ಯಾಯ ಬೇರೆ ಎಲ್ಲೂ ಆಗಿಲ್ಲ.ನಮಗೆ ಮೋಸ ಮಾಡಲು ನಮ್ಮ ಜನಾಂಗದ ವ್ಯಕ್ತಿಯನ್ನೇ ಇಡಲಾಗಿದೆ. ಇದು ನಮಗೆ ಮಾಡುತ್ತಿರುವ ವಂಚನೆ ಎಂದು ಕಿಡಿಕಾರಿದರು.

## ಹೊಸೂರು ವಿಮಾನ ನಿಲ್ದಾಣದ 2 ಸ್ಥಳಕ್ಕೆ ಗ್ರೀನ್ ಸಿಗ್ನಲ್!

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸರ್ಕಾರವು ಬೆಂಗಳೂರು 2ನೇ ವಿಮಾನ ನಿಲ್ದಾಣಕ್ಕೆ ಸ್ಥಳ ಹುಡುಕಾಟ ಮಾಡಿ ಅಂತಿಮಗೊಳಿಸುವಷ್ಟರಲ್ಲಿಯೇ ಇತ್ತ ತಮಿಳುನಾಡು ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ಹೊಸೂರು ಏರ್‌ಪೋರ್ಟ್‌ಗೆ 2 ಸ್ಥಳ ಸೂಕ್ತವೆಂದು ವರದಿ ತಂದಿದೆ. ಕರ್ನಾಟಕ ಸರ್ಕಾರವು ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣ ದಟ್ಟಣೆ ತಗ್ಗಿಸಲು 2 ನೇ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ನಿರ್ಧಾರ ಕೈಗೊಂಡಿತ್ತು. ಇತ್ತ ತಮಿಳುನಾಡು ಸರ್ಕಾರ ಕೂಡ ಹೊಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ಮಾಡಲು ಮುಂದಾಗಿತ್ತು. ಸದ್ಯ ಕರ್ನಾಟಕ ಸರ್ಕಾವು ಸ್ಥಳ ಹುಡುಕಾಟ ನಡೆಸಿ 2–3 ದಿನಗಳ ಹಿಂದಷ್ಟೇ ಕೇಂದ್ರ ಸರ್ಕಾರದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಅಷ್ಟರೊಳಗೆ ತಮಿಳುನಾಡು ಸರ್ಕಾರವು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಹೊಸೂರು ಬಳಿಯ 2 ಸ್ಥಳ ಸೂಕ್ತ ಎಂಬ ವರದಿಯನ್ನು ಪಡೆದುಕೊಂಡಿದೆ.

ಅಕ್ಟೋಬರ್‌ನಲ್ಲಿಯೇ ಅರ್ಜಿ ಸಲ್ಲಿಸಿದ್ದ ತಮಿಳುನಾಡು ಸರ್ಕಾರವು ಅಕ್ಟೋಬರ್‌ನಲ್ಲಿ, ಅಧ್ಯಯನಕ್ಕಾಗಿ ಐದು ಸ್ಥಳಗಳನ್ನು ಆಯ್ಕೆ ಮಾಡಲಾಗಿತ್ತು. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಹೊಸೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣದ ಕುರಿತು ಸಾಧ್ಯಾಸಾಧ್ಯತಾ ವರದಿಯನ್ನು ತಮಿಳುನಾಡು ಸರ್ಕಾರಕ್ಕೆ ನೀಡಿದೆ.




## ಉದಯವಾಹಿನಿ ಪತ್ರಿಕೆಗೆ 5ನೇ ವರ್ಷದ ಸಂಭ್ರಮ



**ಹೊಸ ಚಿಂತನೆಯ ಸಿಂಚನ**

ನಮ್ಮ ಭಾರತ ದೇಶದ ಸಮಗ್ರತೆ, ಸಹಿಷ್ಣುತೆ, ಭ್ರಾತೃತ್ವ ವೈವಿಧ್ಯತೆಗಳಿಗೆ ಧಕ್ಕೆಯಾಗದಂತೆ ಸಂವಿಧಾನದ ನಾಲ್ಕನೇ ಅಂಗದ ಕರ್ತವ್ಯವನ್ನು ಶಿರಸಾ ವಹಿಸಿ ಪಾಲಿಸುತ್ತಿರುವ ಈ ದೇಶದ ಕೆಲವೇ ಕೆಲವು ಬೆರಳೆಣಿಕೆಯ ದಿನ ಪತ್ರಿಕೆಗಳಲ್ಲಿ ಉದಯವಾಹಿನಿ ಪತ್ರಿಕೆಯೂ ಸಹ ಅಗ್ರಸ್ಥಾನಕ್ಕೆ ಬರುತ್ತಿದೆ. ಕನ್ನಡದ ನಿಜವಾದ ದೇಶಪ್ರೇಮಿ ಪತ್ರಿಕೆಯೆಂದರೆ ಅದು ಉದಯವಾಹಿನಿ ಪತ್ರಿಕೆ. ಓದುಗರ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿರುವ ಪತ್ರಿಕೆಯ ಪುಟ ವಿನ್ಯಾಸವು ಕೂಡ ಎಲ್ಲಾ ರಾಜ್ಯ ಪತ್ರಿಕೆಗಳಿಗಿಂತ ವಿಭಿನ್ನವಾಗಿರುವುದು ಹರ್ಷದಾಯಕ ವಿಷಯ. ಈ ಪತ್ರಿಕೆ ನೋಡಿ ಓದುಗರು ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಸಂತೋಷದ ಸಂಗತಿ. ಈ ನೆಲದ ಜನರ ನಿಜವಾದ ಭಾವನೆಗಳನ್ನು ಬಿತ್ತರಿಸುವ ಈ ನೆಲದ ಕಸುವು ಹಾಳಾಗದಂತೆ ಅರೆ ಕ್ಷಣವೂ ಎಚ್ಚರ ತಪ್ಪದೆ, ನಿಷ್ಪಕ್ಷಪಾತ ವರದಿಗಾರಿಕೆ ಮಾಡುತ್ತಿರುವ 'ಉದಯವಾಹಿನಿ ಪತ್ರಿಕೆಗೆ 5ನೇ ವರ್ಷದ ಸಂಭ್ರಮ. ಇದು ಹೆಮ್ಮೆಯ ವಿಚಾರ.

ಸಂಪಾದಕೀಯ, ಸಮಕಾಲೀನ ಸೇರಿದಂತೆ ಮಹತ್ತರವಾದ ಅಂಕಣಗಳು, ವೆಬ್ ಮೀಡಿಯಾದ ಮೂಲಕ ನಡೆಸುತ್ತಿರುವ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಹಿತ್ಯ ಕಲೆಗಳ ಸಂಬಂಧಿತ ವಿಶ್ಲೇಷಣೆಗಳ, ಚರ್ಚೆಗಳು ಜ್ಞಾನದ ಕಣಜವನ್ನೇ ಹೊತ್ತು ಹೊಸ ಚಿಂತನೆಯ ಸಿಂಚನವನ್ನು ಎಳೆಯರಿಂದ ಹಿರಿಯರವರೆಗೂ ನೀಡುತ್ತಿರುವ ಉದಯವಾಹಿನಿ ಪತ್ರಿಕೆಗೆ 5ನೇ ವರ್ಷದ ಹರೆಯಕ್ಕೆ ಕಾಲಿಡುತ್ತಿರುವ ಈ ಹೊತ್ತಲ್ಲಿ ಮತ್ತಷ್ಟು ಮಾನವೀಯಗೊಳ್ಳುತ್ತ ಮುಂದೆ ಸಾಗಲಿ... ಕನ್ನಡ ನಾಡನ್ನು ಸರ್ವಜನಾಂಗದ ಶಾಂತಿಯ ತೋಟವಾಗಿರಿಸಲು ಅಪಾರ ಕೊಡುಗೆ ನೀಡಲಿ... ಎಂದು ಶುಭ ಹಾರೈಸುತ್ತೇನೆ.

ಸಂಪಾದಕರು
**ಟಿ.ಹೊಂಬೇಗೌಡರು**
ಉದಯವಾಹಿನಿ ದಿನಪತ್ರಿಕೆ

# ವರದಿ ಬಂದಿಲ್ಲ 9 ವಿವಿ ಮುಚ್ಚಲ್ಲ

● ಉಪ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಕೂಲಂಕುಷ ಪರಿಶೀಲನೆಗೆ ಉಪ ಸಮಿತಿ ರಚಿಸಲಾಗಿದೆ ● "ಸಂಪುಟ ಉಪಸಮಿತಿ ವರದಿ ಬರುವ ಮೊದಲೇ ಬಿಜೆಪಿಗೆ ಆತಂಕ ಏಕೆ...?" ● ರಾಜ್ಯ ಸರ್ಕಾರದ ವಿರುದ್ಧ ಜೋಶಿ ವಾಗ್ದಾಳಿ ● ಉಪ ಸಮಿತಿ ವರದಿ ಕೊಡುವುದು ಬಾಕಿ ಇದೆ.

• ಉದಯವಾಹಿನಿ, ಬೆಂಗಳೂರು



ವಿಶ್ವವಿದ್ಯಾಲಯಗಳನ್ನು ಮುಚ್ಚುವ ಬಗ್ಗೆ ತೀರ್ಮಾನ ಆಗಿಲ್ಲ. ಕ್ಯಾಬಿನೆಟ್ ಉಪ ಸಮಿತಿ ವರದಿಯೇ ಇನ್ನೂ ಬಂದಿಲ್ಲ. ಉಪ ಸಮಿತಿ ವರದಿ ಬರುವ ಮೊದಲೇ ಬಿಜೆಪಿಗೆ ಆತಂಕ ಏಕೆ...? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಕುಟುಕಿದ್ದಾರೆ. ಪ್ರತಿಪಕ್ಷದ ಸದಸ್ಯರು ಸದನದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಸಿಎಂ, ಉಪ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಈ ಸಂಗತಿಯ ಕೂಲಂಕಷ ಪರಿಶೀಲನೆಗೆ ಉಪ ಸಮಿತಿ ರಚಿಸಲಾಗಿದೆ. ಉಪ ಸಮಿತಿ ವರದಿ ಕೊಡುವುದು ಬಾಕಿ ಇದೆ. ವರದಿ ಬರುತ್ತಿದ್ದಂತೆ ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಚರ್ಚೆ ನಡೆಸಿ ನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.ವರದಿ ಬರುವ ಮೊದಲೇ ವಿವಿಗಳನ್ನು ಮುಚ್ಚುತ್ತೇವೆ ಎನ್ನುವುದು ಸರಿಯಲ್ಲ. ಇಂಥಾ ತೀರ್ಮಾನ ನಮ್ಮಿಂದ ಆಗಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಬಿಜೆಪಿ ಸದಸ್ಯ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸದನದಲ್ಲಿ ನಿಲುವಳಿ ಸೂಚನೆ ಮಂಡಿಸಿ, ಚರ್ಚೆಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು. ಆಗ ಸ್ಪೀಕರ್ ಯು.ಟಿ.ಖಾದರ್, ಪ್ರತಿದಿನ ನಿಲುವಳಿ ಸೂಚನೆ ಕೊಟ್ಟರೆ ಹೇಗೆ?, ಬಜೆಟ್ ಭಾಷಣದಲ್ಲಿ ಅವಕಾಶವಿದೆ. ಈ ಬಗ್ಗೆ ಎರಡು ಮೂರು ಬಾರಿ ಚರ್ಚೆ ಸಹ ಆಗಿದೆ.

ಹಾಗಾಗಿ, ನಿಯಮ 69ಕ್ಕೆ ಬದಲಾವಣೆ ಮಾಡಿ ಮುಂದಿನ ವಾರ ಚರ್ಚೆಗೆ ಅವಕಾಶ ಕೊಡುವುದಾಗಿ ಹೇಳಿದರು.

ಈ ವೇಳೆ ಮಾತನಾಡಿದ ಅಶ್ವತ್ಥನಾರಾಯಣ ಅವರು, ವಿಶ್ವವಿದ್ಯಾಲಯಗಳ ಅಗತ್ಯವಿದ್ದು, ವಿವಿಗಳನ್ನು ಉಳಿಸಿ. ಸರ್ಕಾರ ವಿವಿಗಳನ್ನು ಮುಚ್ಚುವ ಆತಂಕವನ್ನು ನಿರ್ಮಾಣ ಮಾಡಿದೆ ಎಂದರು. ಇದಕ್ಕೆ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಬಿಜೆಪಿ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಧ್ವನಿಗೂಡಿಸಿ ವಿವಿಗಳನ್ನು ಮುಚ್ಚಬಾರದು ಎಂದು ಆಗ್ರಹಿಸಿದರು. ವಿವಿಗಳನ್ನು ಮುಚ್ಚುವುದಾಗಿ ಈಗಾಗಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿಕೆ ಕೊಟ್ಟಿದ್ದಾರೆ. ಆದರೆ, ಈಗ ನೀವು (ಸಿಎಂ) ಪರಿಶೀಲನೆ ಮಾಡುತ್ತೇವೆ ಎನ್ನುತ್ತಿದ್ದಿರಾ. ಇದರಲ್ಲಿ ಗೊಂದಲ, ಆತಂಕ ಎದುರಾಗಿದೆ. ಹಾಗಾಗಿ, ಈ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ಅಶೋಕ್ ಒತ್ತಾಯಿಸಿದರು. ಈ ವೇಳೆ ಸಿಎಂ ಮಾತನಾಡಿ, ವಿವಿಗಳನ್ನು ಮುಚ್ಚಬೇಕೋ, ಬೇಡವೋ ಕ್ಯಾಬಿನೆಟ್ ಸಬ್ ಕಮಿಟಿ ವರದಿ ಬಂದ ನಂತರ ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

**1** ಉಪ ಸಮಿತಿ ವರದಿ ಬರುವ ಮೊದಲೇ ಬಿಜೆಪಿಗೆ ಆತಂಕ ಏಕೆ

**2** ವರದಿ ಬರುತ್ತಿದ್ದಂತೆ ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ತೀರ್ಮಾನ ತೆಗೆದುಕೊಳ್ಳಲಾಗುವುದು

**3** ವರದಿ ಬರುವ ಮೊದಲೇ ವಿವಿಗಳನ್ನು ಮುಚ್ಚುತ್ತೇವೆ ಎನ್ನುವುದು ಸರಿಯಲ್ಲ

**ಹೊಸ ವಿವಿ ಮುಚ್ಚುವ ಬಗ್ಗೆ ನಿರ್ಧಾರವಾಗಿಲ್ಲ:** ರಾಜ್ಯದಲ್ಲಿನ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಬಗ್ಗೆ ಸರಕಾರ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಭರವಸೆ ನೀಡಿದರೂ ಸಚಿವ ಸುಧಾಕರ್ ಹಾಗೂ ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥ ನಾರಾಯಣ ನಡುವೆ ವಿಧಾನಸಭೆಯಲ್ಲಿ ವಾಕ್ಸಮರ ನಡೆಯಿತು.ಬಿಜೆಪಿಯ ಜಗದೀಶ್ ಗುಡಗಂಟಿ ಪ್ರಶ್ನೆಗೆ ಉತ್ತರಿಸಿದ ಸುಧಾಕರ್, ಹೊಸ ವಿವಿಗಳು ಸೇರಿದಂತೆ ಹಾಲಿ ವಿವಿಗಳ ಸ್ಥಿತಿಗತಿ ಪರಿಶೀಲನೆಗೆ ರಚಿಸಲಾಗಿರುವ ಡಿಸಿಎಂ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ಒಂದು ಸಭೆ ನಡೆಸಿದೆ. ಹಳೆಯ ವಿವಿಗಳಲ್ಲೇ ಪಿಂಚಣಿ ನೀಡಲು ಕಷ್ಟದ ಸ್ಥಿತಿ ಇದೆ. ಹೀಗಿರುವಾಗ ಹಿಂದಿನ ಬಿಜೆಪಿ ಸರಕಾರವು ತಲಾ ಕೇವಲ 2 ಕೋಟಿ ರೂ. ನೀಡಿ ಹೊಸ ವಿವಿ ಸ್ಥಾಪಿಸಿತ್ತು. ವಾಹನ ಖರೀದಿಸುವಂತಿಲ್ಲ, ಹೆಚ್ಚು ಬೋಧಕ ಸಿಬ್ಬಂದಿ ನೇಮಿಸಿಕೊಳ್ಳುವಂತಿಲ್ಲ ಎಂದೆಲ್ಲಾ ಷರತ್ತುಗಳನ್ನು ವಿಧಿಸಿದೆ, ಎಂದು ಅಸಮಾಧಾನ ಹೊರಹಾಕಿದರು.

**ಡಿಸಿಎಂ ನೇತೃತ್ವದಲ್ಲಿ ಸಮಿತಿ**

ಕರ್ನಾಟಕದಲ್ಲಿ ರಚಿಸಲಾದ ಹೊಸ ವಿಶ್ವವಿದ್ಯಾನಿಲಯಗಳ ಪ್ರಗತಿ ಕುರಿತು ಚರ್ಚೆಗಳು ನಡೆದಿದ್ದವು. ಇದು ರಾಜ್ಯದ ಶೈಕ್ಷಣಿಕ ವಿಚಾರ, ಇದರಲ್ಲಿ ವೈಯಕ್ತಿಕ ಉದ್ದೇಶವೇನಿಲ್ಲ. ವಿದ್ಯಾರ್ಥಿಗಳ ಭವಿಷ್ಯ ನಮಗೆ ಮುಖ್ಯ. ಉಪನ್ಯಾಸಕರು ಮೈಸೂರಿನಿಂದ ಚಾಮರಾಜನಗರ, ಮಂಡ್ಯಗೆ ಹೋಗಲು ತಯಾರಿಲ್ಲ. ಸೀನಿಯಾರಿಟಿಗೆ ತೊಂದರೆಯಾಗುತ್ತೆಂಬ ಆತಂಕ ಅವರಿಗಿದೆ. ಈ ಹಿಂದೆ ಒಂದು ವಿಶ್ವವಿದ್ಯಾಲಯಕ್ಕೆ 2 ಕೋಟಿ ರೂ. ಮೀಸಲು ಇಡಲಾಗಿತ್ತು. ಈಗ ಹೊಸ ವಿವಿಗೆ ಜಮೀನು ಇಲ್ಲ, ಅಲ್ಲಿಗೆ ಹೋಗುವವರೂ ಇಲ್ಲವೆಂದು ಸಭೆಯಲ್ಲಿ ಸಚಿವರು, ಅಧಿಕಾರಿಗಳು ಅಭಿಪ್ರಾಯ ತಿಳಿಸಿದ್ದಾರೆ. ಈ ವಿಚಾರವನ್ನು ಸಂಪುಟ ಮುಂದೆ ಇಡುತ್ತೇವೆ. ಮುಖ್ಯಮಂತ್ರಿಗಳಿಗೂ ಈ ಕುರಿತು ವಿವರಣೆ ನೀಡಲಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದರು



**ವಿವಿಧೆಡೆ ಹೋರಾಟ**

ಈ ನಡುವೆ ವಿಶ್ವವಿದ್ಯಾನಿಲಯ ಮುಚ್ಚುವ ಕುರಿತು ಚರ್ಚೆಗಳು ನಡೆದಿರುವ ನಡುವೆಯೇ ಕೊಡಗು, ಚಾಮರಾಜನಗರ ಸಹಿತ ಹಲವು ಭಾಗಗಳಲ್ಲಿ ಈಗಾಗಲೇ ಹೋರಾಟಗಳು ನಡೆದಿವೆ. ಹೊಸ ವಿಶ್ವವಿದ್ಯಾಲಯ ಮುಚ್ಚಬೇಡಿ. ಆರ್ಥಿಕ ಶಕ್ತಿ ತುಂಬಿ ಎನ್ನುವ ಒತ್ತಾಯವನ್ನು ಮಾಡಲಾಗಿದೆ.

**ವಿಧಾನಸಭಾ ಕ್ಷೇತ್ರಕ್ಕೊಂದು ವಿವಿ ಕೊಡಲಿ**

ಪರಸ್ಪರ ವಾಕ್ಸಮರ ಮುಂದುವರಿದಂತೆ ಆಡಳಿತ-ಪ್ರತಿಪಕ್ಷಗಳ ಸದಸ್ಯರ ನಡುವೆ ಆರೋಪ-ಪ್ರತ್ಯಾರೋಪವೂ ತೀವ್ರವಾಯಿತು. ಸಚಿವ ಬೈರತಿ ಸುರೇಶ್, ಹೊಸ ವಿವಿಗಳು ಬೇಕು ಎಂಬಂತಾದರೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಒಂದೊಂದು ವಿವಿ ಕೊಟ್ಟುಬಿಡಿ.

ಹೆಬ್ಬಾಳಕ್ಕೊಂದು, ಯಲಹಂಕಕ್ಕೆ ಒಂದು ವಿವಿ ಕೊಡಲಿ, ಎಂದು ಕುಟುಕಿದರು. ಕೊನೆಗೆ ಸ್ಪೀಕರ್ ಯು.ಟಿ.ಖಾದರ್, ವಿವಿಗಳನ್ನು ಮುಚ್ಚುವ ಬಗ್ಗೆ ಇನ್ನೂ ಅಂತಿಮ ನಿರ್ಧಾರವಾಗಿಲ್ಲ ಆತಂಕ ಬೇಡ,'' ಎಂದು ಚರ್ಚೆಗೆ ವಿರಾಮ ಹಾಕಿದರು.

## ಬೆಂಗಳೂರಿನಲ್ಲಿ ನೀರಿನ ದರ 1 ಪೈಸೆ ಹೆಚ್ಚಳ

• ಉದಯವಾಹಿನಿ, ಬೆಂಗಳೂರು,

ನಗರದಲ್ಲಿ ಪ್ರತಿ 1 ಲೀಟರ್ ನೀರಿಗೆ 1 ಪೈಸೆ ಹೆಚ್ಚಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ರಾಮೋಜಿಗೌಡ ಪ್ರಶ್ನೆಗೆ ಡಿಸಿಎಂ ಡಿಕೆಶಿವಕುಮಾರ್ ಉತ್ತರಿಸಿದರು. ಬೇಸಿಗೆ ಕಾಲದಲ್ಲಿ ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಪರಿಹಾರಕ್ಕೆ ಅನೇಕ ಕ್ರಮ ತೆಗೆದುಕೊಳ್ತಿದ್ದೇವೆ. ಮಾರ್ಚ್ 22ರಂದು ವಿಶ್ವ ಜಲ ದಿನ ಇದೆ. ಹೀಗಾಗಿ ಅಂದಿನಿಂದ ಒಂದು ತಿಂಗಳ ಕಾಲ ನೀರು ಉಳಿಸಿ ಅಭಿಯಾನ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು ಅಪಾರ್ಟ್‌ಮೆಂಟ್‌ಗಳಲ್ಲಿ ಕೆಲವರು ಯಾವುದೇ ಅನುಮತಿ ಇಲ್ಲದೇ ಬೋರ್‌ವೆಲ್ ಕೊರೆದಿದ್ದಾರೆ. ಅವರಿಗೆ ನೋಟೀಸ್ ಕೊಡುವ ಕೆಲಸ ಮಾಡಿದ್ದೇವೆ. 2014 ರಿಂದ ಇಲ್ಲಿವರೆಗೂ ನೀರಿನ ದರ ಏರಿಕೆ ಮಾಡಿಲ್ಲ. ಹೀಗಾಗಿ 1 ಪೈಸೆ ಆದರು ಜಾಸ್ತಿ ಮಾಡಬೇಕು ಅಂತ ತೀರ್ಮಾನ ಮಾಡಲಾಗಿದೆ. 6-7 ಪೈಸೆ ಜಾಸ್ತಿ ಮಾಡಬೇಕು ಅಂತ ಃಘಖಖಃ ಅವರು ಮನವಿ ಮಾಡಿದ್ರು. ನಾನು 1 ಪೈಸೆ ಏರಿಕೆ ಮಾಡಲು ಒಪ್ಪಿಗೆ ಕೊಟ್ಟಿದ್ದೇನೆ ಎಂದು ವಿವರಿಸಿದರು. ಈಗ ಬಿಬಿಎಂಪಿ ಬಜೆಟ್ ಮೀಟಿಂಗ್ ಮಾಡುತ್ತೇನೆ. ಆಗ ಬೆಂಗಳೂರಿನ ಎಲ್ಲಾ ಶಾಸಕರ ಸಭೆ ಕರೆದು ನಿರ್ಧಾರ ಮಾಡ್ತೀವಿ. ಅಂಡರ್ ಗ್ರೌಂಡ್ ವಾಟರ್ ಹೆಚ್ಚಿಸಲು ಎಲ್ಲಾ ಕೆರೆ ತುಂಬಿಸೋ ಯೋಚನೆ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು

## ಬೆಂಗಳೂರಿನಲ್ಲಿ ಅತ್ತೆ, ಮಾವನ ಮೇಲೆ ಲೇಡಿ ಡಾಕ್ಟರ್ ಹಲ್ಲೆ

• ಉದಯವಾಹಿನಿ, ಬೆಂಗಳೂರು,

ವಿಕ್ಟೋರಿಯಾ ಆಸ್ಪತ್ರೆ ವೈದ್ಯೆಯೊಬ್ಬರು ತನ್ನ ಅತ್ತೆ ಹಾಗೂ ಮಾವನ ಮೇಲೆ ಹಲ್ಲೆ ನಡೆಸಿರುವ ಆರೋಪ ಕೇಳಿ ಬಂದಿದೆ.

ಡಾ.ಪ್ರಿಯದರ್ಶಿನಿಯವರು, ಅನ್ನಪೂರ್ಣೇಶ್ವರಿ ಠಾಣಾ ವ್ಯಾಪ್ತಿಯಲ್ಲಿರುವ ನರಸಿಂಹಯ್ಯ (79) ಅವರ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ. ಹಲ್ಲೆ ಮಾಡುತ್ತಿರುವುದು ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದ್ದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಪ್ರಿಯದರ್ಶನಿಯವರ ಜೊತೆ ನರಸಿಂಹಯ್ಯ ಅವರ ಮಗ 2007 ರಲ್ಲಿ ಮದುವೆಯಾಗಿದ್ದರು. ದಂಪತಿಗೆ ಮಕ್ಕಳಿದ್ದು, ಕೆಲವು ದಿನಗಳಿಂದ ದಾಂಪತ್ಯದಲ್ಲಿ ಬಿರುಕು ಉಂಟಾಗಿತ್ತು. ಕೋರ್ಟ್‌ನಲ್ಲಿ ಡಿವೋರ್ಸ್ ಕೇಸ್ ಕೂಡ ನಡೆಯುತ್ತಿದೆ. ಇದರ ನಡುವೆಯೇ ವೈದ್ಯೆ ಮಾ.10ರಂದು 8:30ರ ಸುಮಾರಿಗೆ ಬಂದು ಅತ್ತೆ ಹಾಗೂ ಗಂಡನಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾರೆ. ಈ ವೇಳೆ ತಡೆಯಲು ಹೋದ ಮಾವ ನರಸಿಂಹಯ್ಯ ತಲೆಗೆ, ಬೆನ್ನಿಗೆ ಹೊಡೆದು ಹಲ್ಲೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ನರಸಿಂಹಯ್ಯ ಅವರು ನೀಡಿದ ದೂರಿನಡಿ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಇನ್ನೂ ಹಲ್ಲೆಗೊಳಗಾದ ನರಸಿಂಹಯ್ಯ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅವರ ಪತ್ನಿ ಕ್ಯಾನ್ಸರ್ ರೋಗಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

## ಸದಸ್ಯರ ಪ್ರಶ್ನೆಗಳಿಗೆ ಉತ್ತರ ಉಪಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ

• ಉದಯವಾಹಿನಿ, ಬೆಂಗಳೂರು,

ವಿಧಾನಸಭೆಯಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡದ ಸಂಬಂಧಿಸಿದ ಇಲಾಖಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಉಪಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ವಿಧಾನಸಭೆಯಲ್ಲಿಂದು ಹೇಳಿದರು. ಪ್ರಶ್ನೋತ್ತರ ಅವಧಿ ಮುಗಿದ ನಂತರ ಎದ್ದುನಿಂತ ಬಿಜೆಪಿಯ ಬಿ.ಪಿ. ಹರೀಶ್ ಅವರು, ಕಳೆದ 4 ಅಧಿವೇಶನಗಳಿಂದ ನಾನು ಒಂದು ಪ್ರಶ್ನೆ ಕೇಳಿದ್ದೆ. ಆ ಪ್ರಶ್ನೆಗೆ ಉತ್ತರ ಬಂದಿಲ್ಲ, ಹೀಗಾದರೆ ಹೇಗೆ ಎಂದು ಪ್ರಶ್ನಿಸಿದ್ದರು. ಇದಕ್ಕೆ ದನಿಗೂಡಿಸಿ ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಸನಗೌಡ ಪಾಟೀಲ್ ಯತ್ನಾಳ್ ಅವರು ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಬಾರದಿರುವುದು ಸರಿಯಲ್ಲ. ಉತ್ತರವನ್ನು ನೀಡಲೇಬೇಕು. ಇದೊಂದು ಗಂಭೀರ ವಿಚಾರ ಎಂದು ಹೇಳಿದರು. ಸದಸ್ಯರ ಮಾತಿಗೆ ಸ್ಪಂದಿಸಿದ ವಿಧಾನಸಭಾಧ್ಯಕ್ಷರು, ನಾನು ಇದನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಯಾವುದೇ ಸದಸ್ಯರು ಪ್ರಶ್ನೆ ಕೇಳಿದರೆ ಅದಕ್ಕೆ ಅಧಿಕಾರಿಗಳು ಉತ್ತರ ನೀಡಲೇಬೇಕು. ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಹಾಗಾಗಿಯೇ ಉಪಸಭಾಧ್ಯಕ್ಷರ ನೇತೃತ್ವದಲ್ಲಿ ಸಮಿತಿ ರಚಿಸಿ ಯಾವ ಯಾವ ಅಧಿಕಾರಿ ಉತ್ತರ ನೀಡಿಲ್ಲ ಎಂಬುದನ್ನು ಪತ್ತೆಹಚ್ಚಿ ಆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಸಭಾಧ್ಯಕ್ಷರು ಈ ರೀತಿ ಹೇಳಿದ ನಂತರವೂ ಮಾತು ಮುಂದುವರೆಸಿದ ಬಿ.ಪಿ. ಹರೀಶ್ ಅವರು ದಾವಣಗೆರೆಯಲ್ಲಿ ಕೆಐಎಡಿಬಿ 50 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. 20 ಎಕರೆಯಲ್ಲಿ ರೈತರು ಸಾಗುವಳಿ ಮಾಡುತ್ತಿದ್ದರು. ಅವರನ್ನು ಒಕ್ಕಲೆಬ್ಬಿಸಲಾಗಿದೆ. ಶಾಮನೂರು ಶುಗರ್ಸ್‌ಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಭೂಸ್ವಾಧೀನ ಮಾಡಲಾಗಿದೆ. ಪರಿಹಾರವನ್ನು ಕೊಟ್ಟಿಲ್ಲ ಎಂದು ಹೇಳಿದರು.

## ಮಹಿಳೆಗಾಗಿ ಯುವಕನ ಕೊಂದ ಮೂವರು ಹಂತಕರ ಸೆರೆ

• ಉದಯವಾಹಿನಿ, ಬೆಂಗಳೂರು,

ಚಿಕ್ಕಬಾಣಾವಾರ ಮತ್ತು ನೆಲಮಂಗಲ ರೈಲು ನಿಲ್ದಾಣಗಳ ಮದ್ಯೆ ರೈಲ್ವೇ ಹಳಿಯ ಮೇಲೆ ಶವವಾಗಿ ಪತ್ತೆಯಾದ ಯುವಕನ ಕೊಲೆ ಪ್ರಕರಣವನ್ನು ಬೇಧಿಸಿರುವ ರೈಲ್ವೆ ಪೊಲೀಸರು ಮಹಿಳೆ ಸೇರಿ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ದೊಡ್ಡೂರು ಗ್ರಾಮದ ಸತ್ಯವಾಣಿ ಅಲಿಯಾಸ್ ಸತ್ಯ (27) ಕೋನೇರಪಲ್ಲಿಯ ವರದರಾಜ್ ಅಲಿಯಾಸ್ ವರದಾ(23) ದಾಸನಪುರ ಹೋಬಳಿ ಆಲೂರಿನ ಶ್ರೀನಿವಾಸ.ಸಿ(25) ಬಂಧಿತ ಆರೋಪಿಗಳಾಗಿದ್ದಾರೆ. ಚಿಕ್ಕಬಾಣಾವಾರ ಮತ್ತು ನೆಲಮಂಗಲ ರೈಲು ನಿಲ್ದಾಣಗಳ ಮದ್ಯೆ ರೈಲ್ವೇ ಹಳಿಯ ಮೇಲೆ ಕಳೆದ ಫೆ.19 ರಂದು ಹೊಟ್ಟೆಯ ಭಾಗಕ್ಕೆ ಎರಡು ತುಂಡಾಗಿ ಬಿದ್ದಿದ್ದು, ಗಾಯಗಳನ್ನು ಪರಿಶೀಲಿಸಿ ನೋಡಲಾಗಿ, ತಲೆಗೆ, ಕುತ್ತಿಗೆಯ ಬಾಗಕ್ಕೆ, ಮತ್ತು ಕೈಗೆ ಗಾಯಗಳು ಯಾವುದೋ ಹರಿತವಾದ ಆಯುಧದಿಂದ ಹೊಡೆದಾಗ ಆಗಿರುವಂತೆ ಕಂಡುಬಂದಿದ್ದರಿಂದ, ಅಲ್ಲದೇ ಕೃತ್ಯ ಸ್ಥಳವನ್ನು ಪರಿಶೀಲನೆ ನಡೆಸಿದಾಗ ಅಲ್ಲಲ್ಲಿ ರಕ್ತದ ಕಲೆಗಳು ಕಂಡುಬಂದಿತ್ತು

# ಬೆಂಗಳೂರು ಜನತೆಗೆ ಮತ್ತೊಂದು ಬೆಲೆ ಏರಿಕೆ ಬಿಸಿ

## ನೀರಿನ ದರ ಹೆಚ್ಚಳದ ಬಗ್ಗೆ ಶೀಘ್ರದಲ್ಲೇ ಬೆಂಗಳೂರಿನ ಶಾಸಕರೊಂದಿಗೆ ಚರ್ಚೆ

• ಉದಯವಾಹಿನಿ, ಬೆಂಗಳೂರು,

ಈಗಾಗಲೇ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಹಾಗೂ ನಮ್ಮ ಮೆಟ್ರೋ ದರ ಏರಿಕೆಯಿಂದ ತತ್ತರಿಸಿರುವ ರಾಜಧಾನಿ ಬೆಂಗಳೂರಿನ ಜನತೆಗೆ ರಾಜ್ಯ ಸರ್ಕಾರ ಮತ್ತೊಂದು ದರ ಹೆಚ್ಚಳ ಶಾಕ್ ನೀಡಲು ಮುಂದಾಗಿದೆ.



2014 ರಿಂದ ಬೆಂಗಳೂರಿನಲ್ಲಿ ನೀರಿನ ದರ ಪರಿಷ್ಕರಿಸಲಾಗಿಲ್ಲ. ಹೀಗಾಗಿ ಬೆಂಗಳೂರು ಜಲ ಮಂಡಳಿಯು 7-8 ಪೈಸೆ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿದೆ. ಆದರೆ ರಾಜ್ಯ ಸರ್ಕಾರ ಪ್ರತಿ ಲೀಟರ್‌ಗೆ ಕೇವಲ ಒಂದು ಪೈಸೆ ಹೆಚ್ಚಳವನ್ನು ಪರಿಗಣಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ.

ನೀರಿನ ದರ ಹೆಚ್ಚಳದ ಬಗ್ಗೆ ಶೀಘ್ರದಲ್ಲೇ ಬೆಂಗಳೂರಿನ ಶಾಸಕರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ಇಂದು ವಿಧಾನ ಪರಿಷತ್ತಿನಲ್ಲಿ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್ ಎಂಎಲ್‌ಸಿ ರಾಮೋಜಿ ಗೌಡ ಅವರು ಬೆಂಗಳೂರಿನ ಪೂರ್ವ ಭಾಗಗಳಲ್ಲಿ ನೀರಿನ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದಾಗ ಡಿಸಿಎಂ ಈ ಹೇಳಿಕೆ ನೀಡಿದ್ದಾರೆ.

**ಬೇಸಿಗೆ ತೀವ್ರತೆ ಹೆಚ್ಚಾಗಿ ಉಷ್ಣಾಂಶ ಏರಿಕೆ**

2014 ರಿಂದ ನೀರಿನ ದರವನ್ನು ಹೆಚ್ಚಿಸಲಾಗಿಲ್ಲ. ಇದರಿಂದಾಗಿ ಃಘಖಖಃ ವಾರ್ಷಿಕ 1,000 ಕೋಟಿ ರೂ. ನಷ್ಟ ಅನುಭವಿಸುತ್ತಿದೆ. ಹೀಗಾಗಿ ನಾವು ಕನಿಷ್ಠ ಪಕ್ಷ ಒಂದು ಪೈಸೆಯಾದರೂ ನೀರಿನ ದರ ಏರಿಕೆ ಮಾಡಲು ತೀರ್ಮಾನಿಸಿದ್ದೇವೆ. ಮಂಡಳಿಯ ವಿದ್ಯುತ್ ಬಿಲ್ ಸಹ ಏರಿಕೆಯಾಗುತ್ತಲೇ ಇದೆ. ಹೀಗಾಗಿ ಮಂಡಳಿಯವರು 7-8 ಪೈಸೆ ಏರಿಕೆಗೆ ಮುಂದಾಗಿದ್ದರು. ನಾನು ಸದ್ಯಕ್ಕೆ 1 ಪೈಸೆಯಷ್ಟು ಹೆಚ್ಚಳ ಮಾಡಿ ಸಾಕು ಎಂದು ಹೇಳಿದ್ದೇನೆ ಎಂದರು.

ಬೇಸಿಗೆ ಆರಂಭವಾಗುತ್ತಿದ್ದು, ಬೆಂಗಳೂರಿನ ಪೂರ್ವ ಭಾಗದಲ್ಲಿ ಕುಡಿಯುವ ನೀರಿನ ಅಭಾವದಿಂದ ಖಾಸಗಿ ಟ್ಯಾಂಕರ್ ಗಳು ದುಪ್ಪಟ್ಟು ಹಣದ ಬೇಡಿಕೆ ಇಡುತ್ತಿದ್ದು, ಜನರಿಗೆ ಉಚಿತವಾಗಿ ನೀರು ಪೂರೈಸಬೇಕು ಹಾಗೂ ಕಾವೇರಿ ಸಂಪರ್ಕ ನೀಡಿರುವ ಮನೆಗಳಿಗೆ ಶೀಘ್ರ ನೀರು ಒದಗಿಸಬೇಕು ಎಂದು ರಾಮೋಜಿ ಗೌಡ ಹೇಳಿದರು.


**ಇದಕ್ಕೆ ಉತ್ತರಿಸಿದ ಡಿಕೆ ಶಿವಕುಮಾರ್ ಅವರು, ಶಿವರಾತ್ರಿ ಕಳೆದಿದ್ದು ಬೇಸಿಗೆ ತೀವ್ರತೆ ಹೆಚ್ಚಾಗಿ ಉಷ್ಣಾಂಶ ಏರಿಕೆಯಾಗಿದೆ. ಆದರೆ ಕಳೆದ ವರ್ಷ ಬಹಳ ಸಂಕಷ್ಟದ ಪರಿಸ್ಥಿತಿ ಎದುರಾಗಿತ್ತು. 7 ಸಾವಿರ ಕೊಳವೆ ಬಾವಿಗಳು ಬತ್ತಿದ್ದವು. ಹೀಗಾಗಿ ಖಾಸಗಿ ಟ್ಯಾಂಕರ್‌ಗಳನ್ನು ಪಾಲಿಕೆ ಸುಪರ್ದಿಗೆ ತೆಗೆದುಕೊಳ್ಳಲಾಗಿತ್ತು. ಇದೇ 22ರಂದು ಜಲಸಂರಕ್ಷಣಾ ದಿನವಾಗಿದ್ದು ಒಂದು ತಿಂಗಳ ಕಾಲ ಜಲ ಸಂರಕ್ಷಣೆ ವಿಚಾರವಾಗಿ ಜಾಗೃತಿ ಅಭಿಯಾನ ಮಾಡಲು ತೀರ್ಮಾನಿಸಿದ್ದೇವೆ. ಕಾವೇರಿ 5ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಿ ನೀರನ್ನು ಹೊರ ತರಲಾಗಿದೆ. 110 ಹಳ್ಳಿಗಳಿಗೆ ನೀರು ನೀಡಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.**

## ಕಸ ಅನ್ನೋದು ಮಾಫಿಯಾ, ಶಾಸಕರೇ ಬ್ಲ್ಯಾಕ್‌ಮೇಲ್ ಮಾಡ್ತಿದ್ದಾರೆ: ಡಿಕೆಶಿ

• ಉದಯವಾಹಿನಿ, ಬೆಂಗಳೂರು,

ಬೆಂಗಳೂರು ಕಸ ಅನ್ನೋದೇ ಒಂದು ಮಾಫಿಯಾ, ಶಾಸಕರೇ ನನಗೆ ಬ್ಲ್ಯಾಕ್‌ಮೇಲ್ ಮಾಡ್ತಾರೆ ಎಂದು ಡಿಸಿಎಂ ಡಿಕೆಶಿವಕುಮಾರ್ ವಿಧಾನ ಪರಿಷತ್‌ನಲ್ಲಿ ಆರೋಪಿಸಿದ್ದಾರೆ. ವಿಧಾನ ಪರಿಷತ್ ಕಲಾಪದ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ನಾಗರಾಜ್ ಯಾದವ್ ಬೆಂಗಳೂರು ಕಸದ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದರು.

ಇದಕ್ಕೆ ಉತ್ತರ ನೀಡಿದ ಡಿಸಿಎಂ, ಕಸ ಅನ್ನೋದು ಮಾಫಿಯಾ, ಕಸದ ವಿಚಾರವಾಗಿ ಬೆಂಗಳೂರು ಶಾಸಕರುಗಳೇ ಬ್ಲ್ಯಾಕ್‌ಮೇಲ್ ಮಾಡ್ತಿದ್ದಾರೆ. ಎಲ್ಲಾ ಪಾರ್ಟಿಯವರು ಇದ್ದಾರೆ. ಕಸ ವಿಲೇವಾರಿ 800 ಕೋಟಿ ರೂ. ಅಂತೆ. ನನಗೆ ಶಾಕ್ ಆಯ್ತು ಇದನ್ನು ಕೇಳಿ. ಮೂರು ದಿನಗಳಿಂದ ಮಹದೇವಪುರದಲ್ಲಿ ಕಸದ ಗಾಡಿ ಹಾಗೆ ನಿಂತಿದೆ ಎಂದು ತಿಳಿಸಿದರು. ಬೆಂಗಳೂರು ವ್ಯಾಪ್ತಿಯಿಂದಲೇ ಕಸ ಹೋಗಬೇಕು ಅನ್ನೋದು ನನ್ನ ಇಚ್ಛೆ. ಇದಕ್ಕಾಗಿ ಬೆಂಗಳೂರು ಹೊರಗೆ ಕಸ ಹಾಕಲು ಜಾಗ ಹುಡುಕುತ್ತಿದ್ದೇವೆ. ತಮಿಳುನಾಡು, ಅಂಧ್ರ ಪ್ರದೇಶ, ದೆಹಲಿಯಲ್ಲಿ ವ್ಯವಸ್ಥೆ ನೋಡಿದ್ದೇನೆ. ಕಸದ ಸಮಸ್ಯೆಗೆ ಪರಿಹಾರ ಮಾಡಲು ಕ್ರಮವಹಿಸುತ್ತೇನೆ ಎಂದರು. ಇದೇ ವೇಳೆ ಬಿಜೆಪಿ ಶಾಸಕ ರಾಮಮೂರ್ತಿ ಹೇಳಿಕೆ ಪ್ರಸ್ತಾಪ ಮಾಡಿದ ಡಿಕೆಶಿ, ಯಾರೋ ಮಹಾನ್ ವ್ಯಕ್ತಿ ಟೆಂಡರ್ ಕರೆಯದೇ ಹೋದ್ರು, ಡಿ.ಕೆ ಶಿವಕುಮಾರ್ 15 ಸಾವಿರ ಕೋಟಿ ಹೊಡೆದಿದ್ದಾನೆ ಎಂದು ಸುದ್ದಿಗೋಷ್ಠಿ ಮಾಡಿದ್ರು ಎಂದು ಶಾಸಕರ ವಿರುದ್ಧ ಕಿಡಿಕಾರಿದ್ದಾರೆ.



# ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಮೂವರ ಬಂಧನ

• ಉದಯವಾಹಿನಿ,ದೇವನಹಳ್ಳಿ

ಡ್ರಗ್ಸ್ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ದೇವನಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಷೇಧಿತ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ.

ಪೊಲೀಸರ ಪ್ರಕಾರ, ಅವರಿಬ್ಬರೂ ಪೊಲೀಸ್ ಠಾಣೆ ವ್ಯಾಪ್ತಿಯ ಎಂಆರ್ ಲೇಔಟ್‌ನ ರಾಣಿ ಕ್ರಾಸ್ ಬಳಿ ದ್ವಿಚಕ್ರ ವಾಹನದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದರು. ಈ ಮಾಹಿತಿ ಆಧಾರದ ಮೇಲೆ, ಠಾಣೆಯಲ್ಲಿ ಓಆಕಖ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿ, ದಾಳಿ ನಡೆಸಿ, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ 3 ಕೆಜಿ 200 ಗ್ರಾಂ ಗಾಂಜಾ, ಎರಡು ಮೊಬೈಲ್ ಫೋನ್‌ಗಳು, ಒಂದು ತೂಕದ ಯಂತ್ರ ಮತ್ತು ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಒಟ್ಟು ಮೌಲ್ಯ 1,80,000 ರೂ. ಎಂದು ಅಂದಾಜಿಸಲಾಗಿದೆ.



ವಿಚಾರಣೆ ಸಮಯದಲ್ಲಿ, ಬಂಧಿತ ಇಬ್ಬರು ಆರೋಪಿಗಳು ತಮಗೆ ಮಾರಾಟ ಮಾಡಲು ಗಾಂಜಾ ಪೂರೈಸುತ್ತಿದ್ದ ಮತ್ತೊಬ್ಬ ಸಹಚರನ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಮಾಹಿತಿ ಮೇರೆಗೆ ಮಾರ್ಚ್ 8 ರಂದು ನ್ಯೂ ಗುರಪ್ಪನಪಳ್ಳಿಯ ಬಿಟಿಎಂ ಲೇಔಟ್‌ನಲ್ಲಿರುವ ಮನೆಯಿಂದ ಮತ್ತೋರ್ವನನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತನನ್ನು ವಿಚಾರಿಸಿದಾಗ ಪ್ರಕರಣದಲ್ಲಿ ತಾನು ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದು, ಅಪರಿಚಿತ ವ್ಯಕ್ತಿಯಿಂದ ಕಡಿಮೆ ಬೆಲೆಗೆ ನಿಷೇಧಿತ ಗಾಂಜಾವನ್ನು ಖರೀದಿಸಿರುವುದಾಗಿ ಹೇಳಿದ್ದಾನೆ.ಮಾರ್ಚ್ 9 ರಂದು, ಮೂವರು ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಕಾರ್ಯಾಚರಣೆಯನ್ನು ಈಶಾನ್ಯ ವಿಭಾಗದ ಉಪ ಪೊಲೀಸ್ ಆಯುಕ್ತ ವಿಜೆ ಸುಜೀತ್, ಐಪಿಎಸ್, ದೇವನಹಳ್ಳಿ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ನವೀನ್ ಕುಮಾರ್ ಮತ್ತು ದೇವನಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರಾಕೇಶ್ ಸಿ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ಬುಧವಾರ ಮುಂಜಾನೆ ಬೆಂಗಳೂರಿನ ಕೋಣನಕುಂಟೆ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡಕಲ್ಲಸಂದ್ರದ ನಾರಾಯಣನಗರದ ಜೋಡಿ ರಸ್ತೆಯಲ್ಲಿ ಕಾರಿನಲ್ಲಿ ನಿಷೇಧಿತ ಮಾದಕ ದ್ರವ್ಯಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳು ಸಿಕ್ಕಿಬಿದ್ದಿದ್ದಾರೆ. ಖಚಿತ ಮಾಹಿತಿ ಪಡೆದ ನಂತರ ಪೊಲೀಸರು ಸ್ಥಳಕ್ಕೆ ಧಾವಿಸಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

**1.8 ಲಕ್ಷ ರೂ. ಮೌಲ್ಯದ ಮಾದಕ ವಸ್ತು ವಶ**

## ಬಿಜೆಪಿ ಬಣ ವೀರರ ಲಿಂಗಾಯತ ಸಭೆಗಳಿಗೆ ಹೈಕಮಾಂಡ್ ಬ್ರೇಕ್

• ಉದಯವಾಹಿನಿ, ಬೆಂಗಳೂರು,

ರಾಜ್ಯ ಬಿಜೆಪಿ ಗೊಂದಲ ಶಮನಕ್ಕೆ ಕೊನೆಗೂ ಹೈಕಮಾಂಡ್ ಮುಂದಾಗಿದೆ. ಬಿಜೆಪಿಯಲ್ಲಿ ನಡೆಯುತ್ತಿದ್ದ ಲಿಂಗಾಯತ ವರ್ಸಸ್ ಲಿಂಗಾಯತ ಸಮರಕ್ಕೆ ಹೈಕಮಾಂಡ್ ಬ್ರೇಕ್ ಹಾಕಿದೆ. ಈ ಬೆನ್ನಲ್ಲೇ ಎರಡೂ ಬಣಗಳ ಸಭೆಗಳಿಗೂ ವಿರಾಮ ಸಿಕ್ಕಿದೆ. ಇನ್ನೊಂದು ಕಡೆ ಮೊನ್ನೆಯಷ್ಟೇ ದೆಹಲಿಗೆ ಹೋಗಿದ್ದ ಅರವಿಂದ ಲಿಂಬಾವಳಿ ನೇರವಾಗಿ ಅಮಿತ್ ಶಾ ಅವರನ್ನ ಭೇಟಿ ಮಾಡಿ ವಿಜಯೇಂದ್ರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದರು. ಇತ್ತೀಚೆಗೆ ರಾಜ್ಯಕ್ಕೆ ಬಂದಿದ್ದ ಅಮಿತ್ ಶಾ ಇದೀಗ ಬಿಜೆಪಿ ಮನೆ ರಿಪೇರಿಗೆ ಕೈ ಹಾಕಿದ್ದಾರೆ. ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿದ್ದ ಲಿಂಗಾಯತ ವರ್ಸಸ್ ಲಿಂಗಾಯತ ಸಮರಕ್ಕೆ ಅಮಿತ್ ಶಾ ಬ್ರೇಕ್ ಹಾಕಿದ್ದಾರೆ. ದೆಹಲಿಯಿಂದಲೇ ಖಡಕ್ ಸಂದೇಶ ರವಾನಿಸಿರುವ ಅಮಿತ್ ಷಾ, ಪ್ರತ್ಯೇಕ ಸಭೆಗಳನ್ನು ನಡೆಸದಂತೆ ಎಚ್ಚರಿಕೆ ನೀಡಿದ್ದಾರೆ. ಅಮಿತ್ ಶಾ ಎಚ್ಚರಿಕೆ ಬೆನ್ನಲ್ಲೇ ಮಾಜಿ ಸಿಎಂ ಬಿ.ಎಸ್ .ಯಡಿಯೂರಪ್ಪ ಡ್ಯಾಮೇಜ್ ಕಂಟ್ರೊಲ್‌ಗೆ ಮುಂದಾಗಿದ್ದಾರೆ. ಲಿಂಗಾಯತ ಅಸ್ತ್ರ ಮುಂದಿಟ್ಟುಕೊಂಡು ಯಾವುದೇ ಕಾರಣಕ್ಕೂ ಭವಿಷ್ಯದಲ್ಲಿ ಸಭೆ ಹಾಗೂ ಶಕ್ತಿ ಪ್ರದರ್ಶನ ನಡೆಸದಂತೆ ಮಾಜಿ ಶಾಸಕ ರೇಣುಕಾಚಾರ್ಯಗೆ ಬಿಎಸ್‌ವೈ ಅವರು ಖಡಕ್ ಸಂದೇಶ ನೀಡಿದ್ದಾರೆ. ಬುಧವಾರ ರಾತ್ರಿ ತಮ್ಮ ಧವಳಗಿರಿ ನಿವಾಸಕ್ಕೆ ರೇಣುಕಾಚಾರ್ಯ ಅವರನ್ನು ಕರೆಸಿಕೊಂಡು ಮಾತಾಡಿರುವ ಯಡಿಯೂರಪ್ಪ ಅವರು, ವಿಜಯೇಂದ್ರ ಬೆಂಬಲಿಸಿ ಲಿಂಗಾಯತರು ಯಾವುದೇ ಸಭೆ ನಡೆಸದಂತೆ ಸೂಚನೆ ನೀಡಿದ್ದಾರೆ. ಯಡಿಯೂರಪ್ಪ ಸೂಚನೆ ಹಿನ್ನೆಲೆಯಲ್ಲಿ ಸದ್ಯಕ್ಕೆ ಸುಮ್ಮನಿದ್ದರೂ ಸಮುದಾಯದ ಮಹಾಸಂಗಮ ಸಮಾವೇಶ ನಡೆಸುವುದಾಗಿ ರೇಣುಕಾಚಾರ್ಯ ತಿಳಿಸಿದ್ದಾರೆ.

# ತುಂಗಭದ್ರಾ ಅಣೆಕಟ್ಟಿನಿಂದ ವ್ಯರ್ಥವಾಗುತ್ತಿರುವ ನೀರನ್ನು

## ಸಮರ್ಪಕವಾಗಿ ಬಳಸಿಕೊಳ್ಳಲು ಸರ್ಕಾರ ಕ್ರಮ: ಡಿಕೆಶಿ

• ಉದಯವಾಹಿನಿ, ಬೆಂಗಳೂರು,

ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿ ವ್ಯರ್ಥವಾಗುತ್ತಿರುವ 27 ಟಿಎಂಸಿ ಅಡಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಕಾಂಗ್ರೆಸ್‌ನ ಬಸನಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದ ನೀರಿನ ಸಂಗ್ರಹ ಕಡಿಮೆಯಾಗಿದೆ. 132 ಟಿಎಂಸಿ ಅಡಿ ಸಾಮರ್ಥ್ಯದ ಜಲಾಶಯ 100 ಟಿಎಂಸಿ ಅಡಿಗೆ ಇಳಿದೆ. ಈ ಕೊರತೆ ನೀಗಿಸಲು ಕೊಪ್ಪಳ ಜಿಲ್ಲೆಯ ನವಲಿ ಹತ್ತಿರ ಸಮತೋಲನ ಜಲಾಶಯ ನಿರ್ಮಿಸಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು. ನಮ್ಮ ಅಧಿಕಾರಿಗಳು ಸಮತೋಲಿತ ಅಣೆಕಟ್ಟು ನಿರ್ಮಾಣ ಮಾಡದೆ ಪರ್ಯಾಯವಾದ ಆಲೋಚನೆ ತಿಳಿಸಿದ್ದಾರೆ. ನಮ್ಮ ಪಾಲಿನ ನೀರನ್ನು ಪಂಪ್ ಮಾಡಿಕೊಂಡು ಬಳಸಿಕೊಳ್ಳುವ ಬಗ್ಗೆ ಚಿಂತನೆ ಮಾಡಲಾಗುತ್ತಿದೆ. ಇದರಿಂದ ಮೂರು ರಾಜ್ಯಗಳಿಗೆ ಉಪಯೋಗವಾಗಲಿದೆ. ನಮಗೆ ಶೇ.65 ಅವರಿಗೆ ಶೇ.35 ರಷ್ಟು ಉಪಯೋಗವಾಗಲಿದೆ. ಸಮತೋಲಿತ ಅಣೆಕಟ್ಟು ನಿರ್ಮಾಣ, ಹೊಸ ಪ್ರಸ್ತಾವನೆಗಳನ್ನು ಕೇಂದ್ರಕ್ಕೆ ಸಲ್ಲಿಸುತ್ತೇವೆ. ನಾವು ನಮ್ಮ ಪಾಲಿನ ನೀರು ಉಳಿಸಿಕೊಳ್ಳಲು ಬದ್ಧವಾಗಿದ್ದೇವೆ ಎಂದು ತಿಳಿಸಿದರು. ಇದೇ 18 ರಂದು ಕೇಂದ್ರ ಜಲಶಕ್ತಿ ಸಚಿವರು ಪೆನ್ನಾರ್ ನದಿ ವಿಚಾರವಾಗಿ ನಮ್ಮನ್ನು, ತಮಿಳುನಾಡಿನವರನ್ನು ಚರ್ಚೆಗೆ ಕರೆದಿದ್ದಾರೆ. ಅಂದು ನವಲಿ ಅಣೆಕಟ್ಟು ನಿರ್ಮಾಣ ಪರ್ಯಾಯ ಪರಿಹಾರಗಳ ಬಗ್ಗೆ ಕೇಂದ್ರ ಸಚಿವರ ಬಳಿ ಚರ್ಚೆ ಮಾಡ ಲಾಗುವುದು. ಈ ವಿಚಾರವಾಗಿ ಆಂಧ್ರ ಮತ್ತು ತೆಲಂಗಾಣ ಮುಖ್ಯಮಂತ್ರಿಗಳ ಬಳಿ ಮಾತನಾಡಿ, ಪತ್ರ ಕೂಡ ಬರೆದಿದ್ದೇನೆ. ರಾಜಸ್ಥಾನದ ಉದಯಪುರಲ್ಲಿ ನಡೆದ ಸಮಾವೇಶದಲ್ಲಿ ಆಂಧ್ರಪ್ರದೇಶ ಹಾಗೂ ತೆಲಂಗಾಣದ ಜಲಸಂಪನ್ಮೂಲ ಸಚಿವರ ಜತೆ ಚರ್ಚೆ ಮಾಡಿದ್ದು, ಆಂಧ್ರ ಪ್ರದೇಶ ಮುಖ್ಯಮಂತ್ರಿಗಳಿಗೆ ದೂರವಾಣಿ ಕರೆ ಮಾಡಿ ಈ ಯೋಜನೆ ಬಗ್ಗೆ ಪ್ರಾತ್ಯಕ್ಷಿಕೆ ತೋರಿಸಿ ಚರ್ಚೆ ಮಾಡಲು ಸಮಯ ನೀಡಿ ಎಂದು ಕೇಳಿದ್ದೆ. ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿರುವ ಕಾರಣಕ್ಕೆ ಸುಮಾರು 25 ರಿಂದ 30 ಟಿಎಂಸಿ ನೀರು ನಮಗೆ ಸಿಗದೆ ವ್ಯರ್ಥವಾಗುತ್ತಿದೆ. ಸಮತೋಲಿತ ಅಣೆಕಟ್ಟು ನಿರ್ಮಾಣಕ್ಕೆ ಸುಮಾರು 15 ಸಾವಿರ ಎಕರೆ ಭೂಮಿ ಅಗತ್ಯವಿದೆ. ಈ ಬಗ್ಗೆ ಈಗಾಗಲೇ ತಾಂತ್ರಿಕ ವರದಿಗಳನ್ನು ತಯಾರಿಸಲಾಗಿದೆ. ಈ ಬಗ್ಗೆ ಡಿಪಿಆರ್ ಕೂಡ ತಯಾರಾಗಿದೆ. ಇದನ್ನು ತುಂಗಭದ್ರಾ ಬೋರ್ಡ್ ಹಾಗೂ ಆಂಧ್ರ, ತೆಲಂಗಾಣ ರಾಜ್ಯಗಳಿಗೂ ಕಳಿಸಲಾಗಿದೆ ಎಂದರು.



**ಸುಮಾರು 15 ಸಾವಿರ ಎಕರೆ ಭೂಮಿ ಅಗತ್ಯ**

**ಎರಡು ರಾಜ್ಯಗಳ ಜತೆ ಚರ್ಚೆ ಮಾಡಿದ ನಂತರ ತುಂಗಭದ್ರಾ ಮಂಡಳಿ ಮುಂದೆ ಈ ಯೋಜನೆಗಳ ವರದಿ ಸಲ್ಲಿಸಲಾಗುವುದು ಎಂದು ಹೇಳಿದ್ದೆ. ಆಂಧ್ರಪ್ರದೇಶ ಸಿಎಂ ಅವರು ಈ ವಿಚಾರವಾಗಿ ಚರ್ಚೆ ಮಾಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.**

# ತೆಂಗುಗೆ ಬಿಳಿರೋಗ ಬಾಧೆ ಮುಕ್ತಕ್ಕೆ ಕ್ರಮ

• ಉದಯವಾಹಿನಿ, ಬೆಂಗಳೂರು,

ರಾಜ್ಯದಲ್ಲಿ ತೆಂಗು ಬೆಳೆಗೆ ಬಿಳಿ ಹುಳ ರೋಗ ಬಾಧೆಯಿಂದ ಮುಕ್ತಗೊಳಿಸಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಬಿಳಿಹುಳ ಬಾಧೆ ನಿವಾರಣೆಗೆ ತೆಂಗು ಅಭಿವೃದ್ಧಿ ಮಂಡಳಿಗೆ ಸುಮಾರು 15 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ವಿಧಾನಸಭೆಯಲ್ಲಿ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಸುರೇಶ್‌ಬಾಬು ರವರ ಪ್ರಶ್ನೆಗೆ ತೋಟಗಾರಿಕಾ ಸಚಿವರ ಪರವಾಗಿ ಉತ್ತರ ನೀಡಿದ ಅವರು,



ಉದಯವಾಹಿನಿ ಚಿತ್ರ

ರಾಜ್ಯದ 14 ಜಿಲ್ಲೆಗಳ ಸುಮಾರು 1,48,448 ಹೆಕ್ಟೇರ್ ಪ್ರದೇಶದಲ್ಲಿನ ತೆಂಗು ಬೆಳೆಗೆ ಬಿಳಿ ನೊಣದ ಕೀಟ ಬಾಧೆ ಕಾಡುತ್ತಿದ್ದು, ಈ ಕೀಟ ಬಾಧೆಯನ್ನು ತೆಂಗಿನ ಮರಗಳ ನೈಸರ್ಗಿಕ ರೋಗ-ನಿರೋಧಕ ಶಕ್ತಿಯನ್ನು ವೃದ್ಧಿಸುವ ಮೂಲಕ ಸಮಗ್ರ ಪೋಷಕಾಂಶಗಳನ್ನು ಒದಗಿಸಿ ಕೀಟ ಮತ್ತು ರೋಗಗಳ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ತೆಂಗು ಅಭಿವೃದ್ಧಿ ಮಂಡಳಿಗೆ 15 ಕೋಟಿ ರೂ.ಗಳನ್ನು ಒದಗಿಸಲಾಗಿದೆ ಎಂದರು.

ಈ ಯೋಜನೆಯಡಿ ಪ್ರಾತ್ಯಕ್ಷಿತೆ ತಾಕುಗಳನ್ನು ನಿರ್ವಹಿಸಲು ಪ್ರತಿ ಹೆಕ್ಟೇರ್‌ಗೆ 35 ಸಾವಿರ ರೂ.ಗಳನ್ನು 2 ವರ್ಷಗಳಲ್ಲಿ ವಿನಿಯೋಗಿಸಲಾಗುತ್ತಿದೆ. ಕೀಟನಾಶಕದ ಬಗ್ಗೆಯೂ ರೈತರಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಅವರು ಹೇಳಿದರು.

ಇದಕ್ಕೂ ಪ್ರಶ್ನೆ ಕೇಳಿದ್ದ ಸದಸ್ಯ ಸುರೇಶ್‌ಬಾಬು ಅವರು, ಬಿಳಿ ಹುಳು ರೋಗಬಾಧೆಯಿಂದ ತೊಂದರೆಗೆ ಒಳಗಾಗಿರುವ ತೆಂಗು ಬೆಳೆಗಾರರಿಗೆ ಪ್ರತಿ ಎಕರೆಗೆ 50 ಸಾವಿರ ಪರಿಹಾರ ನೀಡುವಂತೆ ಒತ್ತಾಯಿಸಿದ್ದರು.

ಸದಸ್ಯರಾದ ಷಡಕ್ಷರಿ ಮತ್ತು ಸುರೇಶ್‌ಗೌಡ ಇವರುಗಳು ಬಿಳಿಹುಳ ರೋಗಬಾಧೆಗೆ ಪರಿಹಾರ ಕಂಡುಕೊಳ್ಳಲು ಕೇಂದ್ರ ತೆಂಗು ಮಂಡಳಿ ಸಂಶೋಧನೆ ನಡೆಸುವ ಸಂಬಂಧವೂ ಕ್ರಮ ಆಗಬೇಕು ಎಂದು ಒತ್ತಾಯಿಸಿದ್ದರು.

**ತೆಂಗು ಮರಗಳಿಗೆ ಬಿಳಿ ಹುಳ ರೋಗ ತಗುಲಿರುವ ಹಿನ್ನೆಲೆಯಲ್ಲಿ ಸದಸ್ಯರು ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಈ ಬಗ್ಗೆ ಇದನ್ನು ಸಂಬಂಧಿಸಿದ ಸಚಿವರ ಗಮನಕ್ಕೆ ತಂದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಬಿಳಿ ಹುಳ ರೋಗಬಾಧೆಯಿಂದ ಬೆಳೆ ನಷ್ಟವಾಗಿರುವ ತೆಂಗು ಬೆಳೆಗಾರರಿಗೆ ಪರಿಹಾರ ನೀಡುವ ಬಗ್ಗೆಯೂ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ ಎಂದು ಅವರು ಹೇಳಿದರು.**

# ಪೋಕ್ಸೋ ಪ್ರಕರಣ: ಬಿಎಸ್‌ವೈ ಖುದ್ದು ಹಾಜರಾತಿಗೆ ತಡೆ

## ಪ್ರಕರಣ ರದ್ದು ಕೋರಿ ಬಿಎಸ್ ಯಡಿಯೂರಪ್ಪ ಅವರು ಹೈಕೋರ್ಟಿಗೆ ಅರ್ಜಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು,

ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ವಿರುದ್ಧ ಪೋಕ್ಸೋ ಪ್ರಕರಣಕ್ಕೆ ಸಂಬಂಧಪಟ್ಟಂತೆ ಖುದ್ದು ಹಾಜರಾಗುವಂತೆ ನೀಡಿದ್ದ ವಿಶೇಷ ನ್ಯಾಯಾ;ಲಯದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಪ್ರಕರಣ ರದ್ದು ಕೋರಿ ಬಿಎಸ್ ಯಡಿಯೂರಪ್ಪ ಅವರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದರು. ಬಳಿಕ ಮಾರ್ಚ್ 15 ರಂದು ಖುದ್ದಾಗಿ ಹಾಜರಾಗುವಂತೆ ಬೆಂಗಳೂರಿನ 1 ನೇ ತ್ವರಿತಗತಿ ನ್ಯಾಯಾಲಯ ಸಮನ್ಸ್ ನೀಡಿತ್ತು. ಈ ಸಮನ್ಸ್ ಪ್ರಶ್ನಿಸಿ ಬಿಎಸ್ ಯಡಿಯೂರಪ್ಪ ಹೈಕೋರ್ಟ್ ಮೆಟ್ಟಿಲು ಏರಿದ್ದರು ಹೈಕೋರ್ಟ್ ಅರ್ಜಿ ವಿಚಾರಣೆ ನಡೆಸಿ, ಕಾಗ್ನಿಜೆನ್ಸ್ ಸಮನ್ಸ್ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಈ ಮೂಲಕ ಬಿಎಸ್ ಯಡಿಯೂರಪ್ಪ ಅವರಿಗೆ ಮಧ್ಯಂತರ ರಿಲೀಫ್ ಸಿಕ್ಕಿದೆ.

ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಿಎಂ ಬಿಎಸ್‌ವೈಗೆ ಮಾರ್ಚ್ 15 ರಂದು ಖುದ್ದಾಗಿ ಹಾಜರಾಗುವಂತೆ ಬೆಂಗಳೂರಿನ 1 ನೇ ತ್ವರಿತಗತಿ



ಉದಯವಾಹಿನಿ ಚಿತ್ರ

ನ್ಯಾಯಾಲಯ ಸಮನ್ಸ್ ನೀಡಿತ್ತು. ಈ ಒಂದು ಸಮನ್ಸ್ ಪ್ರಶ್ನಿಸಿ ಬಿಎಸ್ ಯಡಿಯೂರಪ್ಪ ಹೈಕೋರ್ಟ್ ಮೆಟ್ಟಿಲು ಏರಿದ್ದರು ಇದೀಗ ಅಲ್ಲದೇ ಬಿಎಸ್ ಯಡಿಯೂರಪ್ಪ ಅವರ ಖುದ್ದು ಹಾಜರಾತಿಗೂ ಹೈಕೋರ್ಟ್ ವಿನಾಯಿತಿ ನೀಡಿದೆ. ಬಿಎಸ್ ಯಡಿಯೂರಪ್ಪ ಅರ್ಜಿಯ ಬಗ್ಗೆ ವಿವರವಾದ ವಿಚಾರಣೆ ಅಗತ್ಯವಿದೆ ಎಂದ ಹೈಕೋರ್ಟ್ ಪೋಕ್ಸೋ ಪ್ರಕರಣದಲ್ಲಿ ಕಾಗ್ನಿಜೆನ್ಸ್ ಸಮನ್ಸ್ ಗೆ ತಡೆ ನೀಡಿ ಆದೇಶ ನೀಡಿದೆ. ಹಾಗಾಗಿ ಬಿಎಸ್ ಯಡಿಯೂರಪ್ಪ ಅವರಿಗೆ ಮಧ್ಯಂತರ ರಿಲೀಫ್ ಸಿಕ್ಕಂತಾಗಿದೆ. ಪ್ರಕರಣದಲ್ಲಿ ಸಂತ್ರಸ್ತೆ 17 ವರ್ಷದ ಬಾಲಕಿ. ಫೆಬ್ರವರಿ 2, 2024ರಂದು ತನ್ನ ತಾಯಿಯೊಂದಿಗೆ ಮಾಜಿ ಮುಖ್ಯಮಂತ್ರಿಯನ್ನು ಅವರ ನಿವಾಸದಲ್ಲಿ ಭೇಟಿಯಾಗಲು ಹೋಗಿದ್ದಳು. ಸಂತ್ರಸ್ತೆ 7 ವರ್ಷದವಳಿದ್ದಾಗ ಆಕೆಯ ಸಂಬಂಧಿಕರೊಬ್ಬರು ಆಕೆಯ ಮೇಲೆ ಅತ್ಯಾಚಾರವೆಸಗಿದ್ದು, ಈ ಹಿಂದಿನ ಅತ್ಯಾಚಾರ ಪ್ರಕರಣದ ತನಿಖೆಯನ್ನು ವೇಗಗೊಳಿಸಲು ಅವರ ಸಹಾಯವನ್ನು ತಾಯಿ ಕೋರಿದ್ದರು.

ಆ ಸಂದರ್ಭದಲ್ಲಿ ಬಿಎಸ್‌ವೈ ತಮ್ಮ ಮನೆಯ ಕೊಠಡಿಯಲ್ಲಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಮಾರ್ಚ್ 14 ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ವಿಚಾರಣಾ ನ್ಯಾಯಾಲಯ ಬಂಧನ ವಾರಂಟ್ ಹೊರಡಿಸಿತ್ತು. ನಂತರ ಕರ್ನಾಟಕ ಹೈಕೋರ್ಟ್ ಜೂನ್ 14ರಂದು ಬಂಧನಕ್ಕೆ ತಡೆಯಾಜ್ಞೆ ನೀಡಿತ್ತು.

**ಪ್ರಕರಣದ ಹಿನ್ನೆಲೆ**

**ಸಹಾಯ ಕೋರಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ನಿವಾಸಕ್ಕೆ ತಾಯಿ ಮಗಳು ಭೇಟಿ ನೀಡಿದ್ದ ಸಂದರ್ಭದಲ್ಲಿ ಅಪ್ರಾಪ್ತ ಪುತ್ರಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಬಾಲಕಿಯ ತಾಯಿ 2024 ಮಾರ್ಚ್ 14ರಂದು ದೂರು ನೀಡಿದ್ದರು. ಈ ದೂರು ಆಧರಿಸಿ ಬಿಎಸ್ ವೈ ವಿರುದ್ಧ ಪೋಕ್ಸೋ ಕೇಸ್ ದಾಖಲಾಗಿತ್ತು. ನಂತರ ಈ ಪ್ರಕರಣವನ್ನು ಸರ್ಕಾರ ಸಿಐಡಿ ತನಿಖೆಗೆ ವಹಿಸಿತ್ತು. ಸಿಐಡಿ ಈ ಕುರಿತು ಚಾರ್ಜ್‌ಶೀಟ್ ಸಲ್ಲಿಸಿದೆ. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಸೆಕ್ಷನ್ 8 (ಲೈಂಗಿಕ ದೌರ್ಜನ್ಯ), ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354ಂ (ಲೈಂಗಿಕ ಕಿರುಕುಳ) ಮತ್ತು 214 ಅಡಿಯಲ್ಲಿ ಆರೋಪ ಪಟ್ಟಿ ಸಲ್ಲಿಸಿದೆ.**

## ಶೇ. 40ರಷ್ಟು ಕಮಿಷನ್: ನಾಗಮೋಹನ್ ದಾಸ್ ಆಯೋಗದಿಂದ ರಾಜಕೀಯ ಪ್ರೇರಿತ ವರದಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು,

ಬಿಜೆಪಿ ಅಧಿಕಾರಾವಧಿಯಲ್ಲಿ ಸಿವಿಲ್ ಕಾಮಗಾರಿಗಳಲ್ಲಿ ಶೇ. 40ರಷ್ಟು ಕಮಿಷನ್ ಪಡೆದ ಆರೋಪದ ಕುರಿತು ತನಿಖೆ ನಡೆಸಲು ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಎಚ್ ಎನ್ ನಾಗಮೋಹನ್ ದಾಸ್ ಆಯೋಗವನ್ನು ಕಾಂಗ್ರೆಸ್ ಪ್ರೇರಿತ ಆಯೋಗ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಗುರುವಾರ ಟೀಕಿಸಿದ್ದಾರೆ.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗವು 20 ಸಾವಿರ ಪುಟಗಳ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಸಲ್ಲಿಸಿದೆ. ಈ ಕುರಿತು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಆರ್. ಅಶೋಕ್, ಸಂಪೂರ್ಣ ರಾಜಕೀಯ ವರದಿಯನ್ನು ಸಲ್ಲಿಸಲಾಗಿದೆ.

ವಿಚಾರಣೆಯ ಮಾನದಂಡಗಳೇನು ಯಾವ ದಾಖಲೆಗಳನ್ನು ಪರಿಶೀಲಿಸಲಾಗಿದೆ ಇವೇ ನಿರ್ಣಾಯಕ ಅಂಶಗಳಾ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಯಾವಾಗಲೂ ಅವರನ್ನು ನೇಮಿಸುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ನಾಗಮೋಹನ್ ದಾಸ್ ಖಾಯಂ ಆಗಿದ್ದು, ಎಲ್ಲಾ ವಿಚಾರಣೆಗಳನ್ನು ಅವರಿಗೆ ವಹಿಸಲಾಗಿದೆ ಎಂದು ಅಶೋಕ್ ಟೀಕಿಸಿದರು.



ಉದಯವಾಹಿನಿ ಚಿತ್ರ

**ಶೇ.40 ಕಮಿಷನ್ ಆರೋಪ**

**ನ್ಯಾ. ನಾಗಮೋಹನ ದಾಸ್ ಸಮಿತಿಯಿಂದ 20,000 ಪುಟಗಳ ವರದಿ ಸಲ್ಲಿಕೆ; ವಿಪಕ್ಷದ ವಿರುದ್ಧ ಸರ್ಕಾರಕ್ಕೆ ಸಿಕ್ತು ಹೊಸ ಅಸ್ತ್ರನಾಗಮೋಹನ್ ದಾಸ್ ಕಾಂಗ್ರೆಸ್ ಪರವಾಗಿ ವರದಿ ಸಲ್ಲಿಸುವ ಅಭ್ಯಾಸವಿದೆ. ಇದು ರಾಜಕೀಯವಲ್ಲದೆ ಬೇರೇನೂ ಅಲ್ಲ. ಈ ಆಯೋಗವು ತನಿಖಾ ಸಂಸ್ಥೆಯಲ್ಲ. ಶೇ.40 ರಷ್ಟು ಕಮಿಷನ್ ನಡೆದಿಲ್ಲ ಎಂದು ಲೋಕಾಯುಕ್ತರು ಈಗಾಗಲೇ ವರದಿ ನೀಡಿದೆ ಎಂದು ಅಶೋಕ್ ತಿಳಿಸಿದರು.**

ಅಂತರಾಳದಿಂದ..
EDITORIAL

# ಬೆಂಗಳೂರಿನ ಆಡಳಿತಕ್ಕೆ ಹೊಸ ಮಸೂದೆ: ಜನರ ಅಗತ್ಯಕ್ಕೆ ಆದ್ಯತೆ ನೀಡಿದರೆ ಯಶಸ್ಸು

ಬೆಂಗಳೂರು ಮಹಾನಗರದ ಆಡಳಿತದಲ್ಲಿ ಇರುವ ಸವಾಲುಗಳನ್ನು ನಿರ್ವಹಿಸುವ ಉದ್ದೇಶದಿಂದ ವಿಧಾನಮಂಡಲದ ಜಂಟಿ ಸಮಿತಿಯ ಪರಿಶೀಲನೆ ಬಳಿಕ ಅಂತಿಮಗೊಳಿಸಿರುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಗೆ ವಿಧಾನ ಮಂಡಲದ ಉಭಯ ಸದನಗಳು ಅಂಗೀಕಾರ ನೀಡಿವೆ. ಬೆಂಗಳೂರಿನ ಆಡಳಿತ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ತರುವ ಪ್ರಸ್ತಾವ ಈ ಮಸೂದೆಯಲ್ಲಿ ಇದೆ. ಈಗ ಅಸ್ತಿತ್ವದಲ್ಲಿ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಪರ್ಯಾಯವಾಗಿ ಏಳಕ್ಕಿಂತ ಹೆಚ್ಚಿಲ್ಲದಂತೆ ನಗರಪಾಲಿಕೆಗಳನ್ನು ರಚಿಸಲು ಅವಕಾಶ ಕಲ್ಪಿಸುವ ಪ್ರಸ್ತಾವವೂ ಮಸೂದೆಯಲ್ಲಿ ಇದೆ. ಮಹಾನಗರದ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ, ವ್ಯವಸ್ಥೆಯನ್ನು ಇನ್ನಷ್ಟು ಪಾರದರ್ಶಕ ಜನಸ್ನೇಹಿಯನ್ನಾಗಿ ಮಾಡಿ. ಆಡಳಿತವನ್ನು ಮತ್ತಷ್ಟು ಉತ್ತರದಾಯಿ ಆಗಿಸುವ ಉದ್ದೇಶವು ಮಸೂದೆಗೆ ಇದೆ. ಮಸೂದೆಯಲ್ಲಿ ಇರುವ ಈ ಅಂಶಗಳೆಲ್ಲ ಬಹಳ ಮುನ್ನೋಟ ಇರುವಂಥವು ಎಂದು ಅದರ ಸಮರ್ಥಕರು ಹೇಳುತ್ತಿದ್ದಾರೆ. ಆದರೆ, ಬೆಂಗಳೂರಿಗೆ ಅಗತ್ಯವಿರುವ ಆಮೂಲಾಗ್ರ ಬದಲಾವಣೆಗಳನ್ನು ಈ ಮಸೂದೆಯು ಕಾರ್ಯರೂಪಕ್ಕೆ ತರುವುದೇ ಎಂಬ ಪ್ರಶ್ನೆ ಇದೆ. ನಗರದಲ್ಲಿನ ನೀರು ಪೂರೈಕೆ, ಸಾರ್ವಜನಿಕ ಸಾರಿಗೆ, ವಿದ್ಯುತ್, ಮೂಲಸೌಕರ್ಯ ಮತ್ತು ಇತರ ನಾಗರಿಕ ಸೌಲಭ್ಯಗಳ ನಿರ್ವಹಣೆಗೆ ರಚನೆಯಾಗಿರುವ ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು ಪರಸ್ಪರ ಸಮನ್ವಯ ಇಲ್ಲದೆ ಕೆಲಸ ಮಾಡುತ್ತಿವೆ ಎಂಬ ದೂರುಗಳು ದಶಕಗಳಿಂದಲೂ ಇವೆ. ಇವು ಸರ್ಕಾರದ ನಿಯಂತ್ರಣದಲ್ಲಿರುವ, ರಾಜಕೀಯ ಪ್ರಭಾವಕ್ಕೆ ಹೊರತಾಗಿಲ್ಲದ ಸಂಸ್ಥೆಗಳು ಎಂಬುದೂ ನಿಜ. ಸಮನ್ವಯವನ್ನು ಉತ್ತಮಪಡಿಸಲು ಹಾಗೂ ದಕ್ಷತೆಯನ್ನು ಹೆಚ್ಚು ಮಾಡಲು ಈ ಎಲ್ಲಾ ನಿಗಮ, ಮಂಡಳಿ, ಪ್ರಾಧಿಕಾರಗಳನ್ನು ಒಂದೇ ಚೌಕಟ್ಟಿನ ಒಳಗೆ ತರುವ ಪ್ರಸ್ತಾವವು ಮಸೂದೆಯಲ್ಲಿದೆ. ಆದರೆ, ಹೊಸ ವ್ಯವಸ್ಥೆಯಲ್ಲಿ ಹೇಳಿರುವ ಆಡಳಿತದ ಸ್ವರೂಪವು ಹಲವು ಪ್ರಶ್ನೆಗಳನ್ನು ಮೂಡಿಸುತ್ತದೆ. ಮುಖ್ಯಮಂತ್ರಿಯವರು ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ನೇತೃತ್ವ ಹೊಂದಿರುತ್ತಾರೆ. ಹೀಗಿರುವಾಗ, 30 ತಿಂಗಳ ಅಧಿಕಾರ ಅವಧಿಯ ಮೇಯರ್‌ಗಳು ಹೆಸರಿಗೆ ಮಾತ್ರ ಕೌನ್ಸಿಲ್‌ನಲ್ಲಿ ಮುಖ್ಯಸ್ಥರಾಗಿರುತ್ತಾರೆ ಎಂಬುದರಲ್ಲಿ ಅನುಮಾನ ಇಲ್ಲ. ಇದರಿಂದಾಗಿ ಸ್ಥಳೀಯ ಸ್ವಯಂ ಆಡಳಿತದ ಪರಿಕಲ್ಪನೆ ದುರ್ಬಲಗೊಳ್ಳುತ್ತದೆ, ಜಿಬಿಎ ವ್ಯವಸ್ಥೆಯಿಂದ ಪಾಲಿಕೆಗಳ ಸ್ವಾಯತ್ತೆಗೆ ಧಕ್ಕೆ ಉಂಟಾಗುತ್ತದೆ. ರಾಜ್ಯ ಸರ್ಕಾರವು ಮಹಾನಗರದ ಆಡಳಿತದ ಮೇಲೆ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬೀರುತ್ತಿರುತ್ತದೆ. ಜಿಬಿಎ ಆಡಳಿತ ವ್ಯವಸ್ಥೆಯ ಸ್ವರೂಪದ ಬಗ್ಗೆ ಇನ್ನಷ್ಟು ಸ್ಪಷ್ಟತೆಯ ಅಗತ್ಯ ಇದೆ. ಮೇಯರ್‌ಗೆ ಐದು ವರ್ಷಗಳ ಅಧಿಕಾರ ಅವಧಿ ಇರಬೇಕು, ಮೇಯರ್ ಅವರನ್ನು ನೇರವಾಗಿ ಆಯ್ಕೆ ಮಾಡಬೇಕು ಎಂಬ ಬಹುಕಾಲದ ಬೇಡಿಕೆಗೆ ಮಸೂದೆಯು ಸ್ಪಂದಿಸಿಲ್ಲ. ಜಿಬಿಎಯಲ್ಲಿ ಸದಸ್ಯರಾಗಿರುವ ಸ್ಥಳೀಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಸಂಸದರಿಗೆ ಕೌನ್ಸಿಲ್‌ನಲ್ಲಿ ಮತದಾನದ ಹಕ್ಕು ಕಲ್ಪಿಸುವ ಪ್ರಸ್ತಾವ ಕೂಡ ಒಂದು ಲೋಪ. ಈ ಬಗೆಯ ವ್ಯವಸ್ಥೆಯನ್ನು ಈ ಹಿಂದೆ ಬಳಸಿಕೊಂಡು, ಕೌನ್ಸಿಲ್‌ನಲ್ಲಿ ನಿರ್ದಿಷ್ಟ ಪಕ್ಷದ ಪರವಾಗಿ ಕೃತಕ ಬಹುಮತವನ್ನು ಸೃಷ್ಟಿಸಿ, ಜನರ ಆಯ್ಕೆಯಲ್ಲದ ವ್ಯಕ್ತಿಯನ್ನು ಮೇಯರ್ ಸ್ಥಾನಕ್ಕೆ ತಂದ ನಿದರ್ಶನಗಳು ಇವೆ. ಶಾಸನಸಭೆಗಳ ಸದಸ್ಯರ ಕರ್ತವ್ಯವು ಬೇರೆಯದೇ ಆಗಿರುತ್ತದೆ, ನಗರದ ಆಡಳಿತದಲ್ಲಿ ಅವರು ತೊಡಗಿಸಿಕೊಳ್ಳಬೇಕಾದ ಅಗತ್ಯ ಇಲ್ಲ. ಶಾಸನಸಭೆಗಳ ಸದಸ್ಯರನ್ನು ಕೌನ್ಸಿಲ್ ಸಭೆಗಳಿಗೆ ಆಹ್ವಾನಿಸಬಹುದು. ಆದರೆ ಅವರಿಗೆ ಕೌನ್ಸಿಲ್‌ನಲ್ಲಿ ಮತದಾನದ ಅಧಿಕಾರ ನೀಡುವುದು ಸ್ಥಳೀಯ ಆಡಳಿತದ ಪರಿಕಲ್ಪನೆಗೆ ವಿರುದ್ಧವಾದುದು. ಈ ಮಸೂದೆಯಲ್ಲಿ ಒಳಿತೂ ಇದೆ ಕೆಡುಕೂ ಇದೆ. ವಿಧಾನ ಪರಿಷತ್ತು ಮತ್ತು ವಿಧಾನಸಭೆಯಲ್ಲಿ ಇದರ ಬಗ್ಗೆ ರಾಜಕೀಯ ಚೌಕಟ್ಟು ಮೀರಿದ ವಿಸ್ತೃತ ಚರ್ಚೆ ಆಗಬೇಕಿತ್ತು. ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷಗಳೇ ಕಳೆದಿವೆ. ಈಗ ಈ ಮಸೂದೆಯನ್ನು ನೆಪವಾಗಿ ಇರಿಸಿಕೊಂಡು ಚುನಾವಣೆಯನ್ನು ಇನ್ನಷ್ಟು ಮುಂದಕ್ಕೆ ಹಾಕುವ ಸಾಧ್ಯತೆಯೂ ಇಲ್ಲದಿಲ್ಲ. ಮಹಾನಗರದ ಆಡಳಿತವನ್ನು ಇನ್ನಷ್ಟು ಸುಗಮವಾಗಿಸುವುದು ಎಲ್ಲರ ಗುರಿಯಾಗಬೇಕೇ ವಿನಾ ಇಲ್ಲಿನ ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಸಂಕೀರ್ಣವಾಗಿಸುವ ಕೆಲಸವನ್ನು ಯಾರೂ ಮಾಡಬಾರದು. ಮಹಾನಗರದ ಆಡಳಿತ ವ್ಯವಸ್ಥೆಯಲ್ಲಿ ಇರುವ ಲೋಪಗಳನ್ನು ಸರಿಪಡಿಸಲು ಈ ಮಸೂದೆಯು ಒಂದು ಅವಕಾಶ ಕಲ್ಪಿಸುತ್ತದೆ. ಆದರೆ, ತಮ್ಮ ರಾಜಕೀಯ ಲಾಭಕ್ಕಿಂತಲೂ ಬೆಂಗಳೂರಿನ ಜನರಿಗೆ ಆಗಬೇಕಿರುವ ಲಾಭಗಳಿಗೆ ಹೆಚ್ಚಿನ ಗಮನವನ್ನು ನೀಡಲು ಸಾಧ್ಯವಾದರೆ ಮಾತ್ರ ಈ ಮಸೂದೆಯು ಯಶಸ್ಸು ಕಾಣುತ್ತದೆ.

## ಜಯನಗರ ರಾಯರ ಮಠದಲ್ಲಿ ಹೋಳಿ ಹುಣ್ಣಿಮೆ ಪೌರ್ಣಮಿ ಪ್ರಯುಕ್ತ ಶ್ರೀ ಸತ್ಯನಾರಾಯಣ ವ್ರತ ಪೂಜೆ

• ಉದಯವಾಹಿನಿ ಬೆಂಗಳೂರು


ಉದಯವಾಹಿನಿ ಚಿತ್ರ

ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಇಂದು ಪೌರ್ಣಮಿ ಪ್ರಯುಕ್ತ ಜಯನಗರ 5ನೇ ಬಡಾವಣೆಯ ನಂಜನ ಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಬೆಳಗ್ಗೆ ರಾಯರ ಬೃಂದಾವನಕ್ಕೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ ಪೂಜೆಯನ್ನು ಆಚಾರ್ಯರಾದ ಶ್ರೀ ನಂದಕಿಶೋರ್ ಆಚಾರ್ಯರು, ರಾಘವೇಂದ್ರ ಕಟ್ಟಿ ಆಚಾರ್ಯರು ಸ್ವಾಮಿಯ ಭಾವಚಿತ್ರಕ್ಕೆ ಮಹಾ ಮಂಗಳಾರತಿಯನ್ನು ಸಲ್ಲಿಸಿದರು. ತದನಂತರ ಭಕ್ತರು ತೀರ್ಥ ಪ್ರಸಾದವನ್ನು ಸ್ವೀಕರಿಸಿ ಈ ವಿಶೇಷ ವೈಭವದ ಪೂಜಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ದೇವರಲ್ಲಿ ಹಾಗೂ ರಾಯರಲ್ಲಿ ಪ್ರಾರ್ಥನೆಯೊಂದಿಗೆ ಪೂಜೆಯಲ್ಲಿ ಪಾಲ್ಗೊಂಡು ಶ್ರೀ ಸತ್ಯನಾರಾಯಣ ಸ್ವಾಮಿಯ ಕೃಪೆಗೆ ಪಾತ್ರರಾದರು.

## ರಾಮಾಯಣ



ಶ್ರೀ ರಾಮನ ವನವಾಸಕ್ಕಾಗಿ ಲಕ್ಷ್ಮಣನ ಕೋಪ


• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನಿನಗೆ ಪಟ್ಟವನ್ನು ಕಟ್ಟುವುದಾಗಿ ಯತ್ನಮಾಡಿ ಪಟ್ಟಾಭಿಷೇಕ ಮುಹೂರ್ತಸಮಯದಲ್ಲಿ ದಶರಥರಾಯನು ಪೂರ್ವದಲ್ಲಿ ಕೈಕೇಯಾದೇವಿಗೆ ಎರಡು ವರಗಳನ್ನು ಕೊಟ್ಟಿದ್ದನೆಂದು ಪಟ್ಟಾಭಿಷೇಕಸಮಯದಲ್ಲಿ ಆ ದೇವಿಯು ಒಂದು ವರದಿಂದ ನಿನಗೆ ವನವಾಸ ವನ್ನೂ ಮತ್ತೊಂದು ವರದಿಂದ ಭರತನಿಗೆ ಪಟ್ಟಾಭಿಷೇಕವನ್ನೂ ಬೇಡಿಕೊಂಡಳೆಂದೂ ಪ್ರಸಂಗವನ್ನು ಹುಟ್ಟಿಸಬೇಕೆಂದು ಸಂಕೇತ ಮಾಡಿಕೊಂಡಿದ್ದಾರೆ. ಆದ್ದರಿಂದ ನಿನ್ನ ಪಟ್ಟಾಭಿಷೇಕವನ್ನು ನಿಲ್ಲಿಸಿದರು. ದಶರಥರಾಯನು ಪೂರ್ವದಲ್ಲಿ ವರಗಳನ್ನು ಕೊಟ್ಟಿದ್ದ ಪಕ್ಷದಲ್ಲಿ ನಿನಗೆ ಪಟ್ಟಾಭಿಷೇಕವನ್ನು ಮಾಡುವುದಾಗಿ ಹೇಳುವನೆ ಹಾಗೆ ಹೇಳಿದ ಬಳಿಕ ನಿನಗೆ ವನವಾಸ, ಭರತನಿಗೆ ಪಟ್ಟಾಭಿಷೇಕ ಎಂಬವರಗಳನ್ನು ಕೊಡುವುದು ಉಚಿತವೆ ನಿನ್ನ ಹೊರತಾಗಿಮತ್ತೊಬ್ಬನಿಗೆ ಪಟ್ಟಾಭಿಷೇಕವನ್ನು ಮಾಡುವುದು ಲೋಕವಿರುದ್ಧವಾದ ಕೃತ್ಯ ಆದಕಾರಣ, ಶ್ರೀರಾಮ ಈ ಲೋಕನಿಂದಿತವಾದ ಕೃತ್ಯವನ್ನು ನಾನು ಸಹಿಸುವವನಲ್ಲ. ನಿನ್ನ ಕಾರ್ಯಕ್ಕೆ ವಿಘ್ನಬಂದರೂ ವಿಘ್ನವನ್ನು ಮಾಡಿದ ದಶರಥರಾಯನ ಮಾತನ್ನು ಮೀರಬಾರದೆಂಬ ಬುದ್ಧಿಯು ನಿನಗೆ ಹೇಗೆ ಬಂದಿತೋ ನಾನರಿಯೆನು. ಇದು ನನಗೆ ಸಂಮತವಲ್ಲ, ದಶರಥರಾಯನ ಮಾತನ್ನು ಮೀರಬಾರದೆಂಬುದು ನಿನಗೆ ಉಚಿತವಲ್ಲ, ನೀನು ಕಾರ್ಯಸಾಧನೆಯಲ್ಲಿ ಸಮರ್ಥ ನಾಗಿದ್ದರೂ. ವಶನಾಗಿ ಪಾಪಿಯಾದ ದಶರಥರಾಯನ ಲೋಕವಿರುದ್ಧವಾದ ಮಾತನ್ನು ಪರಿ ಪಾಲಿಸಬೇಕೆಂದಿದ್ದೀಯೆ. ಈಗ ನೀನು ಹೇಡಿತನದಿಂದ ಅಂಗೀಕರಿಸಿದರೂ ಈ ಕಾರವು ನನಗೆ ಸಂಮತನಲ್ಲ, ಈ ಕೃತ್ಯವು ಧರ್ಮವಾದರೂ ರಾಜನೀತಿಗೆ ವಿರುದ್ಧವಾದ್ದರಿಂದ ನನ್ನ ಮನಸ್ಸಿಗೆ ಮಃಖವನ್ನುಂಟುಮಾಡುತ್ತದೆ. ಶತ್ರುವಾಗಿ ಅತಿಕಾಮುಕನಾಗಿರುವ ತಂದೆಯ ಮಾತನ್ನು ಮೀರಬಾರದೆಂದು ಹೇಗೆ ನುಡಿಯುತ್ತೀಯೆ ಈ ಕಾರ್ಯವನ್ನು ನಮ್ಮ ತಾಯಿತಂದೆಗಳು ಮಾಡಲಿಲ್ಲವೆಂದೂ ದೈವಗತಿಯಿಂದ ಬಂದುದೆಂದೂ ನೀನು ಹೇಳುತ್ತೀಯೆ. ನಾನು ದೈವಗತಿಯನ್ನು ಉಪೇಕ್ಷೆ ಮಾಡುವನಲ್ಲದೆ ಅದರ ಪ್ರಕಾರ ನಡೆಯುವವನಲ್ಲ. ಪರಾಕ್ರಮಿಗಳಾದ ಮಹಾತ್ಮರು ತಮ್ಮ ಪುರುಷಸಾಮರ್ಥ್ಯದಿಂದ ದೈವಗತಿಯನ್ನು ಲೆಕ್ಕಿಸದೆ ತಮ್ಮ ಕಾರ್ಯಕ್ಕೆ ಹಾನಿಯಾದರೂ ವ್ಯಥೆಪಡರು. ನನ್ನ ಪುರುಷಸಾಮರ್ಥ್ಯವನ್ನೂ ದೈವಸಾಮರ್ಥ್ಯವನ್ನೂ ಲೋಕದಲ್ಲಿರುವ ಜನರು ನೋಡಿದರೆ ದೈವಗತಿ ಮನುಷ್ಯಯತ್ನ ಇವುಗಳಿಗಿರುವ ವ್ಯತ್ಯಾಸಗಳು ಪ್ರಕಟವಾಗುವುವು. ಅವರು ಮನುಷ್ಯ ಸಾಮರ್ಥ್ಯದಿಂದ ದೈವಗತಿಯು ಅಳಿಸಿಹೋಗುವುದೆಂಬುದನ್ನು ಕಣ್ಣಾರೆ ನೋಡಲಿ. ನಿನ್ನ ಪಟ್ಟಾಭಿಷೇಕವು ದೈವಗತಿಯಿಂದ ವಿಘ್ನವಾಯಿತೆಂಬ ಪಕ್ಷದಲ್ಲಿ, ಮಹಾಬಲವುಳ್ಳ ಮದ್ದಾನೆಯು ಅಂಕುಶವನ್ನು ಕೊಡಹಿಕೊಂಡು ಪೆಟ್ಟನ್ನು ಲೆಕ್ಕಿಸದೆ ಮನಸ್ಸು ಬಂದಂತೆ ಸಂಚರಿಸುವ ಹಾಗೆ ನಾನು ನನ್ನ ಸಾಮರ್ಥ್ಯದಿಂದ ಅಡ್ಡಬರುವ ದೈವವನ್ನಾದರೂ ನಿಲ್ಲಿಸುತ್ತೇನೆ. ಇಂದ್ರಾದಿ ಲೋಕಪಾಲಕರಾದರೂ ಮೂರುಲೋಕದವರಾದರೂ ನಿನ್ನ ಪಟ್ಟಾಭಿಷೇಕವನ್ನು ನಿಲ್ಲಿಸಲಾರರು.

ಮುಂದುವರಿಯುವುದು...

## ಕಣ್ಮರೆಯಾದ ಕಥಾನಾಯಕಿ


✍ ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ




ಹೆಚ್.ಸಿ.ಧನಂಜಯರವರು ಶಿಕ್ಷಕರಿಗೆ ಇರಬಹುದಾದ ಎಲ್ಲಾ ಜ್ಞಾನ ಸಂಪತ್ತು ಹೊಂದಿರುವ ಗಾಯಕ, ಯೋಗಪಟು, ಕವಿ, ಕಥೆಗಾರ, ಸಾಹಿತ್ಯ ಸಂಸ್ಕೃತಿ ಪ್ರಿಯ, ಕಲೆಯ ಆರಾಧಕ, ಸ್ನೇಹ ಪ್ರಿಯ.

ಮನೆಗೆ ಮಲ್ಲಿಗೆಯಾಗಿ ಕಷ್ಟಗಳಿಗೆ ಕಲ್ಲಾಗಿ ದೀನ ದುರ್ಬಲರಿಗೆ ಬೆಲ್ಲ ಸಕ್ಕರೆಯಾಗುವ ಗುಣ ಹೊಂದಿದ್ದಾರೆ

ಶ್ರೀಯುತರು ಈಗಾಗಲೇ ಪ್ರೇಮಲೀಲಾ ಎಂಬ ಅಪಾರ ಮೆಚ್ಚುಗೆಯ ಕವನ ಸಂಕಲನ ಹಾಗೂ ಸ್ಫೂರ್ತಿ ಸೌರಭ ಎಂಬ ಚಿಂತನ ಬರಹಗಳನ್ನು ಒಳಗೊಂಡ ಕೃತಿಯನ್ನು ಹೊರತಂದು ಈಗ ಕಣ್ಮರೆಯಾದ ಕಥಾನಾಯಕಿ ಎಂಬ ಕಾದಂಬರಿಯನ್ನು ಹೊರತರುತ್ತಿರುವುದು ಸಂತಸದ ವಿಷಯವಾಗಿದೆ.

ಪೋಲೋ ಆಸ್ಪತ್ರೆಯ ಉದ್ಯೋಗಿ ಶ್ರೀಕಾಂತ್, ಅವನ ತಾಯಿ ಅನ್ನಪೂರ್ಣ, ಸಾಲಿಗ್ರಾಮದ ಅರ್ಚನಾ, ಭರತನಾಟ್ಯ ಪ್ರವೀಣೆ ಸುನಿಧಿ ವಾಸುದೇವನ್, ಶ್ರೀಕಾಂತನ ಪತ್ನಿ ಜ್ಯೋತಿ, ಸಿನಿಮಾ ನಿರ್ದೇಶಕ ಸತ್ಯನಾರಾಯಣರಾವ್, ಸುಬ್ಬಾರೆಡ್ಡಿಯ ಮಗ ಸುಖಿತ್, ಇವನ ಆಪ್ತಸಹಾಯಕ ಫಯಾಜ್, ಸ್ತ್ರೀ ರೋಗ ತಜ್ಞೆ ಇಂದ್ರಾಣಿ, ಜ್ಯೋತಿ ಲಕ್ಷ್ಮಿಯ ತಾಯಿ ಕಂಪ್ಯೂಟರ್ ಸಹಾಯಕಿ ಆಶಾ, ಹೋಟೇಲ್ ಉದ್ಯಮಿ ರಮೇಶ್, ಅವರ ಪತ್ನಿ ಗೀತಾ, ಹಾಗೂ ಅವರ ಮಗ ಡಾ ಸುಹಾಸ್ ಈ ಪಾತ್ರಗಳನ್ನೊಳಗೊಂಡ ಕಾದಂಬರಿ ವರ್ಣರಂಜಿತವಾಗಿದೆ. ಕಾದಂಬರಿಯಲ್ಲಿ ಬರುವ ಸಾಂಸ್ಕೃತಿಕ ನಗರಿ ಮೈಸೂರಿನ ಚಿತ್ರಣ ಸಾಲಿಗ್ರಾಮದ ಅರ್ಚನಾ ಎಂಬ ವಿದ್ಯಾರ್ಥಿನಿ ಮಾಡೆಲಿಂಗ್ ಆಗುವ ಆಸೆ. ಹಾಗೂ ಕಿರುತೆರೆಯಲ್ಲಿ ಅಭಿನಯಿಸಿ ನಟಿಯಾಗಿ ಮುಂದೆ ಬರುವ ಆಕಾಂಕ್ಷೆ ಜ್ಯೋತಿಲಕ್ಷ್ಮಿಯ ರೂಪದ ವರ್ಣನೆ ರಮೇಶ್ ರವರ ಮಗ ಡಾ ಸುಹಾಸ್‌ಗಾಗಿ ಕಟ್ಟಿಸಿದ್ದ ಐಶಾರಾಮಿ ಮನೆಯ ವರ್ಣನೆ. ಈ ಕಾದಂಬರಿಯಲ್ಲಿ ಬರುವ ಅರ್ಚನಾ ಪಾತ್ರವು ದುರಂತ ಅಂತ್ಯವಾಗುವುದು ಎಲ್ಲವೂ ಮನೋಜ್ಞವಾಗಿ ಕಟ್ಟಿಕೊಡಲಾಗಿದೆ. ಈ ಕಾದಂಬರಿಯು ಧನಂಜಯರವರ ಕರ್ತೃತ್ವಶಕ್ತಿಗೆ ಸಾಕ್ಷಿಯಾಗಿದೆ. ಶ್ರೀಕಾಂತ್‌ನ ಹೆಂಡತಿ ಜ್ಯೋತಿ ಮದುವೆಯಾಗಿ ಕೆಲವೇ ತಿಂಗಳುಗಳಲ್ಲಿ ಪ್ರತ್ಯೇಕ ಮನೆ ಮಾಡಬೇಕೆಂದು ತವರು ಮನೆ ಸೇರುತ್ತಾಳೆ. ಕೆಲವು ತಿಂಗಳು ಶ್ರೀಕಾಂತನಿಂದ ದೂರವಾಗಿದ್ದ ಜ್ಯೋತಿ ಗರ್ಭಿಣಿಯಾಗಿ ತನ್ನ ಗಂಡನಾದ ಶ್ರೀಕಾಂತ್ ಕೆಲಸ ಮಾಡುವ ಆಸ್ಪತ್ರೆಗೆ ಬಂದಾಗ ವಿಷಯ ತಿಳಿದ ಶ್ರೀಕಾಂತ್ ಹಾಗೂ ಅನ್ನಪೂರ್ಣಮ್ಮನವರಿಗೆ ಆಗುವ ಸಂತೋಷ ಹಾಗೂ ಚಾಮುಂಡೇಶ್ವರಿ ದೇವಿಗೆ ತುಪ್ಪದ ದೀಪ ಹಚ್ಚಿ ದೇವರನ್ನು ಅನ್ನಪೂರ್ಣಮ್ಮನವರು ಪ್ರಾರ್ಥಿಸುತ್ತಾರೆ. ಕೆಲವು ದಿನ ಕಳೆದ ಮೇಲೆ ಅರ್ಚನಾಳು ಶ್ರೀಕಾಂತನ ಮನೆಗೆ ಬರುತ್ತಾಳೆ. ಹೆರಿಗೆ ನೋವಿನಿಂದ ಆಸ್ಪತ್ರೆಗೆ ಸೇರಿದ ಜ್ಯೋತಿಯು ದುರಾದೃಷ್ಟವಶಾತ್ ತಾಯಿ, ಮಗು ಮರಣ ಹೊಂದುತ್ತಾರೆ. ಈ ವಿಷಯ ಕೇಳಿದ ಶ್ರೀಕಾಂತನ ತಾಯಿ ಹೃದಯಘಾತದಿಂದ ಸಾವನ್ನಪ್ಪುತ್ತಾರೆ. ಹೆಂಡತಿ, ಮಗು, ತಾಯಿ ಎಲ್ಲರನ್ನು ಕಳೆದುಕೊಂಡ ಶ್ರೀಕಾಂತನು ಖಿನ್ನತೆಗೆ ಒಳಗಾಗುತ್ತಾನೆ. ಅರ್ಚನಾ ಶ್ರೀಕಾಂತನ ಸಹಾಯ ಪಡೆದು ನಿರ್ದೇಶಕ ಸತ್ಯನಾರಾಯಣ ಹಾಗೂ ಸುಬ್ಬಾರೆಡ್ಡಿ ಧಾರಾವಾಹಿ ನಿರ್ಮಾಪಕರ ಕೃಪೆಯಿಂದ ಕಥಾನಾಯಕಿ ಧಾರವಾಹಿಯಲ್ಲಿ ನಾಯಕಿಯಾಗಿ ನಟಿಸುವ ಅವಕಾಶ ಗಿಟ್ಟಿಸುತ್ತಾಳೆ. ಅತಿ ಕಡಿಮೆ ಕಾಲದಲ್ಲಿ ಹೆಚ್ಚು ಖ್ಯಾತಿಯನ್ನು ಗಳಿಸಿ ಮಹಿಳಾ ಅಭಿಮಾನಿಗಳನ್ನು ಹೊಂದುತ್ತಾಳೆ.

> ಸಿನಿಮಾ, ಕಿರುತೆರೆಗಳಲ್ಲಿ ನಟಿಯಾಗಿ ಜನಪ್ರಿಯತೆ ಪಡೆಯುವುದು ಅಷ್ಟು ಸುಲಭವಲ್ಲ ಸುಖದ ಹಾಸಿಗೆ ಅಲ್ಲವೇ ಅಲ್ಲ ಅಲ್ಲಿ ಬಹಳಷ್ಟು ಕಷ್ಟ-ನಷ್ಟ ಮುಳ್ಳುಕಲ್ಲಿನ ಸೋಲುಗಳನ್ನು ಅನುಭವಿಸಬೇಕಾಗುತ್ತದೆ. ಸಾಧನೆಗೆ, ಶ್ರದ್ಧೆ, ಧೈರ್ಯ, ಸಹನೆ, ಇರಬೇಕಾಗುತ್ತದೆ. ನಟಿಯಾದವಳು ತನ್ನ ಕಾರ್ಯ ಸಾಧನೆಗೆ ಯಾವ ತ್ಯಾಗಕ್ಕೂ ಸಿದ್ಧರಿರಬೇಕು ತಮ್ಮ ಶೀಲವನ್ನು ಕಾಪಾಡಿಕೊಳ್ಳುವುದು ತುಂಬಾ ಕಷ್ಟದ ವಿಷಯವೇ ಆಗುತ್ತದೆ.

ಧಾರಾವಾಹಿಯ ನಿರ್ಮಾಪಕ ಸುಬ್ಬಾರೆಡ್ಡಿಯವರ ಒಬ್ಬನೇ ಮಗ ಸುಖಿತ್ ಎಂಬುವನು ಅರ್ಚನಾಳ ಜನಪ್ರಿಯತೆಯನ್ನು ಗಮನಿಸಿ ಅವಳು ಬೇರೆ ಧಾರಾವಾಹಿಗಳಿಗೆ ನಟಿಸಲು ಹೋಗದಂತೆ ತನ್ನ ಹಿಡಿತದಲ್ಲಿರಿಸಿಕೊಳ್ಳಲು ದುಬಾರಿ ಉಡುಗೊರೆ ಕೊಡಿಸುತ್ತಾ ತನ್ನ ಬುಟ್ಟಿಗೆ ಹಾಕಿಕೊಂಡು ಈಕೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಾನೆ. ಪ್ರೀತಿ ಪ್ರೇಮ ನಾಟಕವಾಡುತ್ತಾ ಸರಸಲ್ಲಾಪದ ಜೊತೆ ದೈಹಿಕ ಸಂಪರ್ಕ ಬೆಳೆಸಿ ಬಿಡುತ್ತಾನೆ.

> ಈ ಬೆಳವಣಿಗೆ ಗಮನಿಸುತ್ತಿದ್ದ ಸುಖಿತ್ ಆಪ್ತ ಸಹಾಯಕ ಫಯಾಜ್‌ನು ಇವರ ಏಕಾಂತದ ಕ್ಷಣಗಳನ್ನು ರಹಸ್ಯವಾಗಿ ವೀಡಿಯೋ ಚಿತ್ರೀಕರಣ ಮಾಡಿಕೊಂಡು ಬ್ಲಾಕ್ ಮೇಲ್ ಮಾಡುತ್ತಾನೆ. ಇದರಿಂದ ಕೋಪಗೊಂಡ ಸುಖಿತ್ ಫಯಾಜ್‌ನನ್ನು ಇರಿದು ಕೊಲ್ಲುತ್ತಾನೆ. ಸುಖಿತ್ ತಾನೇ ಪೋಲೀಸರಿಗೆ ಶರಣಾಗುತ್ತಾನೆ. ಅರ್ಚನಾಳ ಅಕ್ರಮ ಸಂಬಂಧವು ಬಯಲಾಗಿ ಯಾವ ಜನ ಈಕೆಯನ್ನು ಆರಾಧಿಸುತ್ತಿದ್ದರೋ ಅವರೇ ಹೂ, ಛೀ. ಎಂದು ಉಗಿದು ಉಪ್ಪು ಹಾಕುವುದು ಈ ಎಲ್ಲಾ ವಿಚಾರಗಳನ್ನು ತಿಳಿದ ಅರ್ಚನಾ ತಾಯಿ ತಂದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಎಲ್ಲೂ ಮನ್ನಣೆ ದೊರೆಯದ ಅನೈತಿಕತೆಯ ಕಳಂಕ ಅಂಟಿಸಿಕೊಂಡ ಅರ್ಚನಾ ಶೀಲವನ್ನು ಕಳೆದುಕೊಂಡು ಹುಚ್ಚಿಯಾಗುವುದು ಅಂತೂ ಅರ್ಚನಾ ನಾಯಕಿಯಾದ ಕಥಾನಾಯಕಿ ಮುಗಿಯುವ ದಿನಗಳಲ್ಲಿ ಇವರೂ ಕೂಡ ದುರಂತ ಅಂತ್ಯ ಹೊಂದುವುದು.

ಯಶಸ್ಸು ದೊರೆಯಬಹುದು ಆದರೆ ಸಾಕಷ್ಟು ಮೆಟ್ಟಿಲುಗಳನ್ನು ಹತ್ತಿ ಬರಬೇಕು ಯಶಸ್ಸಿನ ಉತ್ತುಂಗದಿಂದ ಜಾರಿದಾಗ ಅದರಿಂದಾಗುವ ನೋವು ಅವರ್ಣನೀಯವಾದುದಾಗಿದೆ. ಯಶಸ್ಸು ದೊರೆತ ಮೇಲೆ ಕೋಟ್ಯಾಂತರ ಹಣ, ಕೀರ್ತಿ, ಪ್ರಶಂಸೆ ಎಲ್ಲವೂ ದೊರೆಯುತ್ತದೆ ಆದರೆ ಅದನ್ನು ದೀರ್ಘ ಕಾಲ ಕಾಪಾಡಿಕೊಳ್ಳಲು ಅದೃಷ್ಟ ಜೊತೆಗಿರಬೇಕು. ಶ್ರೀಕಾಂತ್ ರವರ ಮಗಳು ಕೊನೆಗೆ ರಮೇಶ್ ರವರ ಕುಟುಂಬದ ದೊಡ್ಡ ಶ್ರೀಮಂತರ ಮನೆ ಸೊಸೆಯಾಗಿ ಡಾ ಸುಹಾಸ್‌ರಿಗೆ ಮುದ್ದಿನ ಮಡದಿಯಾಗಿ ಸುಖೀ ಜೀವನ ನಡೆಸುವ ಚಿತ್ರಣ ಕಾದಂಬರಿಯಲ್ಲಿ ಚೆನ್ನಾಗಿ ಮೂಡಿಬಂದಿದೆ.

**ದೀರ್ಘ ಕಾಲ ಕಾಪಾಡಿಕೊಳ್ಳಲು ಅದೃಷ್ಟ**

ಮನುಷ್ಯನ ಜೀವನದಲ್ಲಿ ಎಷ್ಟೋ ವೇಳೆ ನಮ್ಮ ನಿರೀಕ್ಷೆಯಂತೆ ಏನೂ ನಡೆಯುವುದಿಲ್ಲ ಅನೇಕ ಅನಾಹುತಗಳು ನಡೆದೇ ಹೋಗುತ್ತವೆ. ಒಮ್ಮೊಮ್ಮೆ ಕಷ್ಟಗಳು ಎದುರಾಗಿ ಕೊನೆ ಕೊನೆಗೆ ನಿರೀಕ್ಷಿಸದೇ ಇರುವಷ್ಟು ಸುಖ ಹುಡುಕಿ ಬರುತ್ತದೆ. ಕಾಲ ಚಕ್ರದಲ್ಲಿ ಏನೆಲ್ಲಾ ಏರುಪೇರು, ಕಷ್ಟಸುಖಗಳು, ದುಃಖ ದುಮ್ಮಾನಗಳು ಎದುರಾಗುತ್ತವೆ. ಜೀವನ ಎಂದರೆ ಸಮತಟ್ಟಾದ ಸಿಮೆಂಟು ರೋಡಿನಂತೆ ಇರುವುದಿಲ್ಲ ಎಂಬುದನ್ನು ಶ್ರೀಕಾಂತನ ಪಾತ್ರ ಅರ್ಚನಾ ಪಾತ್ರಗಳ ಮೂಲಕ ಕಾದಂಬರಿಯಲ್ಲಿ ಲೇಖಕರು ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಒಳ್ಳೆಯ ಅಭಿರುಚಿಯಿರುವ ನಿರ್ದೇಶಕರು ಹಾಗೂ ಸಿನಿಮಾ ನಿರ್ಮಾಪಕರಿಗೆ ಈ ಕಥಾಹಂದರದ ಕಾದಂಬರಿಯು ದೊರೆತರೆ ಉತ್ತಮ ಸಿನಿಮಾ ಮೂಡಿ ಬರುವುದರಲ್ಲಿ ಎರಡು ಮಾತಿಲ್ಲ. ಸಿನಿಮಾ ಚಿತ್ರಣಕ್ಕೆ ಬೇಕ ಬೇಕಾಗುವ ಎಲ್ಲಾ ವಸ್ತು ವಿಷಯಗಳು, ಘಟನೆ, ವರ್ಣನೆ, ಸಂಬಂಧ ಎಲ್ಲವೂ ಹೇಳಿ ಮಾಡಿಸಿದಂತಿದೆ. ಒಟ್ಟಿನಲ್ಲಿ ಕಣ್ಣರೆಯಾದ ಕಥಾನಾಯಕಿ ಕಾದಂಬರಿ ರೋಮಾಂಚನದಿಂದ ಕೂಡಿದ್ದು ಓದುಗರಿಗೆ ರಸದೌತಣ ನೀಡುತ್ತದೆ. ಲೇಖಕರಾದ ಧನಂಜಯರವರಿಂದ ಇನ್ನೂ ಹೆಚ್ಚು ಹೆಚ್ಚು ಸಾಹಿತ್ಯದ ಎಲ್ಲಾ ಪ್ರಕಾರದ ಕೃತಿಗಳು ಮೂಡಿಬರಲಿ ಎಂದು ಹಾರೈಸುತ್ತೇನೆ.

## ಬಂಟ್ವಾಳದಲ್ಲಿ ಪ್ರಾಂತೀಯ ಹಿಂದು ರಾಷ್ಟ್ರ ಅಧಿವೇಶನ!

• ಉದಯವಾಹಿನಿ ಮಂಗಳೂರು



ಉದಯವಾಹಿನಿ ಚಿತ್ರ

ವಕ್ಫ್ ಬೋರ್ಡ ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ರಾಜ್ಯದ ಸಾವಿರಾರು ರೈತರ, ದೇವಸ್ಥಾನಗಳ ಜಮೀನುಗಳನ್ನು ಕಬಳಿಸಲು ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಕರ್ನಾಟಕ ಸರಕಾರವು ಬಜೆಟ್ ನಲ್ಲಿ ಅಲ್ಪಸಂಖ್ಯಾತರಿಗೆ 4500 ಕೋಟಿ ರೂಪಾಯಿಗಳನ್ನು ನೀಡಿದೆ.

ಈ ವರ್ಷದ ಶಿವರಾತ್ರಿ, ಗಣೇಶ ಚತುರ್ಥಿಯ ವಿಸರ್ಜನೆಯ ಸಂದರ್ಭದಲ್ಲಿ ಮತ್ತು ದೀಪಾವಳಿ ಹಬ್ಬದಲ್ಲಿ ಹಿಂದೂಗಳ ಮೇಲೆ ಕಲ್ಲು ತೂರಾಟ, ಮಾರಣಾಂತಿಕ ಹಲ್ಲೆ ಮಾಡಲಾಯಿತು. ಲವ್ ಜಿಹಾದ್, ಹಲಾಲ್ ಜಿಹಾದ್ ಮಿತಿಮೀರಿ ನಡೆಯುತ್ತಿದೆ, ರಾಜ್ಯದ ಪಠ್ಯ ಇತಿಹಾಸದಲ್ಲಿ ಹಿಂದುಗಳ ಇತಿಹಾಸವನ್ನು ತಿರುಚಲಾಗುತ್ತಿದೆ. ಮಣಿಪುರ, ಮಿಜೋರಾಮ್‌ಗಳನ್ನು ಪ್ರತ್ಯೇಕ ಕ್ರೈಸ್ತ ದೇಶವಾಗಿ ಸ್ಥಾಪಿಸುವ ಕುತಂತ್ರ ಹಾಗೂ ವಿಭಜನೆಯ ಸಂಕೇತ ಇದಾಗಿದೆ.

ಭಾರತದ ಅಖಂಡತೆಯನ್ನು ಕಾಪಾಡಲು ಹಿಂದು ರಾಷ್ಟ್ರ ಅಗತ್ಯವಾಗಿದೆ. ಇದಕ್ಕಾಗಿ ಹಿಂದು ಇಕೋಸಿಸ್ಟಮ್ ನಿರ್ಮಿಸಲು ಚಿಂತನೆ ಮತ್ತು ಕಾರ್ಯಯೋಜನೆ ರೂಪಿಸಲು ಹಿಂದೂ ಜನ ಜಾಗೃತಿ ಸಮಿತಿಯು ಬಂಟ್ವಾಳದ ಸ್ಪರ್ಶ ಕಲಾ ಮಂದಿರದಲ್ಲಿ ಮಾರ್ಚ್ 16 ರಂದು ಬೆಳಿಗ್ಗೆ 10 ರಿಂದ ಪ್ರಾಂತೀಯ ಹಿಂದು ರಾಷ್ಟ್ರ ಅಧಿವೇಶನವನ್ನು ಆಯೋಜನೆ ಮಾಡಲಾಗಿದೆ. ಈ ಅಧಿವೇಶನದಲ್ಲಿ ದಕ್ಷಿಣ ಕನ್ನಡ, ಕೊಡಗು, ಉಡುಪಿ, ಉತ್ತರಕನ್ನಡ ಜಿಲ್ಲೆಯಿಂದ 100 ಕ್ಕೂ ಹೆಚ್ಚು ಹಿಂದೂ ಸಂಘಟನೆಗಳ 2500 ಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ.

**ಹಿಂದೂ ರಾಷ್ಟ್ರ-ಸ್ಥಾಪನೆ**

**ಈ ಅಧಿವೇಶನದಲ್ಲಿ ಮುಖ್ಯವಾಗಿ ಯುವ ಬ್ರಿಗೇಡ್ ಸಂಸ್ಥಾಪಕರಾದ ಶ್ರೀ ಚಕ್ರವರ್ತಿ ಸುಲಿಬೆಲೆಯವರು, ಹಿರಿಯ ವಕೀಲರಾದ ಅರುಣ ಶ್ಯಾಮ್ ಇವರು, ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ, ಸನಾತನ ಸಂಸ್ಥೆಯ ಧರ್ಮಪ್ರಸಾರಕ ಸಂತರಾದ ಪೂಜ್ಯ ರಮಾನಂದ ಗೌಡ ಸೇರಿದಂತೆ ನೂರಾರು ವಕೀಲರು, ವೈದ್ಯರು, ಉದ್ಯಮಿಗಳು, ಚಿಂತಕರು, ಲೇಖಕರು, ದೇವಸ್ಥಾನಗಳ ವಿಶ್ವಸ್ಥರು, ನೂರಾರು ಹಿಂದೂ ಸಕ್ರೀಯ ಕಾರ್ಯಕರ್ತರು, ವಿವಿಧ ಆಧ್ಯಾತ್ಮಿಕ, ಧಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿರುವವರು. ಈ ಅಧಿವೇಶನದಲ್ಲಿ ಭಾಗವಹಿಸಲು ಇಚ್ಛಿಸುವವರು ಈ 7204082652 ನಂಬರ್‌ಗೆ ಸಂಪರ್ಕ ಮಾಡಬಹುದು.**

ಪತ್ರಿಕಾ ಪರಿಷತ್‌ನಲ್ಲಿ ಉದ್ಯಮಿಗಳಾದ ಎಮ್ ಜೆ ಶೆಟ್ಟಿ, ನ್ಯಾಯವಾದಿ ಶ್ರೀ ಈಶ್ವರ ಕೊಟ್ಟಾರಿ, ಹಿಂದೂ ಯುವ ಸೇನೆಯ ಅಧ್ಯಕ್ಷರಾದ ಶ್ರೀ ಕಿರಣ ರೈ, ಹಿಂದೂ ಜನಜಾಗೃತಿ ಸಮಿತಿಯ ಸಮನ್ವಯಕರಾದ ಶ್ರೀ ಚಂದ್ರ ಮೊಗವೀರ್, ಹಿಂದೂ ಜನ ಜಾಗೃತಿ ಸಮಿತಿಯ ವಕ್ತಾರರಾದ ಶ್ರೀ ಮೋಹನ್ ಗೌಡ ಇವರು ಉಪಸ್ಥಿತರಿದ್ದರು.

## ರಾಯರ ಪವಾಡಕ್ಕೆ ನಿದರ್ಶನವಾದ ಪ್ರೊ. ಉಮಾ ಗಿರಿಮಾಜಿ


ಉದಯವಾಹಿನಿ ಚಿತ್ರ

> ಶ್ರೀ ರಾಘವೇಂದ್ರ ಸ್ವಾಮಿಗಳು ಎಂದೆಂದಿಗೂ ಪರಮ ದಯಾಳುಗಳು ಅವರನ್ನು ನಂಬಿದವರಿಗೆ ಯಾವತ್ತೂ ಮೋಸ ಎಂಬುದೇ ಆಗಿಲ್ಲ. ಹಾಗಾಗಿ ರಾಯರ ಮಂತ್ರ ಜಪವನ್ನು ಯಾರೂ ಬದುಕಿನಲ್ಲಿ ಮರೆಯಬಾರದು ಎಂದು ಅವರು ಅಂತರಂಗ ಪೂರ್ವಕವಾಗಿ ಹೇಳುತ್ತಾರೆ.

• ಉದಯವಾಹಿನಿ ಬೆಂಗಳೂರು

ರಾಯರನ್ನು ನಂಬಿದವರಿಗೆ ಯಾವತ್ತೂ ವಿಜಯವೇ ಪ್ರಾಪ್ತಿಯಾಗುತ್ತದೆ ಎಂದು ಪ್ರತಿಪಾದಿಸುತ್ತಾರೆ ಬೆಂಗಳೂರು ವಿವಿ ನಿವೃತ್ತ ಪ್ರೊಫೆಸರ್ ಉಮಾ ಗಿರಿಮಾಜಿ. ಹೌದು. ಬೆಂಗಳೂರಿನ ಜಯನಗರ ಐದನೇ ಬಡಾವಣೆಯ ಶ್ರೀ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ಅನನ್ಯ ಭಕ್ತರಾಗಿರುವ ಅವರು ತಮ್ಮ ಬದುಕಿನಲ್ಲಿ ಆಗಿರುವ ಪವಾಡಗಳನ್ನು ಹೀಗೆ ಹಂಚಿಕೊಳ್ಳುತ್ತಾರೆ.

ನಾನು ಏಳು ವರ್ಷದ ಬಾಲಕಿಯಾಗಿದ್ದಾಗಿಂದಲೂ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ನಿತ್ಯವೂ ಹೋಗಿ ದರ್ಶನ ಮಾಡಿಕೊಂಡು ಬರುವ ಪರಿಪಾಠವನ್ನು ರೂಢಿಸಿ ಕೊಂಡಿದ್ದೇನೆ . ನಮ್ಮ ಮನೆ ಚಾಮರಾಜಪೇಟೆಯಲ್ಲಿ ಇದ್ದ ಕಾರಣಕ್ಕಾಗಿ ಮೊದಲು ನಾನು ಸೀತಾಪತಿ ಅಗ್ರಹಾರದ ರಾಯರ ಮಠಕ್ಕೆ ಪ್ರತಿನಿತ್ಯ ಹೋಗಿ ದರ್ಶನ ಭಾಗ್ಯ ಪಡೆಯುತ್ತಿದ್ದೆ. ವಿವಾಹ ಮತ್ತು ಕುಟುಂಬ ರೂಪಗೊಂಡ ನಂತರ ಜಯನಗರ 5ನೇ ಬಡಾವಣೆಯ ರಾಯರ ಮಠದೊಂದಿಗೆ ನನ್ನ ಅವಿನಾಭಾವ ಸಂಪರ್ಕ ಬೆಳೆಯಿತು . ಮಠ ಆರಂಭವಾದಾಗಿನಿಂದಲೂ ಇಲ್ಲಿಯವರೆಗೂ ಪ್ರತಿನಿತ್ಯವೂ ಮುಂಜಾನೆ ಗುರುಗಳ ಸನ್ನಿಧಾನಕ್ಕೆ ಬಂದು ಇಲ್ಲಿ ದೀಪವನ್ನು ಬೆಳಗಿ, ಸ್ವಲ್ಪ ಹೊತ್ತು ಕುಳಿತು ಧನ್ಯತೆಯನ್ನು ಅನುಭವಿಸಿ ಹೋಗುವುದು ನನ್ನ ಬದುಕಿನ ಪರಿಪಾಠವಾಗಿದೆ ಎನ್ನುತ್ತಾರೆ ಉಮಾ ಗಿರಿಮಾಜಿ. ಬೆಂಗಳೂರು ವಿವಿಯಲ್ಲಿ ಪಿಎಚ್ಡಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಪ್ರೌಢ ಪ್ರಬಂಧವು ಅಂತಿಮ ಹಂತವನ್ನು ತಲುಪಿ ಸಮರ್ಪಣೆಗೊಳಿಸಿದ ನಂತರ ಮಂತ್ರಾಲಯಕ್ಕೆ ಹೋಗಿ ನಾನು ಸೇವೆಯನ್ನು ಮಾಡಿದೆ. ಮೂರು ದಿನದ ಸೇವೆಯ ನಂತರ ನನಗೆ ಸ್ವಪ್ನವಾಯಿತು. ನದಿ ತೀರದಲ್ಲಿ ನನಗೆ ಪಿ ಎಚ್ ಡಿ ಪದವಿ ಪ್ರದಾನ ಮಾಡಿದಂತೆ ಕನಸು ಬಿತ್ತು. ಧನ್ಯತೆಯನ್ನು ಅನುಭವಿಸಿದ ನಾನು ಬೆಂಗಳೂರು ವಿವಿಗೆ ಆಗಮಿಸಿ ನನ್ನ ಟೇಬಲನ್ನು ಗಮನಿಸಿದಾಗ ಅದರ ಮೇಲೆ ಪಿ ಎಚ್.ಡಿ ಅಂಗೀಕೃತ ಅಧಿಕೃತ ಪತ್ರ ಇತ್ತು.ಕನಸಿನಲ್ಲಿ ಕಂಡದ್ದು ಇಲ್ಲಿ ನನಸಾಗಿತ್ತು ಎಂದು ಅತ್ಯಂತ ಭಾವುಕರಾಗಿ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ ಪ್ರೊ.ಉಮಾ. ರಾಯರು ವಿದ್ಯಾ ಸರಸ್ವತಿಯಾಗಿ ನನ್ನನ್ನು ಕೈಹಿಡಿದಿದ್ದಾರೆ . ಕೈ ಹಿಡಿದು ನಡೆಸಿದ್ದಾರೆ. ಅನುಗ್ರಹ ಮಾಡಿದ್ದಾರೆ . ಎಂದೆಂದಿಗೂ ಮಾಡುತ್ತಲೇ ಇದ್ದಾರೆ ಎನ್ನುವುದು ನನ್ನ ಭಾವನೆ ಎಂದು ಅವರು ಹೇಳುತ್ತಾರೆ . ಇತ್ತೀಚಿಗಷ್ಟೇ ವಯೋ ಸಹಜವಾಗಿ ಕಾಲಿನ ನೋವಿನಿಂದ ಬಳಲುತ್ತಿರುವ ನನಗೆ ಮಂಡಿ ಚಿಪ್ಪು ಬದಲಾವಣೆ (ನೀ ರಿಪ್ಲೇಸ್ಮೆಂಟ್) ಗೆ ವೈದ್ಯರು ಸೂಚನೆ ನೀಡಿದ್ದಾರೆ. ಆದರೂ ನಾನು ನನ್ನ ಪ್ರಯತ್ನದಿಂದಲೇ ಸ್ವಲ್ಪ ಸ್ವಲ್ಪ ಓಡಾಡುವ ಅಭ್ಯಾಸವನ್ನು ಮಾಡಿಕೊಂಡಿದ್ದೇನೆ . ವೈದ್ಯರು ಏನೇ ಹೇಳಿದರೂ ಭವರೋಗ ವೈದ್ಯರಾದ ಶ್ರೀ ರಾಘವೇಂದ್ರ ಸ್ವಾಮಿಗಳು ನನಗೆ ನಡೆಯಲು ಶಕ್ತಿ ತುಂಬುತ್ತಿದ್ದಾರೆ. ಹಂತ ಹಂತವಾಗಿ ನನ್ನ ಕಾಲಿನ ಮೇಲೆ ನಾನೇ ನಂಬಿಕೆ ಇಟ್ಟು ನಡೆಯುತ್ತಿದ್ದೇನೆ ಎಂದರೆ ಅದಕ್ಕೆ ರಾಯರ ಪರಮ ಕೃಪೆಯೇ ಕಾರಣ ಎಂದು ಪ್ರೊ. ಉಮಾ ಹೇಳುತ್ತಾರೆ. ಕಾಲು ನೋವಿನ ನಡುವೆಯೂ ಶ್ರೀ ಮಠಕ್ಕೆ ಆಗಮಿಸಿದ ಅವರು ಬೃಂದಾವನದ ಸನಿಹದಲ್ಲಿಯೇ ನಿಂತುಕೊಂಡು ತಮ್ಮ ಸಮಗ್ರ ಬದುಕಿನಲ್ಲಿ ರಾಯರು ಮಾಡಿದ ಪವಾಡಗಳನ್ನು ಭಕ್ತಿ ಭಾವದಿಂದ ಸ್ಮರಿಸಿಕೊಳ್ಳುತ್ತಾರೆ. ಶ್ರೀ ರಾಘವೇಂದ್ರ ಸ್ತೋತ್ರ ಮತ್ತು ಅಷ್ಟೋತ್ತರಗಳ ಸಾಲುಗಳನ್ನು ಸ್ಮರಣೆ ಮಾಡಿಕೊಂಡು ಅಪೇಕ್ಷಿತ ಪ್ರದಾತಾನ್ಯೋ ರಾಘವೇಂದ್ರನ್ನವಿದ್ಯತೇ ಎಂದು ಉಚ್ಚರಿಸುತ್ತಾರೆ ಬೆಂಗಳೂರಿನ ಜಯನಗರ 5ನೇ ಬಡಾವಣೆಯ ಮಠದಲ್ಲಿ ಬೃಂದಾವನದ ಶಕ್ತಿಯನ್ನು ನಂಬಿ ಬಂದ ಅನೇಕರಿಗೆ ಸಾವಿರಾರು ಪವಾಡಗಳು , ನಿದರ್ಶನಗಳು ಈಗಾಗಲೇ ನಡೆದಿವೆ . ಅವುಗಳ ಸಾಲಿನಲ್ಲಿ ಪ್ರೊ. ಉಮಾ ಗಿರಿಮಾಜಿ ಅವರ ವಿಶೇಷ ಅನುಭವ ಕಥನವೂ ಸೇರ್ಪಡೆಗೊಂಡಿದೆ ಎಂಬುದು ವಿಶೇಷದಲ್ಲಿ ವಿಶೇಷವಾಗಿದೆ. ರಾಯರು ಕಲಿಯುಗದ ಕಾಮಧೇನು ಎಂಬುದಕ್ಕೆ ಇವುಗಳಿಗಿಂತ ನಿದರ್ಶನ ಬೇರೆ ಎಲ್ಲೂ ಸಿಗಲಾರದು.

## ಆರೋಗ್ಯ ಸಮಸ್ಯೆಗಳಿದ್ದರೆ ಪನೀರ್ ತಿನ್ನಬೇಡಿ



ಕೆಲವರಿಗೆ ಪನೀರ್ ಅಂದ್ರೆ, ಸಿಕ್ಕಾಪಟ್ಟೆ ಇಷ್ಟ. ಹಾಗಾಗಿ ತಮ್ಮ ಪ್ರತಿಯೊಂದು ಅಡುಗೆಯಲ್ಲೂ ಪನೀರ್‌ನ್ನು ಸೇರಿಸುತ್ತಾರೆ. ಪನೀರ್ ಸೇವನೆ ಆರೋಗ್ಯಕ್ಕೆ ಒಳ್ಳೆಯದೇ ಆದರೆ ಕೆಲವು ಆರೋಗ್ಯ ಸಮಸ್ಯೆ ಇರುವವರಿಗೆ ಇದು ಒಳ್ಳೆಯಲ್ಲ. ಪನೀರ್‌ನ್ನು ಬಹಳಷ್ಟು ಜನರು ಇಷ್ಟಪಡುತ್ತಾರೆ. ತರಕಾರಿ ಪ್ರೀಯರಿಗಂತೂ ಪನೀರ್ ಕರಿ ತುಂಬಾನೇ ಇಷ್ಟವಾಗುತ್ತದೆ. ಕ್ಯಾಲ್ಸಿಯಂ ಮತ್ತು ಪ್ರೋಟೀನ್ ಸಮೃದ್ಧವಾಗಿರುವ ಪನೀರ್ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಪನೀರ್ ನಿಂದ ಹಲವಾರು ರೀತಿಯ ಭಾರತೀಯ ಖಾದ್ಯಗಳನ್ನು ತಯಾರಿಸಲಾಗುತ್ತದೆ. ಯಾವುದೇ ವಿಶೇಷ ಖಾದ್ಯವನ್ನು ಮಾಡಬೇಕಾದಾಗ, ಪನ್ನೀರ್ ಹೆಸರು ಮೊದಲು ಬರುತ್ತದೆ. ಪನೀರ್ ತಿನ್ನಲು ಖಂಡಿತ ರುಚಿಕರವಾಗಿರುತ್ತದೆ. ಇದಲ್ಲದೆ ಇದು ಆರೋಗ್ಯಕ್ಕೂ ತುಂಬಾ ಪ್ರಯೋಜನಕಾರಿ.

**ಯಾರೆಲ್ಲಾ ಪನೀರ್ ತಿನ್ನಬಾರದು:** ಪನೀರ್ ಜೀವಸತ್ವಗಳು, ಪ್ರೋಟೀನ್ಗಳು ಮತ್ತು ಕ್ಯಾಲ್ಸಿಯಂನಲ್ಲಿ ಸಮೃದ್ಧವಾಗಿದೆ. ಆದರೆ ಪನೀರ್‌ನ ಅತಿಯಾದ ಸೇವನೆಯು ನಿಮ್ಮ ಆರೋಗ್ಯಕ್ಕೆ ಅಪಾಯಕಾರಿ ಎಂದು ನಿಮಗೆ ತಿಳಿದಿದೆಯೇ? ಹೆಚ್ಚು ಪನೀರ್ ಸೇವಿಸುವುದರಿಂದ ಅನೇಕ ಜನರು ಅನಾರೋಗ್ಯಕ್ಕೆ ಒಳಗಾಗಬಹುದು. ಹಾಗಾದರೆ ಯಾವ ಜನರು ಪನೀರ್‌ನ್ನು ಕಡಿಮೆ ಸೇವಿಸಬೇಕು ಅಥವಾ ಸೇವಿಸಲೇಬಾರದು ಎಂಬುವುದನ್ನು ನಾವಿಲ್ಲಿ ತಿಳಿಯೋಣ.

**ಜೀರ್ಣಕ್ರಿಯೆಯ ಸಮಸ್ಯೆ ಇರುವವರು**

ಪನೀರ್‌ನ ಸೇವನೆಯು ನಿಮ್ಮ ಜೀರ್ಣಾಂಗ ವ್ಯವಸ್ಥೆಯನ್ನು ದುರ್ಬಲಗೊಳಿಸಬಹುದು. ಹೆಚ್ಚು ಪನೀರ್ ತಿನ್ನುವುದರಿಂದ ಪ್ರೋಟೀನ್ ಪ್ರಮಾಣ ಹೆಚ್ಚಾಗುತ್ತದೆ, ಹೀಗಾಗಿ ಪನೀರ್ ಅತಿಸಾರಕ್ಕೆ ಕಾರಣವಾಗಬಹುದು ಮತ್ತು ಹೊಟ್ಟೆ ಉಬ್ಬರ ಜೊತೆಗೆ ಗ್ಯಾಸ್ ಸಮಸ್ಯೆಯೂ ಉಂಟಾಗಬಹುದು.

**ಅಲರ್ಜಿ ಇರುವವರು**

ನೀವು ಲ್ಯಾಕ್ಟೋಸ್ ಅಸಹಿಷ್ಣುತೆ ಹೊಂದಿದ್ದರೆ, ಅದನ್ನು ಎಚ್ಚರಿಕೆಯಿಂದ ಸೇವಿಸಿ. ಏಕೆಂದರೆ ಅಂತಹ ಜನರಿಗೆ ಪನೀರ್ ಸೇವನೆಯು ಅಲರ್ಜಿಯನ್ನು ಉಂಟುಮಾಡಬಹುದು. ಪನೀರ್‌ನಲ್ಲಿ ಕಡಿಮೆ ಪ್ರಮಾಣದಲ್ಲಿ ಲ್ಯಾಕ್ಟೋಸ್ ಇದ್ದರೂ, ಮುನ್ನೆಚ್ಚರಿಕೆಯಾಗಿ ಅದನ್ನು ಸ್ವಲ್ಪ ಪ್ರಮಾಣದಲ್ಲಿ ತಿನ್ನುವುದು ಇನ್ನೂ ಉತ್ತಮ.

**ಹೃದಯ ರೋಗಿಗಳು:** ನೀವು ಹೃದಯ ಸಮಸ್ಯೆಗಳಿಂದ ಬಳಲುತ್ತಿದ್ದರೆ, ನೀವು ಹೆಚ್ಚು ಪನೀರ್ ತಿನ್ನುವುದನ್ನು ತಪ್ಪಿಸಬೇಕು. ಏಕೆಂದರೆ ಪನೀರ್‌ನಲ್ಲಿ ಹೆಚ್ಚಿನ ಪ್ರಮಾಣದ ಕೊಬ್ಬು ಇರುತ್ತದೆ. ಹೆಚ್ಚು ಚೀಸ್ ತಿನ್ನುವುದರಿಂದ ಕೊಲೆಸ್ಟ್ರಾಲ್ ಪ್ರಮಾಣ ಹೆಚ್ಚಾಗಬಹುದು, ಇದರಿಂದಾಗಿ ನೀವು ಹೃದಯ ಸಂಬಂಧಿತ ಕಾಯಿಲೆ ಎದುರಿಸಬೇಕಾಗಬಹುದು. ಅಂತಹ ಜನರು ಬಯಸಿದರೆ, ಅವರು ಕಡಿಮೆ ಕೊಬ್ಬಿನ ಪನೀರ್ ಅಥವಾ ಟೋಫು ಸೇವಿಸಬಹುದು.

**ಅಧಿಕ ರಕ್ತದೊತ್ತಡ:** ಅಧಿಕ ರಕ್ತದೊತ್ತಡ ಇರುವ ರೋಗಿಗಳು ಹೆಚ್ಚು ಚೀಸ್ ತಿನ್ನುವುದರಿಂದ ದೂರವಿರಬೇಕು. ಪನೀರ್‌ನಲ್ಲಿ ಹೆಚ್ಚಿನ ಪ್ರಮಾಣದ ಸೋಡಿಯಂ ಇರುತ್ತದೆ. ಆದ್ದರಿಂದ ಇದರ ಅತಿಯಾದ ಸೇವನೆಯು ಅಧಿಕ ರಕ್ತದೊತ್ತಡಕ್ಕೆ ಕಾರಣವಾಗಬಹುದು.

**ಯಾರೆಲ್ಲಾ ಪನೀರ್ ತಿನ್ನಬಾರದು**

# ಪತ್ನಿಗೆ ವಿಷ ನೀಡಿ ಕೊಂದ ಪತಿಗೆ ಜೀವಾವಧಿ ಶಿಕ್ಷೆ

• ಉದಯವಾಹಿನಿ ಮಂಗಳೂರು

ನ್ಯಾಯಾಧೀಶೆ ಸಂಧ್ಯಾ ಎಸ್ ಅಧ್ಯಕ್ಷತೆಯ ಮಂಗಳೂರಿನ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು, ಪತ್ನಿಯ ಮೇಲೆ ಹಲ್ಲೆ ನಡೆಸಿ ವಿಷಪ್ರಾಶನ ಮಾಡಿ ಕೊಂದ ವ್ಯಕ್ತಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಶಿಕ್ಷೆಗೊಳಗಾದ ಆರೋಪಿಯನ್ನು ಉಳ್ಳಾಲ ತಾಲ್ಲೂಕಿನ ಸೋಮೇಶ್ವರ ಗ್ರಾಮದ ಕುಂಪಲ ಚೇತನ್ ನಗರದ ನಿವಾಸಿ ಜೋಸೆಫ್ ಫ್ರಾನ್ಸಿಸ್ ರೆನ್ಸನ್ ಅಲಿಯಾಸ್ ರೆನ್ಸನ್ (53) ಎಂದು ಗುರುತಿಸಲಾಗಿದೆ. ಅವರ ಪತ್ನಿ ಶೈಮಾ ಬಲಿಯಾದವರು.

ಜೋಸೆಫ್ ಫ್ರಾನ್ಸಿಸ್ ರೆನ್ಸನ್ ಮದ್ಯಪಾನ, ಜೂಜಾಟ ಮತ್ತು ಇತರ ದುಶ್ಚಟಗಳಿಗೆ ವ್ಯಸನಿಯಾಗಿದ್ದಳರು ಎಂದು ವರದಿಯಾಗಿದೆ. ಮೇ 11, 2022 ರಂದು, ಶೈಮಾ ಮನೆಯಲ್ಲಿದ್ದಾಗ, ತನ್ನ ಗಂಡನಿಗೆ ತನ್ನ ನಡವಳಿಕೆಯನ್ನು ಸರಿಪಡಿಸಿಕೊಳ್ಳಲು ಸಲಹೆ ನೀಡಿದಳು. ಇದರಿಂದ ಕೋಪಗೊಂಡ ಅವನು ಅವಳನ್ನು ಕೋಣೆಗೆ ತಳ್ಳಿ, ಬಾಗಿಲು ಲಾಕ್ ಮಾಡಿ, ದೈಹಿಕವಾಗಿ ಹಲ್ಲೆ ಮಾಡಿದನೆಂದು ಆರೋಪಿಸಲಾಗಿದೆ. ಅವಳು ವಿಷ ಸೇವಿಸಿದಂತೆ ಕಾಣುವಂತೆ ಮಾಡಲು, ಆರೋಪಿಯು ಅವಳ ಬಾಯಿಗೆ ವಿಷಕಾರಿ ವಸ್ತುವನ್ನು ಸುರಿದನು, ಅದನ್ನು ಕೀಟನಾಶಕವಾಗಿ ಬಳಸುವ ನೆಪದಲ್ಲಿ ತಂದಿದ್ದನು. ಘಟನೆ ನಡೆದಾಗ ಅವರ ಇಬ್ಬರು ಮಕ್ಕಳು ಮನೆಯಲ್ಲಿದ್ದರು. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಶೈಮಾಳನ್ನು ಅವಳ ಮಕ್ಕಳು ಆಟೋರಿಕ್ಷಾದಲ್ಲಿ ದೇರಳಕಟ್ಟೆಯ ಕೆಎಸ್ ಹೆಗ್ಡೆ ಆಸ್ಪತ್ರೆಗೆ ಕರೆದೊಯ್ದರು. ಚಿಕಿತ್ಸೆ ಪಡೆದರೂ, ಅದೇ ರಾತ್ರಿ ಗಾಯಗಳಿಂದಾಗಿ ಅವಳು ಸಾವನ್ನಪ್ಪಿದಳು.



ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ, ನ್ಯಾಯಾಧೀಶರು ಆರೋಪಿಯನ್ನು ತಪ್ಪಿತಸ್ಥ ಎಂದು ಘೋಷಿಸಿ ಮಾರ್ಚ್ 12 ರಂದು ತೀರ್ಪು ನೀಡಿದರು. ನ್ಯಾಯಾಲಯವು ಅವನಿಗೆ ಐಪಿಸಿ ಸೆಕ್ಷನ್ 498 (ಎ) ಅಡಿಯಲ್ಲಿ ಮೂರು ವರ್ಷಗಳ ಜೈಲು ಶಿಕ್ಷೆ ಜೊತೆಗೆ 10,000 ರೂ. ದಂಡ, ಐಪಿಸಿ ಸೆಕ್ಷನ್ 302 ಅಡಿಯಲ್ಲಿ ಜೀವಾವಧಿ ಶಿಕ್ಷೆ ಮತ್ತು 15,000 ರೂ. ದಂಡ ಮತ್ತು ಐಪಿಸಿ ಸೆಕ್ಷನ್ 201 ಅಡಿಯಲ್ಲಿ ಮೂರು ವರ್ಷಗಳ ಜೈಲು ಶಿಕ್ಷೆ ಜೊತೆಗೆ 10,000 ರೂ. ದಂಡವನ್ನು ವಿಧಿಸಿತು.

ಈ ಪ್ರಕರಣದಲ್ಲಿ, ಪ್ರಮುಖ ಸಾಕ್ಷಿಗಳಾಗಿದ್ದ ಶೈಮಾ ಅವರ ಇಬ್ಬರು ಪುತ್ರರು ಪೋಷಕ ಸಾಕ್ಷ್ಯವನ್ನು ನೀಡಲಿಲ್ಲ ಮತ್ತು ಬದಲಿಗೆ ಪ್ರಾಸಿಕ್ಯೂಷನ್‌ಗೆ ವಿರುದ್ಧವಾದ ಹೇಳಿಕೆಗಳನ್ನು ನೀಡಿದರು. ಆದಾಗ್ಯೂ, ಶಿಕ್ಷೆಯನ್ನು ಖಚಿತಪಡಿಸುವಲ್ಲಿ ವೈದ್ಯಕೀಯ ಸಾಕ್ಷ್ಯಗಳು ನಿರ್ಣಾಯಕವೆಂದು ಸಾಬೀತಾಯಿತು. ಆರಂಭದಲ್ಲಿ, ಪ್ರಕರಣವನ್ನು ಆತ್ಮಹತ್ಯೆಗೆ ಪ್ರಚೋದನೆ ಎಂದು ದಾಖಲಿಸಲಾಗಿತ್ತು. ಆದಾಗ್ಯೂ, ಕೆಎಸ್ ಹೆಗ್ಡೆ ಆಸ್ಪತ್ರೆಯ ವಿಧಿವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ವರ್ಷಾ ಎ. ಶೆಟ್ಟಿ ನಡೆಸಿದ ಮರಣೋತ್ತರ ಪರೀಕ್ಷೆಯಲ್ಲಿ, ಶೈಮಾ ತಲೆಗೆ ತೀವ್ರವಾದ ಗಾಯವಾಗಿ ಸಾವನ್ನಪ್ಪಿದ್ದಾರೆ ಎಂದು ದೃಢಪಡಿಸಲಾಯಿತು.

ಈ ವರದಿಯ ಆಧಾರದ ಮೇಲೆ, ಪ್ರಕರಣವನ್ನು ಅದೇ ದಿನ ಕೊಲೆ ತನಿಖೆಯಾಗಿ ಪರಿವರ್ತಿಸಲಾಯಿತು. ನ್ಯಾಯಾಲಯದ ವಿಚಾರಣೆಯ ಸಮಯದಲ್ಲಿ, ಡಾ. ವರ್ಷಾ ಮರಣೋತ್ತರ ಪರೀಕ್ಷೆಯ ಸಂಶೋಧನೆಗಳಿಗೆ ಸಂಬಂಧಿಸಿದಂತೆ ಪೋಷಕ ಸಾಕ್ಷ್ಯಗಳನ್ನು ಒದಗಿಸಿದರು. ಆದಾಗ್ಯೂ, ಶೈಮಾ ಅವರ 16 ಮತ್ತು 18 ವರ್ಷ ವಯಸ್ಸಿನ ಪುತ್ರರು ತಮ್ಮ ತಾಯಿ ಕೋಣೆಯಲ್ಲಿ ಬೀಗ ಹಾಕಿಕೊಂಡು ವಿಷ ಸೇವಿಸಿದ್ದಾರೆ ಎಂದು ಸಾಕ್ಷ್ಯ ನೀಡಿದರು, ಇದು ಪ್ರಾಸಿಕ್ಯೂಷನ್‌ನ ಹೇಳಿಕೆಗಳಿಗೆ ವಿರುದ್ಧವಾಗಿದೆ.

### ಬೆಳೆ ಹಾನಿ, ಸಾಲ ಬಾಧೆಗೆ ಕೊರಳೊಡ್ಡಿದ ರೈತರು, ಸರಕಾರದ ಜೊತೆ ಮಾರುಕಟ್ಟೆ ದರವೂ ಕೈ ಹಿಡಿಯುತ್ತಿಲ್ಲ ಎಂಬ ಕೊರಗು

# ತಿಂಗಳೊಳಗೆ ಕಲಬುರಗಿಯ ಆರು ರೈತರ ಆತ್ಮಹತ್ಯೆ

• ಉದಯವಾಹಿನಿ ಕಲಬುರಗಿ

ತೊಗರಿ ಬೆಳೆ ಹಾನಿ, ನಿರಂತರ ಸಾಲ ಬಾಧೆ ಸೇರಿ ಹಲವು ಕಾರಣಗಳಿಂದ ಒಂದು ತಿಂಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಸುಮಾರು 6 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಅನ್ನದಾತನ ಕಷ್ಟ ಕೇಳೋರು ಯಾರೂ ಇಲ್ಲವೆಂಬುದು ಸಾರಿ ಹೇಳಿದಂತೆ ಕಳೆದೊಂದು ತಿಂಗಳ ಅವಧಿಯಲ್ಲಿ ಸಾಬೀತಾಗುತ್ತಿದೆ. ಒಂದೆಡೆ ನಿರಂತರ ಬೆಳೆದ ಬೆಳೆ ಹಾಳು, ಇನ್ನೊಂದೆಡೆ ಬೆಳೆದ ಅಲ್ಪ ಬೆಳೆಗೂ ಕೂಡ ಸೂಕ್ತ ಬೆಲೆ ಇಲ್ಲದೆ ಮಾಡಿದ ಸಾಲಕ್ಕೆ ಹೆದರಿ ರೈತ ನೇಣಿಗೆ ಕೊರಳು ಒಡ್ಡುತ್ತಿದ್ದಾನೆ. ಇದು ಜಿಲ್ಲೆಯ ರೈತರ ಕರಾಳ ಕತೆಯಾಗಿದೆ.


**ಯುವ ರೈತರು ಸಾವಿಗೆ ಶರಣು:** ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಕೊಟ್ಟಗಾ ಗ್ರಾಮದ ಯುವ ರೈತ 35 ವರ್ಷದ ಸೂರ್ಯಕಾಂತ ಅಂಬಾರಾಯ ಕೃಷಿಯನ್ನೇ ನಂಬಿಕೊಂಡಿದ್ದ. ಇರುವ ಜಮೀನಿನಲ್ಲಿ ತೊಗರಿ ಸೇರಿ ಇತರೆ ಬೆಳೆ ಬೆಳಿದಿದ್ದ. ಸರಕಾರಿ ಬ್ಯಾಂಕ್‌ಗಳಿಗಿಂತ ಖಾಸಗಿಯಾಗಿ ಮಾಡಿಕೊಂಡ ಸಾಲ ನಿತ್ಯ ಕಿರುಕುಳ ನೀಡುತ್ತಿತ್ತು. ಕೊನೆಗೆ ಎಲ್ಲದರಿಂದಲೂ ಮುಕ್ತಿ ಪಡೆಯುವೆ ಎಂದು ಫೆ.25ರಂದು ಆತ್ಮಹತ್ಯೆ ಶರಣಾಗಿದ್ದಾನೆ. ಕಳೆದ ತಿಂಗಳ 21ರಂದು ಕಾಳಗಿ ತಾಲ್ಲೂಕಿನ ಹುಳಗೇರಾ ಗ್ರಾಮದ ಪ್ರಕಾಶ ರವೀಂದ್ರ 30 ವರ್ಷದ ಯುವ ರೈತನೂ ಕೂಡ ಬೆಳೆ ಕೈಕೊಟ್ಟ ಕಾರಣ ನೇಣಿಗೆ ಕೊರಳೊಡ್ಡಿದ್ದಾನೆ. ಯುವಕರು ಕೃಷಿಗೆ ಬರಬೇಕು ಎಂದು ಹೇಳುವ ರಾಜಕಾರಣಿಗಳ ಮಾತು ಯುವಕರಲ್ಲಿ ಭರವಸೆ ಮೂಡಿಸುವಲ್ಲಿ ಸೋಲುತ್ತಿವೆ.

- ಸರಕಾರದ ಜೊತೆ ಮಾರುಕಟ್ಟೆ ದರವೂ ಕೈ ಹಿಡಿಯುತ್ತಿಲ್ಲ ಎಂಬ ಕೊರಗು
- ಬೆಳೆದ ಅಲ್ಪ ಬೆಳೆಗೂ ಕೂಡ ಸೂಕ್ತ ಬೆಲೆ ಇಲ್ಲದೆ ಮಾಡಿದ ಸಾಲಕ್ಕೆ ಹೆದರಿ ರೈತ ನೇಣಿಗೆ ಕೊರಳು ಒಡ್ಡುತ್ತಿದ್ದಾನೆ.
- ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿಯೂ ಅಧಿವೇಶನದಲ್ಲಿ ತೊಗರಿ ಹಾನಿ ಕುರಿತು ಮಾತನಾಡದಿರುವುದು ರೈತ ಸಮುದಾಯದಲ್ಲಿ ಅಚ್ಚರಿ ಮೂಡಿಸಿದೆ.

**ತೊಗರಿ ಹಾನಿ ಕೊಟ್ಟ ದೊಡ್ಡ ಹೊಡೆತ:** ತೊಗರಿ ಕಣಜ ಎಂದು ಕರೆದುಕೊಳ್ಳುತ್ತಿರುವ ಕಲಬುರಗಿ ಜಿಲ್ಲೆಯ ರೈತರಿಗೆ ಸಂಕಷ್ಟದ ಮೇಲೆ ಸಂಕಷ್ಟ ಬಂದೆರಗುತ್ತಿದೆ. ಈ ಬಾರಿ ಮುಂಗಾರು ಉತ್ತಮ ಆಗಿದ್ದರಿಂದ ಸುಮಾರು 6.35 ಲಕ್ಷ ಹೆಕ್ಟೇರ್‌ಗಳಲ್ಲಿ ಪ್ರಮುಖ ಆರ್ಥಿಕ ಬೆಳೆ ತೊಗರಿ ಬಿತ್ತನೆ ಮಾಡಲಾಗಿತ್ತು.

ಆದರೆ, ಹಿಂಗಾರಿನಲ್ಲಿ ಸುರಿದ ಹೆಚ್ಚಿನ ಮಳೆಯಿಂದ 'ಬೇರು ಒಣಗು ರೋಗ' ದಾಳಿ ಇಟ್ಟಿತ್ತು. ಇದರಿಂದಾಗಿ ಸರಕಾರದ ಅಂಕಿ ಅಂಶದಂತೆ ಸುಮಾರು 1.82 ಲಕ್ಷ ಹೆಕ್ಟೇರ್ ಅಂದರೆ ಸುಮಾರು 5 ಲಕ್ಷ ಎಕರೆ ಪ್ರದೇಶ ಬೆಳೆ ಹಾನಿಯಾ ಗಿದೆ. ಇನ್ನು ರೈತರ ಪ್ರಕಾರ ಶೇ.50ರಷ್ಟು ಬೆಳೆ ಹಾನಿ ಸಂಭವಿಸಿದೆ. ಇದರ ಜೊತೆಗೆ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಯೂ ಕೂಡ ರೈತರನ್ನು ಕಂಗಾಲು ಮಾಡಿ ಸಾವಿನತ್ತ ನೋಡುವಂತೆ ಮಾಡುತ್ತಿದೆ.

ತೊಗರಿ ಬೆಳೆದರೆ ಬಾಳು ಹಸನು ಎಂಬ ಮಾತು ಈ ಬಾರಿ ಅಕ್ಷರಶಃ ಸುಳ್ಳಾಗಿದೆ. ಜಿಲ್ಲೆಯ ಯಾವುದಾದರೂ ಮೂಲೆಯಲ್ಲಿ ವಾರದಲ್ಲಿಒಬ್ಬ ರೈತ ಆತ್ಮಹತ್ಯೆ ಶರಣಾಗುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಈ ಕುರಿತು ಚಿಂತಿಸಬೇಕಾದ ಸರಕಾರ ನಮ್ಮ ಪಾಲಿಗೆ ಕಣ್ಮುಚ್ಚಿ ಕುಳಿತಿದೆ ಎಂದಿದ್ದಾರೆ ಶರಣಬಸಪ್ಪ ಮಮಶೆಟ್ಟಿ, ರೈತ ಹೋರಾಟಗಾರ ನಿತ್ಯ ರೈತರ ಆತ್ಮಹತ್ಯೆ ಸುದ್ದಿ ಕೇಳುತ್ತಿದ್ದರೆ ಮನಸ್ಸು ಮರಗುತ್ತಿದೆ. ಆದರೆ, ಜಿಲ್ಲೆಯ ಜನಪ್ರತಿನಿಧಿಗಳು ಮಾತ್ರ ತಮಗೂ ಇದಕ್ಕೂ ಸಂಬಂಧ ಇಲ್ಲಎಂದು ಇರುವುದು ನಮ್ಮ ದುರ್ದೈವ. ತೊಗರಿ ಪರಿಹಾರ ನೀಡುವ ಭರವಸೆ ನೀಡದಿದ್ದರೆ ಇನ್ನೆಷ್ಟು ರೈತರು ಜೀವ ಕಳೆದುಕೊಳ್ಳಲಿದ್ದಾರೋ ಎಂದಿದ್ದಾರೆ ಅವ್ವಣ್ಣ ಮ್ಯಾಕೇರಿ, ರೈತ ಹೋರಾಟಗಾರ.



**ಒಂದು ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರು**

- ಕಲಬುರಗಿ ತಾಲ್ಲೂಕಿನ ಬಸವರಾಜ ಸಂಕ್ರೋಂಡಗಿ: ಮಾ.11
- ಆಳಂದ ತಾಲ್ಲೂಕಿನ ಎಲೆನಾವದಗಿಯ ಮಾಣಿಕರಾವ ಅಶೋಕ ಸುತಾರ: ಮಾ.11
- ಕಾಳಗಿ ತಾಲ್ಲೂಕಿನ ಕೊಡದೂರು ಗ್ರಾಮದ ದತ್ತಾತ್ರೇಯ ಹುಣಸಪ್ಪ: ಮಾ.8
- ಕಾಳಗಿ ತಾಲ್ಲೂಕಿನ ಹುಳಗೇರಾದ ಪ್ರಕಾಶ ರವೀಂದ್ರ: ಫೆ.21
- ಕಮಲಾಪುರ ತಾಲ್ಲೂಕಿನ ಕೊಡ್ಡಗಾ ಗ್ರಾಮದ ಸೂರ್ಯಕಾಂತ ಅಂಬಾರಾಯ: ಫೆ.25
- ಆಳಂದ ತಾಲ್ಲೂಕಿನ ಬಬಲಾದ ಐಕೆ ಗ್ರಾಮದ ರೇವಣಸಿದ್ಧ ಬಂಗರಗಿ: ಜ.31

**ಅಧಿವೇಶನದಲ್ಲಿ ಪ್ರಸ್ತಾಪವೇ ಇಲ್ಲ**

ಜಿಲ್ಲೆಯಲ್ಲಿ ಬಿತ್ತನೆ ಮಾಡಿದ ಸುಮಾರು ಶೇ.30 ತೊಗರಿ ಬೆಳೆ ಹಾಳಾಗಿದೆ. ನಿರಂತರ ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚಳ ಕಾಣುತ್ತಿದೆ. ಕಲಬುರಗಿಯಲ್ಲಿ ಮೂರು ದಿನ ಜಿಲ್ಲಾಧಿಕಾರಿ ಕಚೇರಿ ಎದುರಿನ ರಸ್ತೆ ಸಂಚಾರ ಬಂದ್ ಮಾಡಿ ಹೋರಾಟ ನಡೆದರೆ, ಹಲವು ಸಂಘಟನೆಗಳು ನಾಲ್ಕು ತಿಂಗಳಿಂದ ನಿರಂತರ ಹೋರಾಟ ಮಾಡುತ್ತಿವೆ. ಇಷ್ಟೆಲ್ಲ ಆದರೂ ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿಯೂ ಅಧಿವೇಶನದಲ್ಲಿ ತೊಗರಿ ಹಾನಿ ಕುರಿತು ಮಾತನಾಡದಿರುವುದು ರೈತ ಸಮುದಾಯದಲ್ಲಿ ಅಚ್ಚರಿ ಮೂಡಿಸಿದೆ. ಇನ್ನೊಂದು ವಾರ ಅಧಿವೇಶನ ಇದ್ದು, ಅಲ್ಲಿ ಮಾತನಾಡಿ ಸರಕಾರ ಗಮನ ಸೆಳೆದು ಪರಿಹಾರ ಕೊಡಿಸುವ ಮೂಲಕ ರೈತರಿಗೆ ನೆಮ್ಮದಿ ನೀಡಬೇಕು ಎಂಬುದು ರೈತ ಮುಖಂಡರ ಒತ್ತಾಯವಾಗಿದೆ.

# ಹೀಟ್ ವೇವ್ : ಮುನ್ನೆಚ್ಚರಿಕೆ ಮಾರ್ಗಸೂಚಿ ಬಿಡುಗಡೆ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶ ದಾಖಲಾಗಿದೆ. ಹವಾಮಾನ ಇಲಾಖೆ ಹಾಗೂ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಜಿಲ್ಲೆಗೆ ಬಿಸಿಗಾಳಿ ಎಚ್ಚರಿಕೆ (ಹೀಟ್ ವೇವ್) ನೀಡಿದೆ. ಹೀಟ್ ವೇವ್ ಸ್ಟ್ರೋಕ್ (ಶಾಖದ ಅಲೆ) ನಿಂದಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಈ ಹಿನ್ನಲೆಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಮನ್ನೆಚ್ಚರಿಕೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

**ಜನರ ಆರೋಗ್ಯದ ಮೇಲೆ ದುಷ್ಪರಿಣಾಮ**

**ಹೀಟ್ ವೇವ್ ಸ್ಟ್ರೋಕ್ ತಪ್ಪಿಸಲು ಅನುಸರಿಸಬೇಕಾದ ಕ್ರಮಗಳು:** ಸಾರ್ವಜನಿಕರು ಹೀಟ್ ವೇವ್ ಕುರಿತು ಸದಾ ಎಚ್ಚರಿಕೆಯಿಂದ ಇರಬೇಕು. ರೇಡಿಯೋ,ಟಿವಿ,ದಿನ ಪತ್ರಿಕೆಗಳಲ್ಲಿ ಬರುವ ಮುನ್ಸೂಚನೆಗಳನ್ನು ತಿಳಿದುಕೊಂಡು ಅವುಗಳನ್ನು ಪಾಲಿಸಬೇಕು. ಬಾಯಾರಿಕೆಯಿಲ್ಲದಿದ್ದರೂ ಹೆಚ್ಚಾಗಿ ನೀರನ್ನು ಕುಡಿಯುಬೇಕು. ಹಗುರ, ತಿಳಿ-ಬಣ್ಣದ, ಸಡಿಲವಾದ ಮತ್ತು ರಂಧ್ರವುಳ್ಳ ಹತ್ತಿ ಬಟ್ಟೆಗಳನ್ನು ರಕ್ಷಣಾತ್ಮಕ ಕನ್ನಡಕಗಳು, ಛತ್ರಿ,ಟೋಪಿ, ಬೂಟುಗಳು ಅಥವಾ ಚಪ್ಪಲಿಗಳನ್ನು ಧರಿಸಿಬೇಕು. ರಾತ್ರಿ ವೇಳೆ ಬಸ್ಸಿನಲ್ಲಿ ದೂರದ ಪ್ರಯಾಣ ಉತ್ತಮ, ಒಂದು ವೇಳೆ ಹಗಲಿನಲ್ಲಿ ಪ್ರಯಾಣ ಮಾಡುವ ಸಂದರ್ಭ ಬಂದರೆ, ನಿಮ್ಮೊಂದಿಗೆ ನೀರನ್ನು ತೆಗೆದುಕೊಂಡು ಹೋಗಿ ಕುಡಿಯಬೇಕು. ಬಿಸಿನಲ್ಲಿ ಹೊರಗೆ ಕೆಲಸ ಮಾಡುವವರು, ಟೋಪಿ ಧರಿಸಬೇಕು. ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಬಳಸಬೇಕು. ದೇಹವನ್ನು ತಂಪಾಗಿಡಲು ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ಶರಬತ್, ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಸೇವನೆ ಮಾಡಬೇಕು. ಸಾಕು ಪ್ರಾಣಿ, ಪಕ್ಷಿಗಳನ್ನು ನೆರಳಿನಲ್ಲಿ ಇರಿಸಿ ಸಾಕಷ್ಟು ಕುಡಿಯಲು ಸಾಕಷ್ಟು ನೀರು ಕೊಡಬೇಕು. ಫ್ಯಾನ್‌ಗಳನ್ನು ಬಳಸಿ, ತಣ್ಣೀರಿನಲ್ಲಿ ಸ್ನಾನ ಮಾಡಿ, ಒದ್ದೆಯಾದ ಬಟ್ಟೆಗಳನ್ನು ಬಳಸಬೇಕು. ತಂಪಾದ ಸಮಯ ಹಾಗೂ ಸ್ಥಳದಲ್ಲಿ ಕೆಲಸ ನಿರ್ವಹಿಸಬೇಕು. ಕೆಲಸ ನಿರ್ವಹಿಸುವ ಗರ್ಭಿಣಿ ಮಹಿಳೆಯರು ಮತ್ತು ಅನಾರೋಗ್ಯದಲ್ಲಿರುವ ಕಾರ್ಮಿಕರಿಗೆ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಬೇಕು. ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನಾನಸ್, ಸೌತೆಕಾಯಿ, ಎಳನೀರನ್ನು ಹೆಚ್ಚಾಗಿ ಸೇವಿಸಬೇಕು. ನವಜಾತ ಶಿಶುಗಳು ಹಾಗೂ ಚಿಕ್ಕ ಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿರುವವರು, ಅದರಲ್ಲೂ ವಿಶೇಷವಾಗಿ ಹೃದ್ರೋಗ ಹಾಗೂ ರಕ್ತದ ಒತ್ತಡದಿಂದ ಬಳಲುತ್ತಿರುವವರು ಹೆಚ್ಚು ಜಾಗರೂಕತೆ ವಹಿಸಬೇಕು.



**ಇವುಗಳನ್ನು ಮಾಡಬೇಡಿ :** ಮಕ್ಕಳು ಅಥವಾ ಸಾಕುಪ್ರಾಣಿಗಳನ್ನು ಬಿಸಿಲಿನಲ್ಲಿ ನಿಲ್ಲಿಸಿದ ವಾಹನಗಳ ಹತ್ತಿರ ಬಿಡಬೇಡಿ. ವಾಹನಗಳ ಒಳಗಡೆ ತಾಪಮಾನವು ಹೆಚ್ಚಿ ಮಕ್ಕಳಿಗೆ ಅಪಾಯಕಾರಿಯಾಗಬಹುದು. ಕಪ್ಪುಬಟ್ಟೆ ಅಥವಾ ಬಿಗಿಯಾದ ಬಟ್ಟೆಗಳನ್ನು ಧರಿಸಬಾರದು. ಮಧ್ಯಾಹ್ನ 12 ರಿಂದ 3 ರವರೆಗೆ ಹೊರಗೆ ಕೆಲಸ ಹಾಗೂ ಶ್ರಮದಾಯಕ ಚಟುವಟಿಕೆಗಳನ್ನು ಮಾಡಬಾರದು. ಬಿಸಿಲಿನ ಸಮಯದಲ್ಲಿ ಅಡುಗೆ ಮಾಡಬಾರದು. ಅಡಿಗೆ ಮಾಡುವ ಸ್ಥಳದಲ್ಲಿ ಸಮರ್ಪಕವಾಗಿ ಗಾಳಿಯಾಡಲು ಬಾಗಿಲು ಮತ್ತು ಕಿಟಕಿಗಳನ್ನು ತೆರೆದಿಡಬೇಕು.

ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಹಾನಿಕಾರಕ ತಂಪು ಪಾನೀಯಗಳನ್ನು ಸೇವಿಸಬೇಡಿ. ಇವು ಹೊಟ್ಟೆ ನೋವನ್ನು ಉಂಟು ಮಾಡುತ್ತವೆ.

ಹಾನಿಕಾರಕವಾದ ಆಹಾರ ಮತ್ತು ಹಳಸಿದ ಆಹಾರವನ್ನು ಸೇವಿಸಬೇಡಿ. ಚಪ್ಪಲಿ ಧರಿಸದೆ ಹೊರಗಡೆ ಹೋಗಬಾರದು. ಜಿಲ್ಲಾ ವಿಪತ್ತು ನಿರ್ವಹಣೆ ಪ್ರಾಧಿಕಾರ ನೀಡಿರುವ ಈ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸಾರ್ವಜನಿಕರಲ್ಲಿ ಕೋರಿದ್ದಾರೆ.

# ಸೂಕ್ತ ನಿದ್ರೆಯಿಂದ ಆರೋಗ್ಯಯುತ ಜೀವನ

• ಉದಯವಾಹಿನಿ ಕಲಬುರಗಿ

ಪ್ರಸ್ತುತವಾಗಿ ಒತ್ತಡದ ದಾವಂತದ ಬದುಕಿನಲ್ಲಿ ಸರಿಯಾಗಿ ಊಟ ಮತ್ತು ನಿದ್ರೆ ಮಾಡಲು ಸಮಯ ಸಿಗದಂತಾಗಿ, ಚಿಕ್ಕ ವಯಸಿನಲ್ಲಿಯೇ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯಘಾತದಂತದ ರೋಗಗಳಿಗೆ ತುತ್ತಾಗಿ ಅಮೂಲ್ಯವಾದ ಜೀವನ ಕಳೆದುಕೊಳ್ಳುವ ಸ್ಥಿತಿ ಉಂಟಾಗಿರುವುದು ನಿಜಕ್ಕೂ ಶೋಚನೀಯ ಸಂಗತಿಯಾಗಿದೆ. ಆದ್ದರಿಂದ ವಯಸ್ಸಿಗೆ ತಕ್ಕಂತೆ ಗಾಡವಾದ ನಿದ್ರೆಯನ್ನು ಮಾಡಿದರೆ ಆರೋಗ್ಯಯುತವಾಗಿರಲು ಸಾಧ್ಯವಿದೆ ಎಂದು ಚಿಂತಕ ಸಿದ್ಧಾರೂಡ ಬಿರಾದಾರ ಹೇಳಿದರು.

ನಗರದ ಆಳಂದ ರಸ್ತೆಯ ಖಾದ್ರಿ ಚೌಕ್‌ನಲ್ಲಿರುವ 'ಸಕ್ಸಸ್ ಕಂಪಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಶುಕ್ರವಾರ ಸಂಜೆ ಜರುಗಿದ 'ರಾಷ್ಟ್ರೀಯ ನಿದ್ರಾ ದಿನಾಚರಣೆ'ಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಉಪನ್ಯಾಸಕ ಎಚ್.ಬಿ.ಪಾಟೀಲ ಮಾತನಾಡಿ, ಆಗ ತಾನೆ ಜನಿಸಿದ ಮಗುವಿನಿಂದ 6 ತಿಂಗಳ ಮಗುವಿಗೆ ದಿನಕ್ಕೆ 14-16 ಗಂಟೆಗಳು, 6 ತಿಂಗಳುಗಳಿಂದ 1 ವರ್ಷದ ಮಗುವಿಗೆ 12-14 ಗಂಟೆಗಳು, 1 ವರ್ಷದಿಂದ 2 ವರ್ಷದವರೆಗಿನ ಮಗುವಿಗೆ 11-14 ಗಂಟೆಗಳು, 3-5 ವರ್ಷಗಳ ಮಗುವಿಗೆ 10-13 ಗಂಟೆಗಳು, 6-13 ವರ್ಷದ ಮಕ್ಕಳಿಗೆ 9-11 ಗಂಟೆಗಳು, 14-17 ವರ್ಷದ ವಯಸ್ಕರಿಗೆ 8-10 ಗಂಟೆಗಳು ಮತ್ತು 18 ವರ್ಷ ಮೇಲ್ಪಟ್ಟವರಿಗೆ 7-8 ಗಂಟೆಗಳ ಕಾಲ ಗಾಡವಾದ ನಿದ್ರೆಯ ಅಗತ್ಯವಿದೆ ಎಂದು ವೈದ್ಯಲೋಕ ಹೇಳಿದೆ ಎಂದರು.



ಉದಯವಾಹಿನಿ ಚಿತ್ರ

ನಿದ್ರೆ ದೇವರು ನೀಡಿರುವ ಅಮೂಲ್ಯವಾದ ಕೊಡುಗೆ. ದಿನಪೂರ್ತಿ ದುಡಿದ ದೇಹಕ್ಕೆ ವಿಶ್ರಾಂತಿ ಅಗತ್ಯ. ಇದರಿಂದ ದೇಹ ಪುನರ್ ಚೈತನ್ಯ ಪಡೆಯುತ್ತದೆ. ಆದರೆ ಈಗಿನ ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಹಗಲು ಮತ್ತು ರಾತ್ರಿಯೆನ್ನದೇ ನಿರಂತರವಾಗಿ ದುಡಿಯುವ ಮೂಲಕ ದೇಹ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದೆ. ಸೂಕ್ತ ನಿದ್ರೆಯ ಕೊರತೆಯಿಂದ ಲವಲವಿಕೆ ಮಾಯವಾಗುವುದು, ನಿಶ್ಯಕ್ತತೆ, ಏಕಾಗ್ರತೆ ಕೊರತೆ, ತಲೆನೋವು, ಕೆಲಸದ ಸಾಮರ್ಥ್ಯ ಕ್ಷೀಣಿಸುವುದು, ಸಕ್ಕರೆ ಕಾಯಿಲೆ ಸೇರಿದಂತೆ ಅನೇಕ ಕಾಯಿಲೆಗಳು ಬೇಗನೆ ದೇಹ ಪ್ರವೇಶ ಪಡೆಯುತ್ತವೆ ಎಂದರು.

# ಗ್ಯಾರಂಟಿ ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ

### ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆರ್.ಪ್ರಕಾಶ್

• ಉದಯವಾಹಿನಿ ಚಿತ್ರದುರ್ಗ

ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಎಲ್ಲಾ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಚಿತ್ರದುರ್ಗ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆರ್.ಪ್ರಕಾಶ್ ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 'ಯುವನಿಧಿ ಅರಿವು ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು.

**ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷೆ ಪಂಚ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ, ಶಕ್ತಿಯೋಜನೆ, ಗೃಹಜ್ಯೋತಿ, ಗೃಹಲಕ್ಷ್ಮೀ ಹಾಗೂ ಯುವನಿಧಿ ಯೋಜನೆಗಳನ್ನು ಬಡವರು, ಕೂಲಿಕಾರ್ಮಿಕರು, ನಿರುದ್ಯೋಗಿ ಯುವಜನತೆ ಸದ್ಬಳಕೆ ಮಾಡಿಕೊಂಡು ಜೀವನ ಹಸನಾಗಿಸಿಕೊಳ್ಳಬೇಕು -ಆರ್.ಪ್ರಕಾಶ್**

2023-24ನೇ ಸಾಲಿನಲ್ಲಿ 180 ದಿನ ಪೂರೈಸಿರುವ ಪದವಿ ಮತ್ತು ಡಿಪ್ಲೋಮ ವೃತ್ತಿಪರ ತರಬೇತಿ ಪಡೆದ ನಿರುದ್ಯೋಗಿ ವಿದ್ಯಾರ್ಥಿಗಳು ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ ಫೆಬ್ರವರಿ ಅಂತ್ಯಕ್ಕೆ 5415 ಮಂದಿ ಈ ಯೋಜನೆಯ ಪ್ರಯೋಜನ ಪಡೆದಿದ್ದು, ಫೆಬ್ರವರಿ-2025 ಮಾಹೆಯವರೆಗೆ ಜಿಲ್ಲೆಯಲ್ಲಿ ಒಟ್ಟು ರೂ.10.49 ಕೋಟಿಗಳನ್ನು ಡಿಬಿಟಿ ಮೂಲಕ ಸಂದಾಯ ಮಾಡಲಾಗಿದೆ ಎಂದು ಹೇಳಿದರು.




ಉದಯವಾಹಿನಿ ಚಿತ್ರ

ಕಾರ್ಯಕ್ರಮದಲ್ಲಿ ಭರಮಸಾಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಶಶಿಕಲಾ, ಐಕ್ಯೂಎಸಿ ಸಂಚಾಲಕರಾದ ಎನ್.ಆರ್.ಮಮತಾ, ತಾಲ್ಲೂಕು ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಟಿ.ನಿರಂಜನ್, ಸಮಿತಿಯ ಸದಸ್ಯರಾದ ನಿತೀಶ್ ಮಲ್ಕಾರೆಡ್ಡಿ, ಶಶಿಕಿರಣ್, ಮಂಜುನಾಥ್, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಎಸ್.ಪಾಂಡುರಂಗಪ್ಪ, ಬಿ.ಆರ್.ನಾಗರಾಜ್ ಮತ್ತು ಕಾಲೇಜಿನ ಪ್ರಾಧ್ಯಾಪಕರು, ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

## ಮಿನಿ ನ್ಯೂಸ್

### ಕಾಮದೇವನ ದಹನ ಕಾರ್ಯಕ್ರಮ

• ಉದಯವಾಹಿನಿ ಬಳ್ಳಾರಿ

ಹೋಳಿ ಹಬ್ಬದ ಅಂಗವಾಗಿ ನಿನ್ನೆ ರಾತ್ರಿ ನಗರದ ಸತ್ಯನಾರಾಯಣ ಪೇಟೆಯ ರಾಘವೇಂದ್ರ ಸ್ವಾಮಿಗಳ ವೃತ್ತದಲ್ಲಿ ಕಾಮದೇವನ ದಹನ ಕಾರ್ಯಕ್ರಮ ನಡೆಯಿತು. ಹಿಂದೂ ಜಾಗರಣ ವೇದಿಕೆ ಹಾಗೂ ಬಿಜೆಪಿ ಪಕ್ಷದ ಮುಖಂಡರು ಇದರಲ್ಲಿ ಪಾಲ್ಗೊಂಡಿದ್ದರು.

ಶಿವನ ತಪಸ್ಸನ್ನು ಭಂಗ ಮಾಡಿದ ಮನ್ಮಥನ್ನು ಶಿವನು ತನ್ನ ಮೂರನೇ ಕಣ್ಣಿನಿಂದ ಸುಟ್ಟು ಹಾಕಿದ ಎಂಬ ಪ್ರತೀತಿ ಇದೆ. ಮನುಷ್ಯನಲ್ಲಿ ಕಾಮ ಎಂಬುದು ಆಸೆಯನ್ನು ಪ್ರತಿನಿಧಿಸುತ್ತದೆ. ಇಂತಹ ಗುಣವನ್ನು ನಾಶಪಡಿಸಬೇಕು ಎಂದು ಸಹ ಯುವಕರು ಕಾಮ ದಹನದಲ್ಲಿ ಪಾಲ್ಗೊಳ್ಳುವ ನಂಬಿಕೆ ಇದೆ. ಈ ಕ್ರಿಯೆಯನ್ನು ಯುವ ಸಮೂಹ ಲಬೋ ಲಭೋ ಎಂದು ಬಾಯಿ ಬಡಿದುಕೊಳ್ಳುತ್ತಲೇ ಸಂತಸದಿಂದಲೇ ಕಾಮನ ದಹನ ಕ್ರಿಯೆಯಲ್ಲಿ ಪಾಲ್ಗೊಳ್ಳುವುದು ವಿಶೇಷ

### ಅಂಗಡಿ ಕಳವುಗೈಯುತ್ತಿದ್ದಾಗಲೇ ಕಳ್ಳರನ್ನು ಹಿಡಿದ ಊರವರು

• ಉದಯವಾಹಿನಿ ಸುಳ್ಯ

ಕನಕಮಜಲಿನಲ್ಲಿ ಅಂಗಡಿ ಕಳವು ನಡೆಸುತ್ತಿದ್ದ ಇಬ್ಬರನ್ನು ಊರವರು ಹಿಡಿದು, ವಿಚಾರಿಸಿ ಪೋಲೀಸರಿಗೆ ಒಪ್ಪಿಸಿದ ಘಟನೆ ನಡೆದಿದೆ. ಕನಕಮಜಲಿನ ಶ್ರೀ ಗಣೇಶ್ ಸ್ಟೋರ್ ಅಂಗಡಿಯ ಒಳಗಿನಿಂದ ಬೆಳಗ್ಗಿನ ಜಾವ 3.30ರ ವೇಳೆಗೆ ಶಬ್ದ ಕೇಳಿ ಕಟ್ಟಡದ ಮಾಲಿಕರ ಮನೆಯವರು ಎಚ್ಚರಗೊಂಡು ನೋಡಿದಾಗ ಅಂಗಡಿಯ ಎದುರಿನಲ್ಲಿ ಕಾರೊಂದು ನಿಲ್ಲಿಸಿತ್ತು, ಅಂಗಡಿಯ ಒಳಗೆ ಶಬ್ದ ಕೇಳುತ್ತಿತ್ತು ಮತ್ತು ಅಂಗಡಿಯ ಶೆಟರ್ ಒಡೆದ ರೀತಿಯಲ್ಲಿತ್ತು. ಅವರು ಕನಕಮಜಲಿನ ಸ್ಥಳೀಯರಿಗೆ ಈ ವಿಷಯ ತಿಳಿಸಿದರು. ತಕ್ಷಣ ಅಂಗಡಿಯೆದುರು ಜನ ಸೇರಿ ಅಂಗಡಿಯ ಎದುರು ನಿಂತಿದ್ದ ಹಾಗೂ ಅಂಗಡಿಯೊಳಗೆ ಕಳವು ನಡೆಸುತ್ತಿದ್ದ ಕಳ್ಳನನ್ನು ಹಿಡಿದಿದ್ದಾರೆ. ವಿಚಾರಿಸಿದಾಗ ಬಂಟ್ವಾಳದ ಸಜೀಪ ಮೂಲದ ಸುಹೈಲ್ ಹಾಗು ರಿಯಾಜ್ ಎಂದು ಪರಿಚಯ ಹೇಳಿದ್ದಾರೆ, ಅಲ್ಲದೆ ಬಾಡಿಗೆ ಕಾರಿನಲ್ಲಿ ಅವರು ಬಂದಿದ್ದರೆಂದು ತಿಳಿದುಬಂದಿದೆ. ಸ್ಥಳೀಯರು ಸೇರಿ ಕಳವು ನಡೆಸುತ್ತಿದ್ದ ಕಳ್ಳರನ್ನು ಹಿಡಿದು ವಿಚಾರಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

### ನಿಷೇಧಿತ ಪಿಎಫ್‌ಐ ಮತ್ತೆ ಆಕ್ಟಿವ್: ಅಕ್ರಮ ಪಿಸ್ತೂಲ್ ಮಾರಾಟ ಜಾಲ ಭೇದಿಸಿದ ಪೊಲೀಸರು

• ಉದಯವಾಹಿನಿ ಮಂಗಳೂರು

ಬೃಹತ್ ಅಕ್ರಮ ಪಿಸ್ತೂಲ್ ಮಾರಾಟ ಜಾಲವನ್ನು ಮಂಗಳೂರು ಸಿಸಿಬಿ ಪೊಲೀಸರು ಭೇದಿಸಿದ್ದು, ಕರಾವಳಿಯಲ್ಲಿ ನಿಷೇಧಿತ ಪಿಎಫ್‌ಐ ಸಂಘಟನೆ ಮತ್ತೆ ಆಕ್ಟಿವ್ ಆಗಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ಕೇರಳ ಮೂಲದ ನಟೋರಿಯಸ್ ವೆಪೆನ್ ಡೀಲರ್ ಸೇರಿದಂತೆ ಐವರನ್ನು ಮಂಗಳೂರು ಸಿಸಿಬಿ ಬಂಧಿಸಿದೆ. ಕೇರಳದ ಮೂಲದ ಕ್ರಿಮಿನಲ್‌ಗಳಾದ ಅಬ್ದುಲ್ ಲತೀಫ್, ಮನ್ಸೂರು, ನೌಫಾಲ್, ಮಹಮ್ಮದ್ ಅಸ್ಗರ್, ಮಹಮ್ಮದ್ ಸಾಲಿ ಬಂಧಿತರು. ಬಂಧಿತರಿಂದ ಮೂರು ಪಿಸ್ತೂಲ್ ಹಾಗೂ 6 ಜೀವಂತ ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ. ಮುಂಬೈನಿಂದ ಬೃಹತ್ ಅಕ್ರಮ ಪಿಸ್ತೂಲ್ ಸರಬರಾಜು ನಡೆಯುತ್ತಿತ್ತು. ಸಮಾಜಘಾತುಕ ಶಕ್ತಿಗಳಿಗೆ ಶಸ್ತ್ರಾಸ್ತ್ರ ಸರಬರಾಜಾಗುತ್ತಿತ್ತು.

### ಕಾಡಾನೆ ದಾಳಿ: ಮಹಿಳೆ ಸಾವು

• ಉದಯವಾಹಿನಿ ಹಾಸನ

ಕಾಡಾನೆ ದಾಳಿಗೆ ಮಹಿಳೆಯೊಬ್ಬರು ಬಲಿಯಾಗಿರುವ ಘಟನೆ ಜಿಲ್ಲೆಯ ಬೇಲೂರು ತಾಲ್ಲೂಕಿನ ಕೋಗೋಡು ಗ್ರಾಮದಲ್ಲಿ ನಡೆದಿದೆ. ಇದು ಕಳೆದ 2 ತಿಂಗಳಿನಲ್ಲಿ ನಡೆದ ನಾಲ್ಕನೇ ಸಾವಿನ ಪ್ರಕರಣವಾಗಿದೆ.

ಸುಶೀಲಮ್ಮ (63) ಕಾಡಾನೆ ದಾಳಿಗೆ ಮೃತಪಟ್ಟ ಮಹಿಳೆ. ಭಾನುಪ್ರಕಾಶ್ ಎಂಬುವವರ ಕಾಫಿ ತೋಟದಲ್ಲಿ ಕೆಲಸ ಮುಗಿಸಿ ಸುಶೀಲಮ್ಮ ವಾಪಸ್ ಆಗುತ್ತಿದ್ದಾಗ ದಿಢೀರ್ ಕಾಡಾನೆಯೊಂದು ಪ್ರತ್ಯಕ್ಷವಾಗಿ ದಾಳಿ ನಡೆಸಿದೆ. ಸುಶೀಲಮ್ಮನನ್ನ ಸೊಂಡಿಲಿನಿಂದ ಎತ್ತಿ ಬಿಸಾಡಿ, ತಲೆ ಭಾಗವನ್ನು ತುಳಿದು ಸಾಯಿಸಿದೆ. ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು, ಅರೇಹಳ್ಳಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

### ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಶಿಕ್ಷಕರ, ಪಾಲಕರ ಪಾತ್ರ ಮಹತ್ವದ್ದಾಗಿರುತ್ತದೆ

# ಜೀವನದ ಸಂಪತ್ತುಗಳಲ್ಲಿ ಶಿಕ್ಷಣ ಸಂಪತ್ತು ಅಮೂಲ್ಯ:ಡಾ.ಪ್ರಭುಗೌಡ

• ಉದಯವಾಹಿನಿ ಹೂವಿನ ಹಿಪ್ಪರಗಿ

ಜೀವನದ ಸಂಪತ್ತುಗಳಲ್ಲಿ ಶಿಕ್ಷಣ ಸಂಪತ್ತು ಅಮೂಲ್ಯವಾದದ್ದು. ಅದನ್ನು ಉಳಿದ ಸಂಪತ್ತಿನಂತೆ ಕದಿಯಾಗುವುದಿಲ್ಲ. ಇಂತಹ ಸಂಪತ್ತು ವಿದ್ಯಾರ್ಥಿಗಳು ತಮ್ಮದಾಗಿಸಿಕೊಳ್ಳಲು ನಿರಂತರ ಪರಿಶ್ರಮ ಅಗತ್ಯವಾಗಿರುತ್ತದೆ ಎಂದು ವಿಜಯಪುರದ ಅನುಗ್ರಹ ಆಸ್ಪತ್ರೆಯ ಮುಖ್ಯಸ್ಥರಾದ ಖ್ಯಾತ ನೇತ್ರ ತಜ್ಞ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಪ್ರಭುಗೌಡ ಬಿ.ಎಲ್ ಹೇಳಿದರು. ಹೂವಿನಹಿಪ್ಪರಗಿಯ ಆಶೀರ್ವಾದ ಶಿಕ್ಷಣ ಸಂಸ್ಥೆಯಲ್ಲಿ ಸಂಜೆ ಏರ್ಪಡಿಸಿದ್ದ ಆಶೀರ್ವಾದ ಪಬ್ಲಿಕ್ ಸ್ಕೂಲ್, ಪರಿವರ್ತನ ವಿದ್ಯಾಮಂದಿರದ ಅಭಿವ್ಯಕ್ತಿ ಸಂಭ್ರಮ 2024-25 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಶಿಕ್ಷಕರ, ಪಾಲಕರ ಪಾತ್ರ ಮಹತ್ವದ್ದಾಗಿರುತ್ತದೆ. ಮಕ್ಕಳು ಶಾಲೆಯಿಂದ ಮನೆಗೆ ಬಂದಾಗ ಪಾಲಕರು ಮಕ್ಕಳಿಗೆ ಸಮಯ ಕೊಡುವದನ್ನು ಮರೆಯಬಾರದು. ಪಾಲಕರು ಮಕ್ಕಳ ಕಡೆಗೆ ಗಮನ ಹರಿಸದೇ ಹೋದರೆ ಅವರು ದಾರಿ ತಪು?ಪವ ಸಾಧ್ಯತೆ ಇದೆ. ಮಕ್ಕಳು ಯಾವ ಕ್ಷೇತ್ರದ ಬಗ್ಗೆ ಆಸಕ್ತಿ ಹೊಂದುತ್ತಾರೋ ಅವರಿಗೆ ಆ ಕ್ಷೇತ್ರದಲ್ಲಿ ಪ್ರೋತ್ಸಾಹ ನೀಡುವಂತಾಗಬೇಕು. ಜೀವನದಲ್ಲಿ ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು ಎನ್ನುವುದನ್ನು ಪಾಲಿಸಬೇಕು ಅಂದಾಗ ಮಾತ್ರ ಸಾಧನೆ ಮಾಡಲು ಸಾಧ್ಯ.



ಉದಯವಾಹಿನಿ ಚಿತ್ರ

ಈ ಶಾಲೆಯ ರಾಷ್ಟ್ರೀಯ ಮಟ್ಟದ ಕ್ರಿಕೆಟ್‌ದಲ್ಲಿ ಭಾಗವಹಿಸಿದ್ದು ಹೆಮ್ಮೆ ಪಡುವಂಥದ್ದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದರು.

ವಕೀಲ ಜಿ.ಬಿ.ಬಾಗೇವಾಡಿ ಮಾತನಾಡಿದರು. ಅಧ್ಯಕ್ಷತೆಯನ್ನು ಆಶೀರ್ವಾದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ವ್ಹಿ.ಸಜ್ಜನ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಬಸವರಾಜ ತಿಳಗೂಳ, ಪಿಕೆಪಿಎಸ್ ಅಧ್ಯಕ್ಷ ಪಿ.ಜಿ.ಗೋಠೆದ, ಆಶೀರ್ವಾದ ಶಿಕ್ಷಣ ಸಂಸ್ಥೆಯ ನಿರ್ದೇಶಕ ರಾಜಶೇಖರ ಸಜ್ಜನ, ಸುರೇಶ ಸಜ್ಜನ, ಸಂಗಣ್ಣ ಹುನಗುಂದ, ಆನಂದ ಪತ್ತಾರ, ಸಿಆರ್‌ಪಿ ಸುಮಿತ್ರಾ ತೋಟದ, ಕಾನಿಪ ಸಂಘದ ಜಿಲ್ಲಾ ಅಧ್ಯಕ್ಷ ಪ್ರಕಾಶ ಬೆಣ್ಣೂರ, ಸಂಸ್ಥೆಯ ಕಾರ್ಯದರ್ಶಿ ವಿದ್ಯಾಶ್ರೀ ಸಜ್ಜನ ವೇದಿಕೆಯಲ್ಲಿದ್ದರು.

ವೈ.ಎಸ್.ಬೇಲಿ ಸ್ವಾಗತಿಸಿದರು. ಬಿ.ಟಿ.ದೊಡಮನಿ ನಿರೂಪಿಸಿದರು. ಇದೇ ಸಂದರ್ಭದಲ್ಲಿ ವಿವಿಧ ವರ್ಗಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉತ್ತಮ ಬಾಲಕ, ಬಾಲಕಿ ಪ್ರಶಸ್ತಿ ವಿತರಣೆ, ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳ ಸನ್ಮಾನ ಜರುಗಿತು. ನಂತರ ಮಕ್ಕಳಿಂದ ಜರುಗಿದ ವಿವಿಧ ಸಾಂಸ್ಕತಿಕ ಕಾರ್ಯಕ್ರಮಗಳು ಮನಸೂರೆಗೊಂಡವು.

**ಶಿಕ್ಷಣ ಎನ್ನುವದು ತಪಸ್ಸು ಇದ್ದ ಹಾಗೆ. ಮಕ್ಕಳು ಉತ್ತಮ ಶಿಕ್ಷಣವನ್ನು ಪಡೆದುಕೊಂಡು ಉತ್ತಮ ನಾಗರಿಕರಾಗಬೇಕು. ಪಾಲಕರು ತಮ್ಮ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ನೀಡುವ ಮೂಲಕ ಅವರ ಆರೋಗ್ಯದ ಕಡೆಗೆ ಗಮನ ಹರಿಸಬೇಕು. ಇದು ಶಿಕ್ಷಣ ಕಲಿಕೆಗೂ ಪೂರಕವಾಗುತ್ತದೆ. ಅತಿ ಮೊಬೈಲ್ ಬಳಕೆಯಿಂದ ಕಣ್ಣುಗಳ ಮೇಲೆ ಪರಿಣಾಮ ಬೀರುತ್ತದೆ. ಆದಷ್ಟು ಪಾಲಕರು ಮಕ್ಕಳು ಮೊಬೈಲ್ ಬಳಕೆ ಮಾಡದಂತೆ ಗಮನ ಹರಿಸಬೇಕು. ಈ ಶಾಲೆಯು ಮಕ್ಕಳಲ್ಲಿರುವ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸಲು ಅಭಿವ್ಯಕ್ತಿ ಸಂಭ್ರಮ ಹಮ್ಮಿಕೊಂಡಿರುವದು ಶ್ಲಾಘನೀಯ. ಈ ಶಾಲೆಯು ವಿವಿಧ ಗಣ್ಯರಿಂದ ದೇಣಿಗೆ ಪಡೆದುಕೊಂಡು ಗ್ರಾಮೀಣ ಭಾಗದ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುವ ಕೈಂಕರ್ಯ ಮಾಡುತ್ತಿರುವದು ಸಂತಸದಾಯಕ ಸಂಗತಿ. ಈ ಶಾಲೆಯಲ್ಲಿ ಕಲಿಯುವ ಮಕ್ಕಳು ಸಾಧನೆ ಮಾಡುವ ಛಲ ಮೈಗೂಡಿಸಿಕೊಳ್ಳುವಂತಾಗಲಿ -ಡಿ.ಬಿ.ವಡವಡಗಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ, ಹಿರಿಯ ಪತ್ರಕರ್ತ**

### ಮದುವೆಯಾಗಲು ಒಪ್ಪದ ಸ್ವಾತಿಯನ್ನು ಕೊಂದು

# ನದಿಗೆ ಎಸೆದಿದ್ದ ನಯಾಜ್ ಬಂಧನ

• ಉದಯವಾಹಿನಿ ಹಾವೇರಿ

ಮದುವೆಯಾಗಲು ಒಲ್ಲದ ಯುವತಿಯ ಮೇಲೆ ಹಲ್ಲೆ ನಡೆಸಿ ಕೊಂದು ತುಂಗಭದ್ರಾ ನದಿಗೆ ಎಸೆದ ಹಂತಕನನ್ನು ಹಲಗೇರಿ ಪೊಲೀಸರು ಬಂಧಿಸಿದ್ದಾರೆ. ರಟ್ಟಿಹಳ್ಳಿ ತಾಲ್ಲೂಕಿನ ಮಸೂರು ಗ್ರಾಮದ ಸ್ವಾತಿ(22) ಕೊಲೆಯಾದ ಯುವತಿಯಾಗಿದ್ದು ಹಂತಕನನ್ನು ಹಿರೇಕೇರೂರು ಹಳೇ ವೀರಾಪುರದ ನಯಾಜ್ ಎಂದು ತಿಳಿದು ಬಂದಿದೆ.

ಇತ್ತೀಚೆಗೆ ನಯಾಜ್‌ಗೆ ನಿಶ್ಚಿತಾರ್ಥ ನಡೆದಿತ್ತು. ಈ ವೇಳೆ ನಯಾಜ್ ಸ್ವಾತಿ ಹಿಂದೆ ಬಿದ್ದು ನನ್ನನ್ನು ಮದುವೆಯಾಗುವಂತೆ ಪೀಡಿಸಿದ್ದ. ಆದರೆ ಅದಕ್ಕೆ ಆಕೆ ಬುದ್ದಿಮಾತು ಹೇಳಿ ನಮ್ಮ ಧರ್ಮಗಳು ಬೇರೆ, ನಿನ್ನನ್ನು ಮದುವೆಯಾಗುವುದಿಲ್ಲ ಎಂದು ನಿರಾಕರಿಸಿದ್ದಾಳೆ. ಆದರೂ ಆತ ಆಕೆಯನ್ನು ಬಿಡದೇ ಗೆಳತಿಯರ ಬಳಿ ಸ್ವಾತಿಯನ್ನು ಒಪ್ಪಿಸುವಂತೆ ದುಂಬಾಲು ಬಿದ್ದಿದ್ದಾನೆ.

ಕೊನೆಯದಾಗಿ ನಿನ್ನ ಜೊತೆ ಮಾತನಾಡಬೇಕೆಂದು ಕೆರೆದಿದ್ದ. ಕಳೆದ ಮಾ.3 ರಂದು ಮುಂಜಾನೆ ಬಾಡಿಗೆ ಕಾರು ಪಡೆದ ನಯಾಜ್ ರಟ್ಟಿಹಳ್ಳಿಯಿಂದ ಸ್ವಾತಿಯನ್ನು ರಾಣೆಬೆನ್ನೂರು ಹೊರವಲಯದ ಸುವರ್ಣ ಪಾರ್ಕ್‌ಗೆ ಕರೆದುಕೊಂಡು ಹೋಗಿ ನಂತರ ಆತನ ಸ್ನೇಹಿತರಾದ ದುರ್ಗಾಚಾರಿ ಮತ್ತು ವಿನಾಯಕನನ್ನು ಕರೆಸಿಕೊಂಡಿದ್ದ.




ಉದಯವಾಹಿನಿ ಚಿತ್ರ

ಮತ್ತೆ ಆಕೆಯ ಬಳಿ ಮದುವೆಯಾಗುವಂತೆ ಒತ್ತಡ ಹೇರಿ ಆದರೆ ಆಕೆ ಒಲ್ಲೆ ಎಂದು ಅಲ್ಲಿಂದ ಹೊರಟಾಗ ನಯಾಜ್ ಮತ್ತು ಆತನ ಸ್ನೇಹಿತರು ಆಕೆಯನ್ನು ತಡೆದು ಕಬ್ಬಣ ಕುಂತಿಮಠ ಬಳಿ ಪಾಳುಬಿದ್ದ ಶಾಲೆಗೆ ಎಳೆದೊಯ್ದು ಹಲ್ಲೆ ನಡೆಸಿ ನಂತರ ಟವಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದಾರೆ.

ಅದೇ ದಿನ ಕಾರು ಡಿಕ್ಕಿಯಲ್ಲಿ ಸ್ವಾತಿ ಶವ ಇಟ್ಟುಕೊಂಡು ರಾತ್ರಿ 11 ಗಂಟೆ ವೇಳೆಯಲ್ಲಿ ಕೂಸಗಟ್ಟಿನಂದಿಗುಡಿ ಗ್ರಾಮದ ಮಧ್ಯೆ ಇರುವ ತುಂಗ ಭದ್ರಾನದಿ ಸೇತುವೆ ಬಳಿ ಬಂದು ಮೇಲಿಂದ ಸ್ವಾತಿ ಶವವನ್ನು ನದಿಗೆ ಎಸೆದು ಪಾರಿಯಾಗಿದ್ದರು. ನಂತರ ಮಾ.6 ರಂದು ಪತ್ತೆಪುರ ಗ್ರಾಮದ ಹದ್ದಿ ಆಂಜನೇಯ ದೇವಸ್ಥಾನದ ನದಿ ದಂಡೆ ಮಹಿಳೆಯ ಅರೆಬರೆ ದೇಹ ಕಂಡುಬಂದಿದೆ.


## ಅಬಕಾರಿ ಹಗರಣ: ಇ.ಡಿ ವಿರುದ್ಧ ಕಾನೂನು ಹೋರಾಟ; ಸಚಿವ



**ಚೆನ್ನೈ:** ಚಿಲ್ಲರೆ ಮದ್ಯ ಮಾರಾಟ ನಿಗಮದಲ್ಲಿ 1000 ಕೋಟಿ ಅಕ್ರಮ ನಡೆದಿದೆ ಎಂದು ಆಪಾದಿಸಿ ಜಾರಿ ನಿರ್ದೇಶನಾಲಯ ಕೈಗೊಂಡಿರುವ ಕ್ರಮ ಆಧಾರರಹಿತವಾಗಿದೆ. ಇದನ್ನು ಕಾನೂನಾತ್ಮಕ ವಾಗಿ ಎದುರಿಸುತ್ತೇವೆ ಎಂದು ತಮಿಳುನಾಡು ಅಬಕಾರಿ ಸಚಿವ ವಿ. ಸೆಂಥಿಲ್ ಬಾಲಾಜಿ ಶುಕ್ರವಾರ ತಿಳಿಸಿದ್ದಾರೆ. ಸರ್ಕಾರಿ ಒಡೆತನದ ತಮಿಳುನಾಡು ರಾಜ್ಯ ಸಹಕಾರ ವ್ಯಾಪಾರ ನಿಗಮ ಪಾರದರ್ಶಕವಾಗಿ ಕೆಲಸ ಮಾಡುತ್ತಿದೆ.

ಇಡಿ ಅಧಿಕಾರಿಗಳು ಯಾವ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಿ ಕ್ರಮ ಜರುಗಿಸುತ್ತಿದ್ದಾರೆ ಎಂಬ ಬಗ್ಗೆ ಇನ್ನೂ ಸ್ಪಷ್ಟಪಡಿಸಿಲ್ಲ. ನಾವೂ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಸೆಂಥಿಲ್ ಬಾಲಾಜಿ ತಿಳಿಸಿದರು. ಈಗಾಗಲೇ ನಾಯಕರೊಬ್ಬರು 1000 ಕೋಟಿ ಹಗರಣ ಎಂದು ಹೇಳಿಕೊಂಡಿದ್ದರು. ಆನಂತರ ಇಡಿ ಮತ್ತೆ ತನಿಖೆ ಶುರು ಮಾಡಿದೆ ಎಂದು ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಹೆಸರನ್ನು ಹೇಳದೇ ಸೆಂಥಿಲ್ ಟೀಕಿಸಿದರು.

## ಅಮೇರಿಕನ್ ಏರ್‌ಲೈನ್ಸ್ ವಿಮಾನಕ್ಕೆ ಬೆಂಕಿ




**ಡೆನ್ವರ್:** ಹಾರಾಟದ ವೇಳೆ ಸಮಸ್ಯೆ ಉಂಟಾಗಿ ಇಲ್ಲಿನ ಅಂತ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ನಂತರ ಅಮೇರಿಕನ್ ಏರ್‌ಲೈನ್ಸ್ ವಿಮಾನವು ಬೆಂಕಿಗೆ ಆಹುತಿಯಾಗಿದ್ದು, ಅಚ್ಚರಿಯಲ್ಲಿ ಪ್ರಯಾಣಿಕರು ಜೀವ ಉಳಿಸಿಕೊಳ್ಳಲು ಹೊರಗೆ ಹಾರಿದ್ದಾರೆ. ಕೊಲೊರಾಡೋ ಸ್ಪ್ರಿಂಗ್ಸ್ ವಿಮಾನ ನಿಲ್ದಾಣದಿಂದ ಡಲ್ಲಾಸ್ ಫೋರ್ಟ್ ವರ್ತ್‌ಗೆ ತೆರಳುತ್ತಿದ್ದ ಅಮೇರಿಕನ್ ರ್‌ಏಲೈನ್ಸ್ ಬೋಯಿಂಗ್ 737-800 ವಿಮಾನದ ಎಂಜಿನ್ ಸಮಸ್ಯೆ ಗಮನಿಸಿ ಪೈಲಟ್ ತುರ್ತು ವರದಿ ಮಾಡಿದ ನಂತರ ಹತ್ತಿರದ ಡೆನ್ವರ್‌ಗೆ ತಿರುಗಿಸಲಾಯಿತು ಮತ್ತು ಸುರಕ್ಷಿತವಾಗಿ ಇಳಿಯಿತು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಸುದ್ದಿವಾಹಿನಿಗಳು ಪೋಸ್ಟ್ ಮಾಡಿದ ಫೋಟೋಗಳು, ವೀಡಿಯೋಗಳು ವಿಮಾನವನ್ನು ಸುತ್ತುವರೆದಿರುವ ಹೊಗೆ, ವಿಮಾನದ ರೆಕ್ಕೆಯ ಮೇಲೆ ಕೆಲವು ಪ್ರಯಾ ಣಿಕರು ರಕ್ಷಣಾ ಸಿಬ್ಬಂದಿ ನಿಂತಿರುವುದನ್ನು ತೋರಿಸಿದೆ. ಪ್ರಯಾಣಿಕರು ಸ್ಲೈಡ್‌ಗಳನ್ನು ಬಳಸಿ ಇಳಿಸಲಾಗಿದೆ ಎಂದು ಹೇಳಿದೆ. ವಿಮಾನವು ಎಂಜಿನ್‌ನಲ್ಲಿ ಸಮಸ್ಯೆ ಉಂಟಾಗಿದೆಎಂದು ವಿಮಾನಯಾನ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ. ನಮ್ಮ ಸಿಬ್ಬಂದಿ ಸದಸ್ಯರು, ತಂಡ ಮತ್ತು ಪ್ರಥಮ ಪ್ರತಿ ಕ್ರಿಯೆ ನೀಡಿದವರಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ಹೇಳಿದರು. ಅಗ್ನಿಶಾಮಕ ದಳದವರು ವಿಮಾನಕ್ಕೆ ಹೊತ್ತಿಕೊಂಡಿದ್ದ ಬೆಂಕಿಯನ್ನು ಸಂಪೂರ್ಣ ನಂದಿಸಿದರು.ಘಾನೆ ಸಂಬಂದ ತನಿಖೆ ಆರಂಭಿಸಲಾಗಿದೆ ಎಂದು ವಿಮಾನ ನಿಲ್ದಾಣದ ವಕ್ತಾರರು ಮಾಧ್ಯಮಗಳಿಗೆ ತಿಳಿಸಿದರು.

**ಅಚ್ಚರಿಯ ರೀತಿಯಲ್ಲಿ ಪ್ರಯಾಣಿಕರು ಪಾರು**

**ವಿಮಾನವು ಯಾವಾಗ ಬೆಂಕಿಗೆ ಆಹುತಿಯಾಯಿತು ಎಂಬು ದರ ಕುರಿತು ತಕ್ಷಣದ ಸ್ಪಷ್ಟೀಕರಣವಿಲ್ಲ, ಯಾವುದೇ ಗಾಯಗಳು ವರದಿಯಾಗಿಲ್ಲ. 172 ಪ್ರಯಾಣಿಕರು, ಆರು ಸಿಬ್ಬಂದಿಯನ್ನು ಸುರಕ್ಷಿತವಾಗಿ ಟರ್ಮಿನಲ್‌ಗೆ ಕರೆದೊಯ್ಯಲಾಗಿದೆ ಎಂದು ವಿಮಾನಯಾನ ಅಧಿಕಾರಿಗಳು ತಿಳಿಸಿದ್ದಾರೆ.**

## ರೈಲು ಅಪಹರಣದ ಕುರಿತು ಪಾಕ್ ಆರೋಪಗಳಿಗೆ ಉತ್ತರ ಕೊಟ್ಟ ಭಾರತ



**ನವದೆಹಲಿ:** ಬಲೂಚ್ ಬಂಡುಕೋರರು ರೈಲು ಅಪಹರಣ ಪ್ರಕರಣದ ಹಿಂದೆ ನವದೆಹಲಿ ಇದೆ ಎಂಬ ಪಾಕಿಸ್ತಾನದ ಆರೋಪ ಗಳನ್ನು ಭಾರತ ತಿರಸ್ಕರಿಸಿದೆ. ದಶಕಗಳಿಂದ ಸ್ವಾತಂತ್ರ್ಯ ಚಳವಳಿ ನಡೆಯುತ್ತಿರುವ ಬಲೂಚಿಸ್ತಾನದ ಪ್ರಕ್ಷುಬ್ಧ ಪ್ರದೇಶದಲ್ಲಿ ತೊಂದರೆಯನ್ನು ಉಂಟುಮಾಡುವಲ್ಲಿ ನವದೆಹಲಿ ಪಾತ್ರದ ಬಗ್ಗೆ ಸುಳಿವು ನೀಡಿದ ನಂತರ ಭಾರತವು ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿದೆ. ಪಾಕಿಸ್ತಾನವು ಇತರ ರನ್ನು ದೂಷಿಸುವ ಬದಲು ಆಂತರಿಕವಾಗಿ ನೋಡ ಬೇಕು ಎಂದು ಭಾರತ ಸರ್ಕಾರ ಹೇಳಿದೆ, ಇಸ್ಲಾಮಾಬಾದ್ ಭಯೋತ್ಪಾದಕ ನೆಲೆಯಾಗಿದೆ ಎಂಬ ತನ್ನ ಹಿಂದಿನ ನಿಲುವನ್ನು ಪ್ರತಿಧ್ವನಿಸಿದೆ. ಪಾಕಿಸ್ತಾನ ಮಾಡಿರುವ ಆಧಾರರಹಿತ ಆರೋಪಗಳನ್ನು ನಾವು ಬಲವಾಗಿ ತಿರಸ್ಕರಿಸುತ್ತೇವೆ. ಜಾಗತಿಕ ಭಯೋತ್ಪಾದನೆಯ ಕೇಂದ್ರಬಿಂದು ಎಲ್ಲಿದೆ ಎಂದು ಇಡೀ ಜಗತ್ತಿಗೆ ತಿಳಿದಿದೆ. ಪಾಕಿಸ್ತಾನವು ಬೆರಳು ತೋರಿಸುವ ಬದಲು ಆಂತರಿಕವಾಗಿ ನೋಡಬೇಕು, ತನ್ನದೇ ಆದ ಆಂತರಿಕ ಸಮಸ್ಯೆಗಳು, ವೈಫಲ್ಯಗಳಿಗೆ ದೂಷಣೆಯನ್ನು ಇತರರ ಮೇಲೆ ವರ್ಗಾಯಿಸಬಾರದು ಎಂದು ವಿದೇಶಾಂಗ ಸಚಿವಾಲಯದ ಹೇಳಿಕೆ ತಿಳಿಸಿದೆ.

## ಸೂಟ್‌ಕೇಸ್‌ನಲ್ಲಿತ್ತು ಮಹಿಳೆಯ ತಲೆ

**ಪಾಲ್ಘರ್:** ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಸೂಟ್‌ಕೇಸ್‌ನಲ್ಲಿ ಮಹಿಳೆಯ ಕತ್ತರಿಸಿದ ತಲೆ ಪತ್ತೆಯಾಗಿದೆ. ಘಟನೆ ಕುರಿತಂತೆ ತನಿಖೆ ಆರಂಭಿಸಿರುವ ಪೊಲೀಸರು ಆರೋಪಿಗಳ ಪತ್ತೆಗೆ ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ವಿರಾರ್ ಪ್ರದೇಶದ ಪಿರ್ಕುಂದಾ ದರ್ಗಾ ಬಳಿ ಸಿಕ್ಕ ಸೂಟ್‌ಕೇಸ್‌ನಲ್ಲಿ ಮಹಿಳೆ ತಲೆ ಪತ್ತೆಯಾಗಿದೆ. ಕೆಲವು ಸ್ಥಳೀಯ ಮಕ್ಕಳು ಬಿಟ್ಟುಹೋದ ಸೂಟ್ ಕೇಸ್‌ಅನ್ನು ಕಂಡು ಕುತೂಹಲದಿಂದ ಅದನ್ನು ತೆರೆದರು. ಅದರಲ್ಲಿದ್ದ ಮಹಿಳೆಯ ತಲೆಯನ್ನು ಕಂಡು ಭಯಭೀತರಾಗಿ ನಂತರ ಪೊಲೀಸರಿಗೆ ಮಾಹಿತಿ ನೀಡಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಸಾಕ್ಷ್ಯಗಳನ್ನು ಸಂಗ್ರಹಿಸಲು ವಿಧಿವಿಜ್ಞಾನ ತಜ್ಞರು ಸ್ಥಳಕ್ಕೆ ಭೇಟಿ ನೀಡಲಿದ್ದಾರೆ ಎಂದು ಮಾಂಡ್ವಿ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ಯಾರೋ ದುಷ್ಕರ್ಮಿಗಳು ಮಹಿಳೆಯನ್ನು ಬೇರೆ ಕಡೆ ಕೊಲೆ ಮಾಡಿ ರುಂಡ ಮುಂಡವನ್ನು ಬೇರ್ಪಡಿಸಿ ಬಿಸಾಡುವ ಉದ್ದೇಶದಿಂದ ಮಹಿಳೆಯ ತಲೆಯನ್ನು ಸೂಟ್ ಕೇಸ್‌ನಲ್ಲಿಟ್ಟು ಪರಾರಿಯಾಗಿರುವ ಸಾಧ್ಯತೆಗಳಿವೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

## ಔರಂಗಜೇಬನ ಆಡಳಿತಕ್ಕಿಂತ ಕೆಟ್ಟದಾಗಿದೆ ಮಹಾರಾಷ್ಟ್ರದ ಬಿಜೆಪಿ ಸರ್ಕಾರ

**ಮುಂಬೈ:** ಕೇಸರಿ ಪಕ್ಷದ ಆಡಳಿತದಿಂದಾಗಿ ರೈತರು ಸಾಯುತ್ತಿದ್ದಾರೆ. ಮಹಾರಾಷ್ಟ್ರದ ಬಿಜೆಪಿ ಸರ್ಕಾರವು ಔರಂಗಜೇಬನ ಆಡಳಿತಕ್ಕಿಂತ ಕೆಟ್ಟದಾಗಿದೆ' ಎಂದು ಶಿವಸೇನಾ ಮುಖಂಡ ಸಂಜಯ್ ರಾವುತ್ ಶುಕ್ರವಾರ ಆರೋಪಿಸಿದ್ದಾರೆ. ರಾಜ್ಯದಲ್ಲಿ ರೈತರು, ನಿರುದ್ಯೋಗಿಗಳು ಹಾಗೂ ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಔರಂಗಜೇಬ್ ಮೃತಪಟ್ಟು 400 ವರ್ಷಗಳಾಗಿವೆ. ಅವರನ್ನು ಮರೆತುಬಿಡಿ. ಆದರೆ, ಮಹಾರಾಷ್ಟ್ರದಲ್ಲಿ ರೈತರ ಸಾವಿಗೆ ಔರಂಗಜೇಬ ಕಾರಣವೇ? ಅವರ ಸಾವಿಗೆ ನೀವೇ ಕಾರಣ. ಮೊಘಲ್ ದೊರೆ ಒಂದೊಮ್ಮೆ ಅರಾಜಕತೆ ನಡೆಸಿದ್ದರು ಎಂದಾದರೆ, ನಿಮ್ಮ ಸರ್ಕಾರ ಮಾಡುತ್ತಿರುವುದೇನು?' ಎಂದು ಬಿಜೆಪಿ ವಿರುದ್ಧ ಕಿಡಿಯಾಡಿದ್ದಾರೆ. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿಕೆ ನೀಡಿ, ಛತ್ರಪತಿ ಸಾಂಭಾಜಿನಗರದಲ್ಲಿರುವ ಔರಂಗಜೇಬನ ಗುಮ್ಮಟ ತೆರವುಗೊಳಿಸಲು ಆಗ್ರಹಿಸಲಾಗುತ್ತಿದೆ. ಹಿಂದಿನ ಕಾಂಗ್ರೆಸ್ ಸರ್ಕಾರವು ಭಾರತೀಯ ಪುರಾತತ್ವ ಇಲಾಖೆಯ ಸುಪರ್ದಿಗೆ ಇದನ್ನು ವಹಿಸಿದೆ. ಹೀಗಾಗಿ ಅದನ್ನು ಕಾನೂನು ಪ್ರಕ್ರಿಯೆ ಮೂಲಕವೇ ನಡೆಸಬೇಕು' ಎಂದು ಹೇಳಿದ್ದರು.


### ಶಾಂತಿ ಮಾತುಕತೆ ಮಧ್ಯೆ ರಷ್ಯಾ ಅತಿಕ್ರಮಣ : ಕದನ ವಿರಾಮಕ್ಕೆ ಪುಟಿನ್ ಷರತ್ತುಬದ್ಧ ಸಮ್ಮತಿ

# ಮೋದಿ -ಟ್ರಂಪ್‌ಗೆ ಕೃತಜ್ಞತೆ ಸಲ್ಲಿಸಿದ ಪುಟಿನ್

**ಮಾಸ್ಕೊ:** ಅಮೆರಿಕ ಮಧ್ಯಸ್ಥಿಕೆಯಲ್ಲಿ 30 ದಿನಗಳ ಪ್ರಸ್ತಾವಿತ ಕದನ ವಿರಾಮ ಒಪ್ಪಂದ ಕುರಿತು ಮಾತುಕತೆ ನಡುವೆಯೇ ಉಕ್ರೇನ್ ಮೇಲೆ ದಾಳಿ ಮುಂದುವರಿಸಿರುವ ರಷ್ಯಾ ಪಡೆಗಳು, ಕುರ್ಸ್ಕ್ ಪ್ರಾಂತ್ಯದ 'ಸುಡ್ಜಾ' ಪ್ರದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿವೆ. ಎರಡು ದಿನಗಳ ಹಿಂದೆ ಕುರ್ಸ್ಕ್ ಪ್ರಾಂತ್ಯಕ್ಕೆ ಭೇಟಿ ನೀಡಿದ್ದ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ''ಶತ್ರು ರಾಷ್ಟ್ರದ ಹಿಡಿತದಿಂದ ಕುರ್ಸ್ಕ್ ಪ್ರಾಂತ್ಯವನ್ನು ಆದಷ್ಟು ಬೇಗ ಮುಕ್ತಗೊಳಿಸಿ, ಎಂದು ಸೇನಾಪಡೆಗೆ ಸೂಚನೆ ನೀಡಿದ್ದರು.

ಪುಟಿನ್ ನಿರ್ದೇಶನದ ಬೆನ್ನಲ್ಲಿಯೇ, ಗಡಿ ಭಾಗದಲ್ಲಿನ ಕುರ್ಸ್ಕ್ ಪ್ರಾಂತ್ಯದ ಅತಿದೊಡ್ಡ ನಗರ ಪ್ರದೇಶ ಸುಡ್ಜಾ ಪ್ರದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿರುವುದರನ್ನು ರಷ್ಯಾ ರಕ್ಷಣಾ ಸಚಿವಾಲಯ ಖಚಿತಪಡಿಸಿದೆ. ಕದನ ವಿರಾಮದ ಮಾತುಕತೆ ನಡೆಯುತ್ತಿರುವ ಹಂತದಲ್ಲಿ ಉಕ್ರೇನ್ ನೆಲದ ಪ್ರಮುಖ ಭಾಗದ ಮೇಲೆ ಹಿಡಿತ ಸಾಧಿಸಿರುವ ರಷ್ಯಾ ನಡೆ ಉಕ್ರೇನ್‌ಗೆ ಹಿನ್ನಡೆಯಾದಂತಾಗಿದೆ. ಕದನ ವಿರಾಮಕ್ಕೆ ಉಕ್ರೇನ್ ಸಿದ್ಧವಾಗಿದೆ, ನಾನು ಅದನ್ನು ಹೇಗೆ ನೋಡುತ್ತೇನೆ ಎಂದು ನಾನು ನಿಮಗೆ ಹೇಳುತ್ತೇನೆ. ಆದರೆ ಉಕ್ರೇನ್ ಒಪ್ಪಂದದ ಬಗ್ಗೆ ಹೆಚ್ಚು ಗಮನ ಹರಿಸಿದ್ದಕ್ಕಾಗಿ ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದ ಹೇಳುವ ಮೂಲಕ ನಾನು ಪ್ರಾರಂಭಿಸಲು ಬಯಸುತ್ತೇನೆ. ನಾವೆಲ್ಲರೂ ನಮ್ಮದೇ ಆದ ದೇಶೀಯ ವ್ಯವಹಾರಗಳಿಗೆ ಹಾಜರಾಗಲು ಸಾಕಷ್ಟು ಹೊಂದಿದ್ದೇವೆ ಎಂದು ಪುಟಿನ್ ಸುದ್ದಿಗಾರರಿಗೆ ತಿಳಿಸಿದರು. ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಅಧ್ಯಕ್ಷರು, ಭಾರತದ ಪ್ರಧಾನಿ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ ಗಣರಾಜ್ಯದ ಅಧ್ಯಕ್ಷರು ಸೇರಿದಂತೆ ಅನೇಕ ದೇಶಗಳ ನಾಯಕರು ಈ ಸಮಸ್ಯೆಯನ್ನು ಪರಿಹರಿಸುತ್ತಿದ್ದಾರೆ, ಅದಕ್ಕೆ ಸಾಕಷ್ಟು ಸಮಯವನ್ನು ನೀಡುತ್ತಿದ್ದಾರೆ. ಅವರೆಲ್ಲರಿಗೂ ನಾವು ಆಭಾರಿಯಾಗಿದ್ದೇವೆ ಎಂದಿದ್ದಾರೆ.

**ಕದನ ವಿರಾಮಕ್ಕೆ**





**30 ದಿನಗಳ ಉಕ್ರೇನ್ ಕದನ ವಿರಾಮ ಪ್ರಸ್ತಾಪ**

**ಉಕ್ರೇನ್ ವಿರುದ್ಧದ 30 ದಿನಗಳ ಕದನ ವಿರಾಮಕ್ಕೆ ಸಹಕರಿಸಿದ ಭಾರತದ ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರಿಗೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಕೃತಜ್ಞತೆ ಸಲ್ಲಿಸಿದ್ದಾರೆ. ಅಮೆರಿಕದ 30 ದಿನಗಳ ಉಕ್ರೇನ್ ಕದನ ವಿರಾಮ ಪ್ರಸ್ತಾಪದ ಬಗ್ಗೆ ತಮ್ಮ ಮೊದಲ ಪ್ರತಿಕ್ರಿಯೆಯಲ್ಲಿ ಅವರು ಸಂಘರ್ಷವನ್ನು ಪರಿಹರಿಸಲು ಅವರ ಉದಾತ್ತ ಕಾರ್ಯಾಚರಣೆಗಾಗಿ ಡೊನಾಲ್ಡ್ ಟ್ರಂಪ್, ಭಾರತದ ಪ್ರಧಾನಿ ಮೋದಿ, ಇತರ ವಿಶ್ವ ನಾಯಕರಿಗೆ ಕೃತಜ್ಞತೆ ಸಲ್ಲಿಸಿದರು. ಬೆಲಾರಸ್ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶೆಂಕೊ ಅವರೊಂದಿಗೆ ಮಾತನಾಡಿದ ಪುಟಿನ್, ಗುರಿಯತ್ತ ಅವರ ಪ್ರಯತ್ನಗಳಿಗಾಗಿ ಎಲ್ಲಾ ನಾಯಕರಿಗೆ ಕೃತಜ್ಞನಾಗಿದ್ದೇನೆ ಎಂದರು.**

**ರಷ್ಯಾ -ಅಮೆರಿಕ 'ಸಂಧಾನ' ಚರ್ಚೆ**

**ಸೌದಿ ಅರೇಬಿಯಾದಲ್ಲಿ ನಡೆದ ಅಮೆರಿಕ-ಉಕ್ರೇನ್ ನಡುವಿನ ಕದನ ವಿರಾಮ ಮಾತುಕತೆ ಕುರಿತು ಮಾಸ್ಕೊದಲ್ಲಿ ರಷ್ಯಾ-ಅಮೆರಿಕ ರಾಜತಾಂತ್ರಿಕ ಅಧಿಕಾರಿಗಳ ನಡುವೆ ಮಾತುಕತೆ ನಡೆಯಿತು. ಟ್ರಂಪ್ ಸೂಚನೆಯಂತೆ ಅಮೆರಿಕದ ಮಧ್ಯಪ್ರಾಚ್ಯ ವಿಭಾಗದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರು ರಷ್ಯಾ ಅಧ್ಯಕ್ಷ ಪುಟಿನ್ ಸೇರಿದಂತೆ ಹಿರಿಯ ರಾಜತಾಂತ್ರಿಕ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. 30 ದಿನಗಳ ಪ್ರಸ್ತಾವಿತ ಕದನ ವಿರಾಮ ಒಪ್ಪಂದ 'ಜೆಡ್ಡಾ ಘೋಷಣೆಯ ಕುರಿತು ವಿವರ ನೀಡಿದರು.**

**ತಾತ್ಕಾಲಿಕ ಕದನ ವಿರಾಮ ನಿರುಪಯುಕ್ತ**

**ಅಮೆರಿಕ ಪ್ರಸ್ತಾವಿತ 30 ದಿನಗಳ ಕದನ ವಿರಾಮ ನಿರುಪಯುಕ್ತ. ಇದರಿಂದ ಉಕ್ರೇನ್ ಪಡೆಗಳಿಗೆ ಯುದ್ಧಭೂಮಿಯಿಂದ ಒಂದಷ್ಟು ದಿನ ವಿಶ್ರಾಂತಿ ನೀಡಬಹುದು. ಅದರಿಂದ ಆಚೆಗೆ ಹೆಚ್ಚಿನ ಉಪಯೋಗ ವಿಲ್ಲ, ಎಂದು ಪುಟಿನ್ ಆಪ್ತ ಯೂರಿ ಉಷಕೋವ್ ತಿಳಿಸಿದ್ದಾರೆ. ದೇಶದ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ದೀರ್ಘಕಾಲದ ಶಾಂತಿ ಕಾಪಾಡುವ ಕದನ ವಿರಾಮ ರಷ್ಯಾಗೆ ಅಗತ್ಯವಿದೆ. ತಾತ್ಕಾಲಿಕ ಕದನ ವಿರಾಮ ರೂಪಿಸುವ ಪ್ರಯತ್ನಗಳನ್ನು ಗಮನಿಸಿದರೆ ಯಾರಿಗೂ ಶಾಶ್ವತ ಶಾಂತಿಯ ಕ್ರಮಗಳು ಅಗತ್ಯವಿಲ್ಲ ಎನಿಸುತ್ತಿದೆ ಎಂದರು.**

**ಪುಟಿನ್ ಸಮ್ಮತಿ:** ಉಕ್ರೇನ್ ಸಮರ ಕೊನೆಗಾಣಿಸಲು ಅಮೆರಿಕ ಮಧ್ಯಸ್ಥಿಕೆಯಲ್ಲಿ ಪ್ರಸ್ತಾಪಿಸಲಾಗಿರುವ 30 ದಿನಗಳ ಕದನ ವಿರಾಮಕ್ಕೆ ಸಮ್ಮತಿ ಇದೆ, ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಗುರುವಾರ ಹೇಳಿದ್ದಾರೆ. ಯಾವುದೇ ಕದನ ವಿರಾಮವೂ ಸಂಘರ್ಷದ ಮೂಲ ಕಾರಣಗಳನ್ನು ಪತ್ತೆ ಮಾಡಿ ಪರಿಹರಿಸಬೇಕಿದೆ. ಸಂಧಾನ ಮಾತುಕತೆ ಮುಂದುವರಿಸುವ ಮೊದಲು ಕೆಲವೊಂದು ಗಂಭೀರವಾದ ವಿಷಯಗಳು ಇತ್ಯರ್ಥವಾಗಬೇಕಿದೆ, ಎಂದು ಪುಟಿನ್ ಪ್ರತಿಪಾದಿಸಿದ್ದಾರೆ. ಸೌದಿ ಅರೇಬಿಯಾದಲ್ಲಿ ನಡೆದ ಮಾತುಕತೆಯಂತೆ ಮೂಡಿದ ಒಪ್ಪಂದದ ಮಾತುಕತೆ ವಿಷಯ ಹೊತ್ತು ಗುರುವಾರ ಮಾಸ್ಕೊಗೆ ಆಗಮಿಸಿದ್ದ ಮಧ್ಯಪ್ರಾಚ್ಯದ ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರು ಪುಟಿನ್ ಜತೆ ಸಮಾಲೋಚಿಸಿದರು. ಕದನ ವಿರಾಮ ಒಪ್ಪಂದದ ವಿವರಗಳನ್ನು ನೀಡಿದರು.

## ಗಾಜಾಪಟ್ಟಿಯಲ್ಲಿ ಇಸ್ರೇಲ್‌ನಿಂದ ವ್ಯಾಪಕ ಲೈಂಗಿಕ ದೌರ್ಜನ್ಯ



**ಜಿನೀವಾ:** ಗಾಜಾ ಪಟ್ಟಿಯಲ್ಲಿ ಹಮಾಸ್ ವಿರುದ್ಧದ ಯುದ್ಧದಲ್ಲಿ ಇಸ್ರೇಲ್, ಲೈಂಗಿಕ ದೌರ್ಜನ್ಯ, ಇತರೆ ಲಿಂಗ ಆಧಾರಿತ ಹಿಂಸಾಚಾರವನ್ನು ವ್ಯವಸ್ಥಿತವಾಗಿ ನಡೆಸಿದೆ ಎಂದು ವಿಶ್ವಸಂಸ್ಥೆ ಬೆಂಬಲಿತ ಮಾನವ ಹಕ್ಕುಗಳ ತಜ್ಞರು ಗುರುವಾರ ಆರೋಪಿಸಿದ್ದಾರೆ. 2023ರ ಅಕ್ಟೋಬರ್ 7ರಂದು ದಕ್ಷಿಣ ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿ ಬಳಿಕ ಆರಂಭವಾದ ಯುದ್ಧದಲ್ಲಿ ಈ ರೀತಿಯ ವ್ಯಾಪಕವಾದ ಆರೋಪಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಸ್ವತಂತ್ರ ತಜ್ಞರ ಮಾನವ ಹಕ್ಕುಗಳ ಆಯೋಗವನ್ನು ವಿಶ್ವಸಂಸ್ಥೆಯು ನೇಮಕ ಮಾಡಿತ್ತು

ವಿಶ್ವಸಂಸ್ಥೆ ಬೆಂಬಲಿತ ತಂಡವು ಇಸ್ರೇಲ್ ವಿರೋಧಿಯಾಗಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಆರೋಪಿಸಿದ್ದಾರೆ. ಇದು ಇಸ್ರೇಲ್ ವಿರೋಧಿ ಸರ್ಕಸ್, ದೀರ್ಘಕಾಲದಿಂದ ವಿಶ್ವಸಂಸ್ಥೆಯು ಯೆಹೂದಿಗಳ ವಿರೋಧಿಯಾಗಿದ್ದು, ಕೊಳೆತು ನಾರುವ ಭಯೋತ್ಪಾದಕ ಬೆಂಬಲಿತ ಮತ್ತು ಅಪ್ರಸ್ತುತ ಸಂಸ್ಥೆಯಾಗಿದೆ' ಎಂದೂ ಹೇಳಿದ್ದಾರೆ. ಅಪರಾಧಗಳ ಆರೋಪಗಳು ಮತ್ತು ಪುರಾವೆಗಳನ್ನು ಸೂಕ್ಷ್ಮವಾಗಿ ದಾಖಲಿಸಲು ಪ್ರಯತ್ನಿಸುವ ವಿಶ್ವಸಂಸ್ಥೆ ಬೆಂಬಲಿತ ಮಾನವ ಹಕ್ಕುಗಳ ಆಯೋಗ ಇದಾಗಿದ್ದು, ಅಂತರ ರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯ, ಇತರ ನ್ಯಾಯವ್ಯಾಪ್ತಿಗಳಲ್ಲಿ ಪ್ರಾಸಿಕ್ಯೂಟರ್‌ಗಳು ಸಂತ್ರಸ್ತರಿಗೆ ನ್ಯಾಯ ಒದಗಿಸಲು ಇವುಗಳನ್ನು ಬಳಸಿಕೊಳ್ಳಬಹುದಾಗಿದೆ.

ಬಿಡುಗಡೆಯಾದ ತನ್ನ ವರದಿಯಲ್ಲಿ ಆಯೋಗವು ಗಾಜಾದ ವ್ಯಾಪಕ ನಾಶ, ನಾಗರಿಕ ಪ್ರದೇಶಗಳಲ್ಲಿ ಭಾರೀ ಸ್ಫೋಟಕಗಳ ಬಳಕೆ, ಆಸ್ಪತ್ರೆಗಳು, ಆರೋಗ್ಯ ಸೌಲಭ್ಯಗಳ ಮೇಲಿನ ಇಸ್ರೇಲಿ ದಾಳಿಗಳನ್ನು ಉಲ್ಲೇಖಿಸಿದೆ.

> **ಜಿನೀವಾದಲ್ಲಿರುವ ಇಸ್ರೇಲ್‌ನ ನಿಯೋಗವು ಆರೋಪಗಳನ್ನು ತಳ್ಳಿಹಾಕಿದೆ. ಆಯೋಗವು ದೃಢೀಕರಣ ವಿಲ್ಲದ ಮೂಲಗಳನ್ನು ಅವಲಂಬಿಸಿದೆ, ಲೈಂಗಿಕ ದೌರ್ಜನ್ಯಗಳು, ಆರೋಗ್ಯ ಸೌಲಭ್ಯಗಳ ವ್ಯವಸ್ಥಿತ ನಾಶಮಾಡುವ ಮೂಲಕ ಇಸ್ರೇಲ್ ನರಮೇಧದ ಕೃತ್ಯಗಳನ್ನು ನಡೆಸಿದೆ**
> **- ಸಿಡೋಟಿ, ಆಯೋಗದ ಸದಸ್ಯ**

ಈ ಮೂರೂ ದಾಳಿಗಳು ಮಹಿಳೆಯರು, ಮಕ್ಕಳ ವಿರುದ್ಧ ಅಸಮಾನ ಹಿಂಸಾಚಾರಕ್ಕೆ ಕಾರಣವಾಗಿದೆ ಎಂದು ಅದು ಹೇಳಿದೆ.

ಪ್ಯಾಲೆಸ್ಟೀನ್ ಮಹಿಳೆಯರು, ಪುರುಷರು, ಯುವಕ, ಯುವತಿಯರ ವಿರುದ್ಧ ನಡೆಸಲಾದ ಹಲವು ದಾಳಿಗಳನ್ನು ಆಯೋಗವು ದಾಖಲಿಸಿದೆ.

ಇಸ್ರೇಲ್ ಭದ್ರತಾ ಪಡೆಗಳು ಪ್ಯಾಲೆಸ್ಟೀನ್‌ನ ಬಂಧಿತರ ವಿರುದ್ಧ ಅತ್ಯಾಚಾರ, ಲೈಂಗಿಕ ಹಿಂಸಾಚಾರವನ್ನು ನಡೆಸಿವೆ ಎಂದು ಆರೋಪಿಸಿದೆ.

## ಮಾ.19ರಂದು ಹೊರಡಲಿರುವ ಸುನಿತಾ, ಬುಚ್



**ಹೂಸ್ಟನ್ (ಟೆಕ್ಸಾಸ್):** ಭಾರತೀಯ ಮೂಲದ ಗಗನಯಾನಿ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಮಾರ್ಚ್ 19ರೊಳಗೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಹೊರಡಲಿದ್ದಾರೆ ಎಂದು ನಾಸಾ ತಿಳಿಸಿದೆ. ಟ್ರಾನ್ಸ್‌ಪೋರ್ಟರ್ 13 ಮಿಷನ್ ಉಡಾವಣೆಗೆ ಮಾರ್ಚ್ 14ರಂದು ಸಂಜೆ 7:03ಕ್ಕೆ ನಾಸಾದ ಸ್ಪೇಸ್‌ಎಕ್ಸ್ ಕ್ರೂ -10 ಗುರಿ ಹೊಂದಿದೆ ಎಂದು ಅಮೆರಿಕ ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ. ಈ ಮಿಷನ್ ನಾಲ್ಕು ಸಿಬ್ಬಂದಿಯನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲಿದೆ. ರಾಕೆಟ್ ಸಂಚರಿಸುವ ಹಾದಿಯಲ್ಲಿ ಹೆಚ್ಚಿನ ಗಾಳಿ ಮತ್ತು ಮಳೆಯ ಮುನ್ಸೂಚನೆಯ ಕಾರಣ ಗುರುವಾರ ಉಡಾವಣಾ ಪ್ರಯತ್ನವನ್ನು ರದ್ದುಗೊಳಿಸಲು ಮಿಷನ್ ವ್ಯವಸ್ಥಾಪಕರು ಮೊದಲೇ ನಿರ್ಧರಿಸಿದ್ದರು. ಫ್ಲೋರಿಡಾದಲ್ಲಿರುವ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಲ್ಲಿರುವ ಲಾಂಚ್ ಕಾಂಪ್ಲೆಕ್ಸ್ 39ಎನಲ್ಲಿ ಫಾಲ್ಕನ್ 9 ರಾಕೆಟ್‌ನ ಹೈಡ್ರಾಲಿಕ್ ಸಿಸ್ಟಮ್ ಸಮಸ್ಯೆಯನ್ನು ಪರಿಹರಿಸಲು ಉಡಾವಣಾ ತಂಡಗಳು ಕೆಲಸ ಮಾಡುತ್ತಿವೆ ಎಂದೂ ತಿಳಿಸಿದೆ.

ಮಾರ್ಚ್ 14ರಂದು ಕ್ರೂ-10 ಉಡಾವಣೆಯೊಂದಿಗೆ, ನಾಸಾ ಗಗನಯಾನಿಗಳು ಬಾಹ್ಯಾಕಾಶ ಕೇಂದ್ರಕ್ಕೆ ತಲುಪಿದ ಬಳಿಕ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಭೂಮಿಯತ್ತ ತೆರಳಲಿದ್ದಾರೆ. ಮಾರ್ಚ್ 19ಕ್ಕೆ ಅವರು ಹೊರಡುವ ಸಾಧ್ಯತೆ ಇದೆ ಎಂದು ನಾಸಾ ತಿಳಿಸಿದೆ.

ಬಾಹ್ಯಾಕಾಶಕ್ಕೆ ತೆರಳುವ ಯೋಜನೆಯೊಂದಿಗೆ, ನಾಸಾ ಗಗನಯಾನಿಗಳಾದ ಆನ್ ಮೆಕ್‌ಕ್ಲೇನ್ ಮತ್ತು ನಿಕೋಲ್ ಅಯರ್ಸ್, ಜಾಕ್ಸಾದ(ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಶನ್ ಏಜೆನ್ಸಿ) ಗಗನಯಾನಿ ಟಕುಯಾ ಒನಿಶಿ ಮತ್ತು ರೋಸ್ಕೋಸ್ಕೋಸ್ ಗಗನಯಾನಿ ಕಿರಿಲ್ ಪೆಸ್ಕೋವ್ ಅವರು ಫ್ಲೋರಿಡಾದ ನಾಸಾ ಕೆನಡಿಯಲ್ಲಿರುವ ಗಗನಯಾನಿಗಳ ಕ್ವಾರ್ಟರ್ಸ್‌ರನಲ್ಲೇ ಉಳಿಯಲಿದ್ದಾರೆ.

## ಮಿನಿ ನ್ಯೂಸ್

### ಉಪಗ್ರಹಗಳನ್ನು ಉಡಾವಣೆ ಮಾಡಿ 143 ಮಿಲಿಯನ್ ಡಾಲರ್ ಸಂಪಾದಿಸಿದ ಭಾರತ

**ನವದೆಹಲಿ:** ಮಾ.14- ಕಳೆದ 2015 ರಿಂದ 2024ರ ಅವಧಿಯಲ್ಲಿ ಹಲವಾರು ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ಭಾರತವು 143 ಮಿಲಿಯನ್ ಡಾಲರ್ ಮೌಲ್ಯದ ವಿದೇಶಿ ವಿನಿಮಯ ಆದಾಯವನ್ನು ಗಳಿಸಿದೆ ಎಂದು ವರದಿಯಾಗಿದೆ. ಬಾಹ್ಯಾಕಾಶ ಕ್ಷೇತ್ರವನ್ನು ನೋಡಿಕೊಳ್ಳುವ ಕೇಂದ್ರ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಗೆ ನೀಡಿರುವ ಮಾಹಿತಿಯಲ್ಲಿ ಈ ಅಂಕಿ ಅಂಶ ಬಹಿರಂಗಗೊಂಡಿದೆ.2015 ರಿಂದ ಡಿಸೆಂಬರ್ 2024 ರವರೆಗೆ ಕಳೆದ ಹತ್ತು ವರ್ಷಗಳಲ್ಲಿ, ಇಸ್ರೋದ ಪಿಎಸ್‌ಎಲ್‌ವಿ, ಎಲ್‌ವಿಎಂ 3 ಮತ್ತು ಎಸ್‌ಎಸ್‌ಎಲ್‌ವಿ ಉಡಾವಣಾ ವಾಹನಗಳಲ್ಲಿ ಒಟ್ಟು 393 ವಿದೇಶಿ ಉಪಗ್ರಹಗಳು ಮತ್ತು ಮೂರು ಭಾರತೀಯ ಗ್ರಾಹಕ ಉಪಗ್ರಹಗಳನ್ನು ವಾಣಿಜ್ಯ ಆಧಾರದ ಮೇಲೆ ಉಡಾವಣೆ ಮಾಡಲಾಗಿದೆ ಎಂದು ಸಚಿವಾಲಯ ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದೆ.

### ಅನ್ಯ ಜಾತಿಯ ಯುವಕನನ್ನು ಮದುವೆಯಾದ ಮರುದಿನವೇ ಯುವತಿಯ ಹತ್ಯೆ

**ನೋಯ್ಡಾ:** ಅನ್ಯ ಜಾತಿಯ ಹುಡುಗನನ್ನು ಪ್ರೀತಿಸಿ ಮದುವೆಯಾಗಿದ್ದಕ್ಕೆ ತಂದೆ, ಅಣ್ಣ ಸೇರಿಕೊಂಡು ಯುವತಿಯನ್ನು ಹತ್ಯೆ ಮಾಡಿರುವ ಘಟನೆ ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದಲ್ಲಿ ನಡೆದಿದೆ. ಅಪ್ಪ, ಅಣ್ಣನಿಂದಲೇ ಹತ್ಯೆಯಾದ ಮಹಿಳೆಯನ್ನು ನೇಹಾ ರಾಥೋಡ್ ಎಂದು ಗುರುತಿಸಲಾಗಿದೆ. ಮಗಳ ಪ್ರೇಮ ವಿವಾಹವನ್ನು ಅರಗಿಸಿಕೊಳ್ಳಲಾಗದೆ ಮಗಳನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದ ಅಪ್ಪ, ಮಗ ಯುವತಿಯನ್ನು ಕೊಂದ ನಂತರ, ಇಬ್ಬರೂ ಆಕೆಯ ದೇಹವನ್ನು ಸುಟ್ಟು ಹಾಕಿ ಸಾಕ್ಷ್ಯವನ್ನು ನಾಶಮಾಡಲು ಪ್ರಯತ್ನಿಸಿದ್ದರು. ಸಂತ್ರಸ್ತೆ ನೇಹಾ ರಾಥೋಡ್ ಉತ್ತರ ಪ್ರದೇಶದ ಹಾಪುರ್ ನಿವಾಸಿ ಸೂರಜ್ ಜೊತೆ ಪ್ರೇಮ ಸಂಬಂಧ ಹೊಂದಿದ್ದರು. ಇದಕ್ಕೆ ಆಕೆಯ ಕುಟುಂಬದವರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು ಎಂದು ನೋಯ್ಡಾ ಸೆಂಟ್ರಲ್‌ನ ಡಿಸಿಪಿ ಶಕ್ತಿ ಮೋಹನ್ ಅವಸ್ಥಿ ಹೇಳಿದ್ದಾರೆ.

ಆಕೆಯ ಕುಟುಂಬವು ಸೂರಜ್ ನನ್ನು ಭೇಟಿಯಾಗುವುದನ್ನು ಹಲವು ಬಾರಿ ತಡೆದಿತ್ತು. ಆದರೆ ಅವಳು ಈ ಎಲ್ಲಾವನ್ನೂ ಧಿಕ್ಕರಿಸಿ ಮಾ. 11 ರಂದು ಗಾಜಿಯಾಬಾದ್‌ನ ಆರ್ಯ ಸಮಾಜ ಮಂದಿರದಲ್ಲಿ ಸೂರಜ್ ನನ್ನು ವಿವಾಹವಾಗಿದ್ದಳು. ಅವರ ವಿವಾಹದ ಬಗ್ಗೆ ಮಾಹಿತಿ ಪಡೆದ ನಂತರ, ಆರೋಪಿ ಭಾನು ರಾಥೋಡ್ ಮತ್ತು ಅವರ ಮಗ ಹಿಮಾಂಶು ರಾಥೋಡ್ ಮಾರ್ಚ್ 12 ರ ಬೆಳಗ್ಗೆ ನೇಹಾಳನ್ನು ಕೊಲೆ ಮಾಡಿದ್ದರು.ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಪೊಲೀಸರು ಸ್ಥಳಕ್ಕೆ ತಲುಪಿ ತನಿಖೆ ಆರಂಭಿಸಿದರು. ಈ ಪ್ರಕರಣದ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇಬ್ಬರೂ ಹಾಪುರದಲ್ಲಿ 8 ನೇ ತರಗತಿಯಲ್ಲಿ ಓದುತ್ತಿದ್ದಾಗಿನಿಂದ ಒಬ್ಬರಿಗೊಬ್ಬರು ಪರಿಚಿತರಾಗಿದ್ದರು. ಆ ಯುವಕ ಪ್ರಸ್ತುತ ಹಾವುರದಲ್ಲಿ ಪಿಕಪ್ ಟ್ರಕ್ ಓಡಿಸುತ್ತಾನೆ. ಆ ಯುವಕರು ಜಾಟ್ ಸಮುದಾಯಕ್ಕೆ ಸೇರಿದವನಾಗಿದ್ದು, ಆದರೆ ಹುಡುಗಿ ತೇಲಿ ಸಮುದಾಯಕ್ಕೆ ಸೇರಿದವಳು ಎನ್ನಲಾಗಿದೆ.

### ಕೇಂದ್ರ ಸರ್ಕಾರ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಇಡಿ ದುರ್ಬಳಕೆ

**ತಿರುವನಂತಪುರಂ:** ಕೇರಳದಲ್ಲಿ ಮಾತ್ರವಲ್ಲ, ಭಾರತದಾದ್ಯಂತ ಕೇಂದ್ರ ಸರ್ಕಾರ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಜಾರಿ ನಿರ್ದೇಶನಾಲಯದಂತಹ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಸಿಪಿಐ(ಎಂ) ಸಂಸದ ಕೆ.ರಾಧಾಕೃಷ್ಣನ್ ಆರೋಪಿಸಿದ್ದಾರೆ. ಕರುವನೂರ್ ಸಹಕಾರಿ ಬ್ಯಾಂಕ್ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಏಜೆನ್ಸಿಯ ಮುಂದೆ ಹಾಜರಾಗುವಂತೆ ಇಡಿ ನೋಟಿಸ್ ಪಡೆದ ಬಗ್ಗೆ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸುವಾಗ ರಾಧಾಕೃಷ್ಣನ್ ಈ ಆರೋಪ ಮಾಡಿದ್ದಾರೆ. ನೋಟಿಸ್‌ನಲ್ಲಿ ಕರುವನೂರ್ ಪ್ರಕರಣವನ್ನು ಉಲ್ಲೇಖಿಸಿಲ್ಲ ಮತ್ತು ಬದಲಿಗೆ ಬ್ಯಾಂಕ್ ಖಾತೆಗಳು ಮತ್ತು ಭೂ ದಾಖಲೆಗಳು ಸೇರಿದಂತೆ ಅವರ ಆಸ್ತಿಗಳ ವಿವರಗಳನ್ನು ಹಾಜರುಪಡಿಸುವಂತೆ ಕೇಳಲಾಗಿದೆ ಎಂದು ಸಂಸದರು ಹೇಳಿದರು.


ಸಂಸತ್ ಅಧಿವೇಶನ ನಡೆಯುತ್ತಿರುವ ಕಾರಣ ನಾನು ಈಗ ಏಜೆನ್ಸಿಯ ಮುಂದೆ ಹಾಜರಾಗಲು ಸಾಧ್ಯವಿಲ್ಲ ಎಂದು ಪತ್ರ ಕಳುಹಿಸಿದ್ದೇನೆ. ಅಧಿವೇಶನ ಮುಗಿದ ನಂತರ ನಾನು ಅದರ ಮುಂದೆ ಹಾಜರಾಗುತ್ತೇನೆ ಎಂದು ಅವರು ಹೇಳಿದರು. ಕೇರಳದ ಅಲತ್ತೂರ್ ಲೋಕಸಭಾ ಕ್ಷೇತ್ರದ ಸಂಸದ ರಾಧಾಕೃಷ್ಣನ್ ಅವರು ಯಾವುದೇ ತನಿಖೆಯನ್ನು ಎದುರಿಸಲು ಸಿದ್ಧ ಎಂದು ಹೇಳಿದ್ದಾರೆ. ನಾನು ಸಂಪಾದಿಸಿದ ಆಸ್ತಿಗಳನ್ನು ಅವರು ಹುಡುಕುತ್ತಿದ್ದಾರೆ. ಅವರು ತನಿಖೆ ನಡೆಸಿ ಕಂಡುಹಿಡಿಯಲಿ ಎಂದು ಅವರು ಹೇಳಿದರು.

### ಇಥಿಯೋಪಿಯಾದಲ್ಲಿ ಹೆಚ್ಚುತ್ತಿರುವ ಕಾಲರಾ ಪ್ರಕರಣ; ತಿಂಗಳಲ್ಲಿ 31 ಸಾವು

**ಅಡಿಸ್ ಅಬಾಬಾ:** ಕಳೆದ ಒಂದು ತಿಂಗಳಿನಲ್ಲಿ ಇಥಿಯೋಪಿಯಾದ ಗ್ಯಾಂಬೆಲ್ಲಾ ಪ್ರದೇಶದಲ್ಲಿ 1,500ಕ್ಕೂ ಹೆಚ್ಚು ಕಾಲರಾ ಪ್ರಕರಣಗಳು ದೃಢಪಟ್ಟಿದ್ದು, ಕನಿಷ್ಠ 31 ಜನ ಸಾವಿಗೀಡಾಗಿದ್ದಾರೆ ಎಂದು ಮೆಡಿಸಿನ್ಸ್ ಸಾನ್ಸ್ ಫ್ರಾಂಟಿಯರ್ಸ್ ಶುಕ್ರವಾರ ಹೇಳಿದೆ. ನೆರೆಯ ದಕ್ಷಿಣ ಸುಡಾನ್‌ನಲ್ಲಿ ನಡೆಯುತ್ತಿರುವ ಹಿಂಸಾಚಾರದಿಂದ ಜನರು ಪಲಾಯನ ಮಾಡುತ್ತಿದ್ದು, ಇದರಿಂದ ಪರಿಸ್ಥಿತಿ ಹದಗೆಟ್ಟಿದೆ. ಈ ಸಾಂಕ್ರಾಮಿಕ ರೋಗವು ವೇಗವಾಗಿ ಹರಡುತ್ತಿದೆ ಎಂದು ಎಂಎಸ್‌ಎಫ್ ಹೇಳಿದೆ. ಪಶ್ಚಿಮ ಇಥಿಯೋಪಿಯಾದಾದ್ಯಂತ ಕಾಲರಾ ಸೋಂಕು ವೇಗವಾಗಿ ಹರಡುತ್ತಿದೆ. ಇದೇ ವೇಳೆ ದಕ್ಷಿಣ ಸುಡಾನ್‌ನಲ್ಲಿಯೂ ಪ್ರಕರಣಗಳು ಹೆಚ್ಚುತ್ತಿವೆ.

ಇದು ಸಾವಿರಾರು ಜೀವಗಳಿಗೆ ಅಪಾಯವನ್ನುಂಟುಮಾಡುತ್ತಿದೆ ಎಂದು ಎಂಎಸ್‌ಎಫ್ ಪ್ರಕಟಣೆಯಲ್ಲಿ ತಿಳಿಸಿದೆ. ಸುಮಾರು 120 ಮಿಲಿಯನ್ ಜನರನ್ನು ಹೊಂದಿರುವ ಇಥಿಯೋಪಿಯಾದ ಹಲವಾರು ಪ್ರದೇಶಗಳಲ್ಲಿ ಜನರು ಕಾಲರಾ ಸಾಂಕ್ರಾಮಿಕದಿಂದ ಬಳಲುತ್ತಿದ್ದಾರೆ. ದಕ್ಷಿಣ ಸುಡಾನ್‌ನ ಅಕೋಬೊ ಕೌಂಟಿಯಲ್ಲಿ, ಅಪ್ಪರ್ ನೈಲ್ ಪ್ರದೇಶದಲ್ಲಿ, ಕಳೆದ ನಾಲ್ಕು ವಾರಗಳಲ್ಲಿ 1,300 ಕಾಲರಾ ಪ್ರಕರಣಗಳು ವರದಿಯಾಗಿವೆ ಎಂದೂ ಎಂಎಫ್ ಹೇಳಿದೆ. ಕಾಲರಾ ಕಲುಷಿತ ನೀರಿನಿಂದ ಹರಡುತ್ತದೆ. ವಾಂತಿ, ಬೇದಿ, ನಿರ್ಜಲೀಕರಣ ಅದರ ಮುಖ್ಯ ಲಕ್ಷಣವಾಗಿದೆ.

## ಹೋಳಿ ಹಬ್ಬಕ್ಕೆ ಶುಭಾಶಯ ಕೋರಿದ ಪ್ರಧಾನಿ





**ನವದೆಹಲಿ:** ಹೋಳಿಹಬ್ಬ ಪ್ರತಿಯೊಬ್ಬರ ಜೀವನ ದಲ್ಲಿ ಹೊಸ ಉತ್ಸಾಹ, ಶಕ್ತಿ ತುಂಬಲಿ ಎಂದು ಪ್ರಧಾನಮಂತ್ರಿ ಮೋದಿ ಅವರು ದೇಶದ ಜನರಿಗೆ ಶುಭ ಕೋರಿದ್ದಾರೆ. xನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಅವರು, ಎಲ್ಲರಿಗೂ ಹೋಳಿ ಹಬ್ಬದ ಶುಭಾಶಯಗಳು. ಸಂತೋಷದಿಂದ ತುಂಬಿರುವ ಈ ಹಬ್ಬವು ಪ್ರತಿ ಯೊಬ್ಬರ ಜೀವನದಲ್ಲಿ ಹೊಸ ಉತ್ಸಾಹ ತುಂಬಲಿ. ದೇಶವಾಸಿಗಳಲ್ಲಿ ಏಕತೆಯ ಬಣ್ಣವನ್ನು ಇನ್ನಷ್ಟು ಹೆಚ್ಚಿಸಲಿ ಎಂದು ಬರೆದುಕೊಂಡಿದ್ದಾರೆ. ದೇಶ ದೆಲ್ಲೆಡೆ ಹೋಳಿಯ ಸಂಭ್ರಮ ಮನೆ ಮಾಡಿದೆ. ಭಾರತದಲ್ಲಿ ಸಡಗರದಿಂದ ಆಚರಿಸಲಾಗುವ ಅತ್ಯಂತ ಜನಪ್ರಿಯ ಹಿಂದೂ ಹಬ್ಬಗಳಲ್ಲಿ ಹೋಳಿ ಸಹ ಒಂದು. ಹೋಳಿ, ಜಗತ್ತಿಗೆ ಮೋಡಿ ಮಾಡಿರುವ ಹಬ್ಬ.ಈ ಹಬ್ಬ ಸಂಪ್ರದಾಯ, ಆಧುನಿಕತೆ, ಆಕರ್ಷಣೆ, ಜನಪ್ರಿ ಯತೆಗಳಲ್ಲಿ ವಿಶೇಷ ಸ್ಥಾನ ಗಳಿಸಿದೆ ಎಂದು ಹೇಳಿದ್ದಾರೆ.

## ಭದ್ರತೆ ನಡುವೆ ಶಾಂತಿಯುತ ಹೋಳಿ ಆಚರಣೆ



**ಸಂಭಲ್:** ಭಾರಿ ಪೊಲೀಸ್ ಭದ್ರತೆ ನಡುವೆ ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯಾದ್ಯಂತ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಹೋಳಿ, ಮುಸ್ಲಿಮರ ಶುಕ್ರವಾರ ಪ್ರಾರ್ಥನೆ ಒಂದೇ ದಿನ ಇದ್ದಿದ್ದರಿಂದ ವಿವಾದಿತ ಸಂಭಲ್ ಮಸೀದಿ ಸೇರಿದಂತೆ ಜಿಲ್ಲೆಯಾದ್ಯಂತ ಪೊಲೀಸರು ಸರ್ಪಗಾವಲನ್ನು ನಿರ್ಮಿಸಿದ್ದರು. ಸಂಭಲ್ ನಗರದಲ್ಲಿ ಸಾಂಪ್ರದಾಯಿಕ 'ಚೌಪಾಯಿ ಕಾ ಜುಲುಸ್' ಕೂಡ ನಡೆಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಮೊಘಲ್ ಕಾಲದ ಶಾಹಿ ಜುಮಾ ಮಸೀದಿಯ ಸಮೀಕ್ಷೆ ನಡೆಸಲು ಕೋರ್ಟ್ ಅನುಮತಿ ನೀಡಿದ ಬೆನ್ನಲ್ಲೇ, ಕಳೆದ ವರ್ಷ ನವೆಂಬರ್ 24ರಂದು ಸಂಭಲ್ ನಲ್ಲಿ ನಡೆದ ಹಿಂಸಾಚಾರದಲ್ಲಿ 4 ಮಂದಿ ಸಾವಿಗೀಡಾಗಿದ್ದರು. ಪೊಲೀಸ್ ಸಿಬ್ಬಂದಿ ಸೇರಿ ಹಲವರು ಗಾಯಗೊಂಡಿದ್ದರು. ಶುಕ್ರವಾರದ ನಮಾಜ್ ಮಧ್ಯಾಹ್ನ 2.30ಕ್ಕೆ ನಡೆಯಿತು. ಹಬ್ಬ, ಶುಕ್ರವಾರದ ಪ್ರಾರ್ಥನೆಯನ್ನು ಸಾಮರಸ್ಯ ಮನೋಭಾವದಿಂದ ಆಚರಿಸ ಬೇಕು ಎಂದು ಮಸೀದಿಯ ಅಧ್ಯಕ್ಷ ಜಫರ್ ಅಲಿ ಈ ಹಿಂದೆ ಎರಡೂ ಸಮುದಾಯದವರೊಂದಿಗೆ ಭಿನ್ನವಿಸಿಕೊಂಡಿದ್ದರು. ಜಿಲ್ಲೆಯಲ್ಲಿ ಸುಮಾರು 1,212 ಹೋಳಿ ದಹನ ಶಾಂತಿಯುತವಾಗಿ ನಡೆದಿದೆ. ಜನರು ಸಾಂಪ್ರದಾಯಿಕವಾಗಿ ಹೋಳಿ ಆಚರಿಸಿದ್ದಾರೆ. 60ಕ್ಕೂ ಹೆಚ್ಚು ಮೆರವಣಿಗೆಗಳು ಬಿಗಿ ಭದ್ರತೆಯೊಂದಿಗೆ ನಡೆದಿದೆ ಎಂದು ಸಂಭಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಜೇಂದ್ರ ಪೆನ್ಸಿಯಾ ಹೇಳಿದ್ದಾರೆ. ಎಲ್ಲಾವೂ ಸಾಂಗವಾಗಿ ನೆರವೇರಲು ಮೂರು ಸುತ್ತಿನ ಭದ್ರತೆ ನಿರ್ಮಿಸಲಾಗಿತ್ತು.

## ಹಬ್ಬಗಳ ಶ್ರೀಮಂತ ಪರಂಪರೆ ಬೇರೆ ಧರ್ಮದಲ್ಲಿ ಇಲ್ಲ

### ಗೋರಖನಾಥ ದೇಗುಲದಲ್ಲಿ ಸಿಎಂ ಯೋಗಿ ಆದಿತ್ಯನಾಥ್ ಹೋಳಿ ಆಚರಣೆ




**ಗೋರಖಪುರ:** ಸನಾತನ ಧರ್ಮದಂತಹ ಹಬ್ಬಗಳ ಶ್ರೀಮಂತ ಪರಂಪರೆ ಬೇರೆ ಯಾವುದೇ ದೇಶ, ಧರ್ಮದಲ್ಲಿ ಇಲ್ಲ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶುಕ್ರವಾರ ಹೋಳಿ ಹಬ್ಬದ ಸಂದರ್ಭದಲ್ಲಿ ಹೇಳಿದ್ದಾರೆ. ಗೋರಖಪುರದಲ್ಲಿ ಸಾಂಪ್ರದಾಯಿಕ ನರಸಿಂಹ ಶೋಭಾಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹೋಳಿ ಹಬ್ಬವು ಏಕತೆಯ ಮೂಲಕ ಅಖಂಡ ರಾಷ್ಟ್ರವನ್ನು ಉಳಿಸಿಕೊಳ್ಳುವ ಸಂದೇಶವನ್ನು ಸಾರುತ್ತದೆ. ಏಕ ಭಾರತ, ಶ್ರೇಷ್ಠ ಭಾರತದ ದೂರ ದೃಷ್ಟಿಯನ್ನು ಈಡೇರಿಸುತ್ತದೆ ಎಂದು ಹೇಳಿದ್ದಾರೆ.



ಸನಾತನ ಧರ್ಮದಲ್ಲಿರುವಂತಹ ಶ್ರೀಮಂತ ಹಬ್ಬಗಳ ಪರಂಪರೆ ಜಗತ್ತಿನ ಬೇರೆ ಯಾವುದೇ ದೇಶ, ಜಾತಿ ಅಥವಾ ಧರ್ಮದಲ್ಲಿಲ್ಲ. ನಮಗೆ ಸನಾತನ ಧರ್ಮದಲ್ಲಿ ನಂಬಿಕೆಯಿದೆ. ಆ ನಂಬಿಕೆಯೇ ಹಬ್ಬಗಳ ಆತ್ಮ, ಭಾರತ ಹಬ್ಬಗಳ ಮೂಲಕ ಮುನ್ನಡೆಯುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಸನಾತನ ಧರ್ಮವನ್ನು ವಿರೋಧಿಸುವವರು ಪ್ರಯಾಗರಾಜ್‌ನಲ್ಲಿ ನಡೆದ ಮಹಾಕುಂಭಮೇಳದಲ್ಲಿ ಸನಾತನ ಧರ್ಮ ಹಾಗೂ ಭಾರತದ ಸಾಮರ್ಥ್ಯವನ್ನು ಕಂಡಿದ್ದಾರೆ. ಸಂಗಮದಲ್ಲಿ ನಡೆದ ಬೃಹತ್ ಸ್ನಾನದ ಆಚರಣೆಯಲ್ಲಿ 66 ಕೋಟಿಗೂ ಅಧಿಕ ಭಕ್ತರು ಪಾಲ್ಗೊಂಡು ಆಶೀರ್ವಾದ ಪಡೆದುಕೊಂಡಿದ್ದಾರೆ. ಅಲ್ಲಿ ಜಾತಿ ಅಥವಾ ಧರ್ಮದ ಆಧಾರದಲ್ಲಿ ಯಾವುದೇ ಬೇಧಭಾವ ಇರಲಿಲ್ಲ ಎಂದು ಅವರು ಹೇಳಿದ್ದಾರೆ. ಗೋರಖನಾಥ ದೇಗುಲದ ಮೇಳ ಮೈದಾನಕ್ಕೆ ಭೇಟಿ ನೀಡಿದ ಅವರು, ಅಲ್ಲಿ ಹೋಳಿಕವನ್ನು ಸುಟ್ಟರಲ್ಲದೆ, ವೈದಿಕ ಮಂತ್ರ ಪಠಿಸಿ ಭಸ್ಮಕ್ಕೆ ಪೂಜೆ ಸಲ್ಲಿಸಿ, ಆರತಿ ನೆರವೇರಿಸಿದರು. ಈ ಆಚರಣೆ ಬಳಿಕ ಸ್ವಾಮಿಗಳು ಹಾಗೂ ಭಕ್ತರು ಯೋಗಿ ಆದಿತ್ಯನಾಥ್ ಅವರ ಹಣೆಗೆ ಭಸ್ಮ ಹಚ್ಚಿ ಆಶೀರ್ವಾದ ಪಡೆದರು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

**ದೇಶವನ್ನು ವಿಭಜಿಸಲು ಯಾರು ಬಯಸುತ್ತಿದ್ದಾರೆ?: ಯೋಗಿ**

**'ರಾಮ ಮಂದಿರ ನಿರ್ಮಾಣವನ್ನು ವಿರೋಧಿಸಿದವರು, ಗೋ ಕಳ್ಳ ಸಾಗಾಣೆಯಲ್ಲಿ ಭಾಗಿಯಾಗಿರುವವರು ಮತ್ತು ಗೋ ಹತ್ಯೆಗೆ ಪ್ರೋತ್ಸಾಹ ನೀಡುತ್ತಿರುವವರು ಮತ್ತು ಅಂಥಹವರನ್ನು ಅಧಿಕಾರಕ್ಕಾಗಿ ತನ್ನ ಪಾಲುದಾರರನ್ನಾಗಿ ಮಾಡಿಕೊಂಡಿರುವವರು ಈ ನಿಟ್ಟನಲ್ಲಿ ಯತ್ನಿಸುತ್ತಿದ್ದಾರೆ' ಎಂದು ಯೋಗಿ ದೂರಿದರು. ಇವರು ಭಾರತ ವಿಕಾಸ ಬಯಸುವುದಿಲ್ಲ ಎಂದು ಹೇಳಿದರು.**

# 3ನೇ ಮದುವೆಗೆ ಸಜ್ಜಾದ ಅಮಿರ್-ಗೌರಿ



ಆಮಿರ್ ಖಾನ್ ಅವರಿಗೆ ಮತ್ತೆ ಲವ್ ಆಗಿದೆ. ಬೆಂಗಳೂರಿನ ಗೌರಿ ಎಂಬ ಮಹಿಳೆಯ ಜೊತೆ ಅವರು ಮದುವೆಗೆ ಸಜ್ಜಾಗುತ್ತಿದ್ದಾರೆ. ಗೌರಿ ಹಿನ್ನೆಲೆ ತಿಳಿದುಕೊಳ್ಳಲು ಎಲ್ಲರಿಗೂ ಕುತೂಹಲ ಇದೆ. ಇತ್ತೀಚೆಗೆ ಆಮಿರ್ ಖಾನ್ ಅವರು ತಮ್ಮ ಪ್ರೇಯಸಿಯ ಬಗ್ಗೆ ಮೊದಲ ಬಾರಿಗೆ ಮಾತನಾಡಿದರು. ಅದನ್ನು ಕೇಳಿ ಎಲ್ಲರಿಗೂ ಅಚ್ಚರಿ ಆಯಿತು.

2ನೇ ಪತ್ನಿ ಕಿರಣ್ ರಾವ್ ಗೆ ಡಿವೋರ್ಸ್ ನೀಡಿದ ನಂತರ ಆಮಿರ್ ಖಾನ್ ಅವರು ಸಿಂಗಲ್ ಆಗಿಯೇ ಉಳಿದುಕೊಳ್ಳುತ್ತಾರಾ ಅಥವಾ ಇನ್ನೊಂದು ಮದುವೆ ಮಾಡಿಕೊಳ್ಳುತ್ತಾರಾ ಎಂಬ ಪ್ರಶ್ನೆ ಅಭಿಮಾನಿಗಳ ಮನದಲ್ಲಿ ಮೂಡಿತ್ತು.

ಆಮಿರ್ ಖಾನ್ ಅವರಿಗೆ ಬೇರೆ ಸುಂದರಿಯ ಜೊತೆ ಆಪ್ತತೆ ಹೆಚ್ಚಿದ್ದರಿಂದಲೇ ಕಿರಣ್ ರಾವ್ ಜೊತೆಗಿನ ಸಂಸಾರ ಮುರಿದುಬಿತ್ತು ಎಂಬ ಮಾತು ಕೇಳಿಬಂದಿತ್ತು. ಅದೇನೇ ಇರಲಿ, ಆಮಿರ್ ಖಾನ್ ಅವರು 3ನೇ ಮದುವೆ ಸಜ್ಜಾಗಿರುವುದು ನಿಜವಾಗಿದೆ. ಬೆಂಗಳೂರು ಮೂಲದ ಮಹಿಳೆಯ ಜೊತೆಗೆ ಅವರು ರಿಲೇಷನ್‌ಶಿಪ್‌ನಲ್ಲಿ ಇದ್ದಾರೆ. ತಮ್ಮ ಹೊಸ ಪ್ರೇಯಸಿಯ ಹೆಸರು ಗೌರಿ ಎಂದು ಆಮಿರ್ ಖಾನ್ ಹೇಳಿದ್ದಾರೆ. ಹಾಗಾದ್ರೆ ಈ ಗೌರಿ ಯಾರು ಎಂಬ ಪ್ರಶ್ನೆಗೆ ಇಲ್ಲಿದೆ ಉತ್ತರ..

**ಹೊಸ ಪ್ರೇಯಸಿಯ ಹೆಸರು ಗೌರಿ**




ಆಮಿರ್ ಖಾನ್ ಅವರಿಗೆ ಈಗ 60 ವರ್ಷ ವಯಸ್ಸು. ಮೊಮ್ಮಕ್ಕಳ ಜೊತೆ ಆಟ ಆಡಿಕೊಂಡು ಇರಬೇಕಾಗಿದ್ದ ಅವರು 3ನೇ ಮದುವೆ ಆಗಲು ಬಗ್ಗೆ ಆಲೋಚಿಸಿದ್ದಾರೆ ಎಂದರೆ ಅಭಿಮಾನಿಗಳಿಗೆ ಅಚ್ಚರಿ ಆಗುವುದು ಸಹಜ. ಗೌರಿ ಮತ್ತು ಆಮಿರ್ ಖಾನ್ ಅವರಿಗೆ 25 ವರ್ಷಗಳ ಹಿಂದೆಯೇ ಪರಿಚಯವಿತ್ತು. ಆದರೆ ಕೆಲವು ವರ್ಷ ಸಂಪರ್ಕದಲ್ಲಿ ಇರಲಿಲ್ಲವಂತೆ.

ಕಳೆದ ಒಂದೂವರೆ ವರ್ಷದಿಂದ ಅವರಿಬ್ಬರು ಒಟ್ಟಿಗೆ ವಾಸ ಮಾಡಲು ಆರಂಭಿಸಿ ದ್ದಾರೆ. ಮೊದಲೇ ಹೇಳಿದಂತೆ ಗೌರಿ ಅವರು ಬೆಂಗಳೂರಿನವರು. ಅವರ ತಾಯಿ ರಿಟಾ ಬೆಂಗಳೂರಿನಲ್ಲಿ ಸಲೂನ್ ಹೊಂದಿದ್ದಾರೆ. ಮೊದಲಿನಿಂದಲೂ ಗೌರಿ ಅವರು ಬೆಂಗಳೂರಿನಲ್ಲೇ ವಾಸವಾಗಿದ್ದಾರೆ.

# ಡೆವಿಲ್ ಚಿತ್ರದಲ್ಲಿ ಶರ್ಮಿಳಾ ಮಾಂಡ್ರೆ





ನಟಿ ಶರ್ಮಿಳಾ ಮಾಂಡ್ರೆ, ಅವರು ದರ್ಶನ್ ನಟನೆಯ 'ದಿ ಡೆವಿಲ್' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಮೈಸೂರಿನಲ್ಲಿ ನಡೆಯುತ್ತಿರುವ ಶೂಟಿಂಗ್‌ನಲ್ಲಿ ಅವರು ಪಾಲ್ಗೊಂಡಿದ್ದಾರೆ. ಮಿಲನಾ ಪ್ರಕಾಶ್ ನಿರ್ದೇಶಿಸಿ, ನಿರ್ಮಾಣ ಮಾಡುತ್ತಿರುವ 'ದಿ ಡೆವಿಲ್' ಚಿತ್ರಕ್ಕೆ ಶರ್ಮಿಳಾ ಎಂಟ್ರಿ ಕೊಟ್ಟಿದ್ದಾರೆ. ಚಿತ್ರದ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ.

ಚಿತ್ರೀಕರಣದ ಸ್ಥಳದಲ್ಲಿ ತಾವು ಇರುವ ಕ್ಯಾರವಾನ್ ಫೋಟೋವನ್ನು ಶೇರ್ ಮಾಡಿಕೊಂಡಿದ್ದಾರೆ. ಚಿತ್ರದಲ್ಲಿ ಅವರ ಪಾತ್ರ ಹೇಗಿದೆ ಎಂಬುದು ರಿವೀಲ್ ಆಗಿಲ್ಲ. ಶರ್ಮಿಳಾ ಅಷ್ಟೇ ಅಲ್ಲ, 'ಬಿಗ್ ಬಾಸ್ ಕನ್ನಡ 10'ರ ಸ್ಪರ್ಧಿ ವಿನಯ್ ಗೌಡ 'ಡೆವಿಲ್' ಸೆಟ್‌ಗೆ ಎಂಟ್ರಿ ಕೊಟ್ಟಿದ್ದಾರೆ. ಡೆವಿಲ್‌ನಲ್ಲಿ ವಿಲನ್ ಪಾತ್ರದಲ್ಲಿ ಅಬ್ಬರಿಸಲಿದ್ದಾರೆ. ದರ್ಶನ್, ಶರ್ಮಿಳಾ, ವಿನಯ್ ಇರುವ ಚಿತ್ರೀಕರಣದ ಸ್ಥಳದಲ್ಲಿ ಭಾರೀ ಬಿಗಿ ಭದ್ರತೆ ಕೊಡಲಾಗಿದೆ. ಪೊಲೀಸ್ ಮತ್ತು ಬೌನ್ಸರ್ ಇಟ್ಟುಕೊಂಡು ನಿರ್ದೇಶಕ ಶೂಟಿಂಗ್ ಶುರು ಮಾಡಿದ್ದಾರೆ.

**2ನೇ ಬಾರಿ ದರ್ಶನ್ ಜೊತೆ**

ಇನ್ನೂ ಈ ಹಿಂದೆ 'ನವಗ್ರಹ' ಸಿನಿಮಾದಲ್ಲಿ ದರ್ಶನ್ ಜೊತೆ ಶರ್ಮಿಳಾ ತೆರೆಹಂಚಿಕೊಂಡಿದ್ದರು. ಇದೀಗ 2ನೇ ಬಾರಿ ದರ್ಶನ್ ಜೊತೆ ನಟಿ ಸಿನಿಮಾ ಮಾಡ್ತಿದ್ದಾರೆ.

# ಡ್ಯಾನ್ಸರ್ ಎಂದ ನಿರೂಪಕಿಗೆ ಜಾಡಿಸಿದ ಶ್ರೀಲೀಲಾ



ಕನ್ನಡದ ನಟಿ ಶ್ರೀಲೀಲಾ ಈಗ ತೆಲುಗು ಚಿತ್ರರಂಗದ ಟಾಪ್ ನಟಿಯಾಗಿ ಗುರುತಿಸಿಕೊಂಡಿದ್ದಾರೆ. ಆದರೆ ತೆಲುಗು ಚಿತ್ರರಂಗದಲ್ಲಿ ಶ್ರೀಲೀಲಾ ಅವರನ್ನು ನಟಿಯಾಗಿ ಬಳಸಿಕೊಂಡಿದ್ದಕ್ಕಿಂತಲೂ ಗ್ಲಾಮರ್ ಬೊಂಬೆಯಾಗಿ ಬಳಸಿಕೊಂಡಿದ್ದೇ ಹೆಚ್ಚು. ಇತ್ತೀಚೆಗೆ ನಿರೂಪಕಿ ಒಬ್ಬರು ಶ್ರೀಲೀಲಾ ಅನ್ನು ಡ್ಯಾನ್ಸರ್ ಎಂದು ಪರಿಚಯಿಸಿದ್ದು ನಟಿಗೆ ಸಿಟ್ಟು ತರಿಸಿದೆ.

ಕನ್ನಡದ ನಟಿ ಶ್ರೀಲೀಲಾ ತೆಲುಗು ಚಿತ್ರರಂಗದ ಟಾಪ್ ನಟಿಯಾಗಿದ್ದಾರೆ. ಈಗ ಬಾಲಿವುಡ್‌ಗೂ ಕಾಲಿರಿಸಿದ್ದಾರೆ. ಶ್ರೀಲೀಲಾ ಬಹಳ ಒಳ್ಳೆಯ ನಟಿಯಾಗಿರುವ ಜೊತೆಗೆ ಬಹಳ ಒಳ್ಳೆಯ ನೃತ್ಯಗಾರ್ತಿಯೂ ಹೌದು. ಅವರ ನೃತ್ಯ ಪ್ರತಿಭೆಯಿಂದಾಗಿಯೇ, ಶ್ರೀಲೀಲಾ ನಟಿಸುವ ಪ್ರತಿ ಸಿನಿಮಾದಲ್ಲಿಯೂ ಕೆಲವಾದರೂ ಒಳ್ಳೆಯ ಡ್ಯಾನ್ಸ್ ಹಾಡುಗಳನ್ನು ಇರಿಸಿರುತ್ತಾರೆ. ಶ್ರೀಲೀಲಾರ ನೃತ್ಯ ಪ್ರತಿಭೆಯಿಂದಾಗಿಯೇ ಕೆಲ ಸಿನಿಮಾಗಳಲ್ಲಿ ಅವಕಾಶ ಪಡೆದುಕೊಂಡಿದ್ದೂ ಸಹ ಇದೆ. ಹಾಗೆಂದು ಶ್ರೀಲೀಲಾಗೆ ತನ್ನನ್ನು ಡ್ಯಾನ್ಸರ್ ಎಂದು ಗುರುತಿಸುವುದು ಇಷ್ಟವಿಲ್ಲ. ಶ್ರೀಲೀಲಾ ನಟಿಸಿರುವ 'ರಾಬಿನ್ ಹುಡ್' ಹೆಸರಿನ ತೆಲುಗು ಸಿನಿಮಾದ ಪ್ರೀ ರಿಲೀಸ್ ಇವೆಂಟ್ ಆಯೋಜನೆಗೊಂಡಿತ್ತು. ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದ ಯುವತಿ, ಶ್ರೀಲೀಲಾ ಅವರನ್ನು ಪರಿಚಯಿಸುವಾಗ 'ಶ್ರೀಲೀಲಾ ಎಂದರೆ ಹಾಡುಗಳು, ಹಾಡುಗಳು ಎಂದರೆ ಡ್ಯಾನ್ಸ್, ಡ್ಯಾನ್ಸ್ ಎಂದರೆ ಶ್ರೀಲೀಲಾ' ಎಂದು ಕೊಂಡಾಡಿದರು.

# ತಮಿಳಿನತ್ತ ದೀಕ್ಷಿತ್ ಶೆಟ್ಟಿ



'ದಿಯಾ' ಖ್ಯಾತಿಯ ದೀಕ್ಷಿತ್ ಶೆಟ್ಟಿ ಕಾಲಿವುಡ್‌ನತ್ತ ಮುಖ ಮಾಡಿದ್ದಾರೆ. ಕನ್ನಡ, ತೆಲುಗಿನಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದ ದೀಕ್ಷಿತ್ ಶೆಟ್ಟಿ ಈಗ ತಮಿಳು ಚಿತ್ರರಂಗಕ್ಕೂ ಪಾದಾರ್ಪಣೆ ಮಾಡಿದ್ದಾರೆ. ರಾಮ್ ವೆಂಕಟ್ ನಿರ್ದೇಶನದ ಹೊಸ ಸಿನಿಮಾದಲ್ಲಿ ದೀಕ್ಷಿತ್ ಆಯ್ಕೆಯಾಗಿದ್ದಾರೆ.

ಇದೀಗ ಸರಳವಾಗಿ ಮುಹೂರ್ತ ಕಾರ್ಯಕ್ರಮ ಕೂಡ ಜರುಗಿದೆ. ವಿಭಿನ್ನ ಕಥೆಯ ಮೂಲಕ ಕಾಲಿವುಡ್‌ಗೆ ಅವರು ಎಂಟ್ರಿ ಕೊಡುತ್ತಿದ್ದಾರೆ. ರಶ್ಮಿಕಾ ಮಂದಣ್ಣಗೆ ಜೋಡಿಯಾಗಿ 'ದಿ ಗರ್ಲ್‌ಫ್ರೆಂಡ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಶೀಘ್ರಮೇವ ಕಲ್ಯಾಣ ಪ್ರಾಪ್ತಿರಸು, ಸ್ಟ್ರಾಬೆರಿ, ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ, ತೆಲುಗಿನ ಕಿಂಗ್ ಜಾಕಿ ಕ್ವೀನ್ ಮತ್ತು ಒಪ್ಪೀಸ್ ಚಿತ್ರಗಳು ನಟನ ಕೈಯಲ್ಲಿವೆ. ದೀಕ್ಷಿತ್ ಶೆಟ್ಟಿ ಅವರು 2020ರಲ್ಲಿ 'ದಿಯಾ' ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಪದಾರ್ಪಣೆ ಮಾಡಿದರು. ಬಳಿಕ ಅವರು ಕೆಟಿಎಂ ಮತ್ತು ಬ್ಲಿಂಕ್ ಮತ್ತು ತೆಲುಗು ಚಿತ್ರಗಳಾದ ಮುಗ್ಗುರು ಮೊನಗಲ್ಲು, ದಿ ರೋಸ್ ವಿಲ್ಲಾ ನಟಿಸಿದ್ದಾರೆ. ತೆಲುಗಿನಲ್ಲಿ ನಾನಿ ಮತ್ತು ಕೀರ್ತಿ ಸುರೇಶ್ ಜೊತೆ 'ದಸರಾ' ಸಿನಿಮಾ ಮಾಡಿ ಗೆದ್ದಿದ್ದಾರೆ.

# ಅಮ್ಮನ ಬಿಟ್ಟು ಹೇಗಿರುವುದು



ಸ್ಯಾಂಡಲ್‌ವುಡ್ ನಟಿ ಶುಭಾ ಪೂಂಜಾ ಅವರ ತಾಯಿ ನಿಧನರಾಗಿರುವ ನೋವಿನಲ್ಲಿದ್ದಾರೆ. ಅಮ್ಮ ವಿಧಿವಶರಾಗಿ ಒಂದು ವಾರದ ಬಳಿಕ ಅವರು ರಿಯಾಲಿಟಿ ಶೋ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ. ಈ ವೇಳೆ, ಅಗಲಿದ ಅಮ್ಮನ ನೆನೆದು ಅವರನ್ನು ಬಿಟ್ಟು ಹೇಗಿರುವುದು ಅಂತಲೇ ಗೊತ್ತಾಗುತ್ತಿಲ್ಲ ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. 'ಬಾಯ್ಸ್ ವರ್ಸಸ್ ಗರ್ಲ್ಸ್' ಶೋನಲ್ಲಿ ಮಾತನಾಡಿದ ಶುಭಾ ಪೂಂಜಾ, ಅಮ್ಮ ಸಾಯುವ ಹಿಂದಿನ ದಿನದ ರಾತ್ರಿ, ಅವರು ನನ್ನ ಕೈಯನ್ನು ಬಿಟ್ಟೇ ಇಲ್ಲ. ನಾನು ಕೂಡ ಗಟ್ಟಿಯಾಗಿ ಹಿಡಿದುಕೊಂಡಿದ್ದೆ ಎಂದರು. ಇಡೀ ರಾತ್ರಿ ಅಮ್ಮನಿಗೆ ಉಸಿರಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈಗ ಅವರನ್ನು ಬಿಟ್ಟು ನಾನು ಹೇಗೆ ಇರುವುದು ಅಂತ ಗೊತ್ತಾಗುತ್ತಲೇ ಇಲ್ಲ. ಐ ಆಮ್ ನಾಟ್ ಓಕೆ ಎನ್ನುತ್ತಾ ಶುಂಭಾ ಪೂಂಜಾ ಅವರು ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಈ ವೇಳೆ, ಕಾರ್ಯಕ್ರಮ ಇತರೆ ಸ್ಪರ್ಧಿಗಳು ಅವರಿಗೆ ಸಂತೈಸಿದ್ದಾರೆ. ಮಾ.6ರಂದು ಶುಭಾ ತಾಯಿ ನಿಧನರಾದರು. ಆ ಸಂದರ್ಭದಲ್ಲಿ ಅಮ್ಮ ನನ್ನ ನೀನು ಯಾಕೆ ಬಿಟ್ಟು ಹೋದೆ, ನೀನು ಇಲ್ಲದೆ ನನಗೆ ಜೀವನವಿಲ್ಲ. ನಿನ್ನ ಬಿಟ್ಟು ನನಗೆ ಬದುಕೋಕೆ ಬರೋದು ಇಲ್ಲ. 24 ಗಂಟೆ ನಿನ್ನ ಜೊತೆನೇ ಇರುತ್ತಿದ್ದೆ, ಈಗ ನಾನು ಏನು ಮಾಡಲಿ. ಎಲ್ಲಿ ಹೋಗಲಿ ಯಾರಿಗೋಸ್ಕರ ವಾಪಸ್ ಮನೆಗೆ ಬರಲಿ, ನನ್ನ ಇಡೀ ಜೀವನಕ್ಕೆ ಅರ್ಥವಿಲ್ಲದೆ ಆಯ್ತು. ನನ್ನ ಇಡೀ ಜೀವನವೇ ನೀನಾಗಿದ್ದೆ, ನನ್ನ ಯಾಕೆ ಬಿಟ್ಟು ಹೋದೆ ಎಂದು ನಟಿ ಎಮೋಷನಲ್ ಆಗಿ ಬರೆದುಕೊಂಡಿದ್ದರು.

# ಆಸ್ಟ್ರೇಲಿಯಾವನ್ನು ಬಗ್ಗುಬಡಿದು ಫೈನಲ್‌ಗೇರಿದ ಇಂಡಿಯಾ



ರಾಯ್‌ಪುರದಲ್ಲಿ ನಡೆದ ಅಂತರರಾಷ್ಟ್ರೀಯ ಮಾಸ್ಟರ್ಸ್ ಲೀಗ್ ಟಿ20 ಪಂದ್ಯದಲ್ಲಿ ಇಂಡಿಯಾ ಮಾಸ್ಟರ್ಸ್ ತಂಡ ಆಸ್ಟ್ರೇಲಿಯಾವನ್ನು ಸೋಲಿಸಿದೆ. 220 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಕೇವಲ 126 ರನ್‌ಗಳಿಗೆ ಆಲೌಟ್ ಆಯಿತು. ಯುವರಾಜ್ ಸಿಂಗ್ (59) ಮತ್ತು ಸಚಿನ್ ತೆಂಡೂಲ್ಕರ್ (42) ಅವರ ಅದ್ಭುತ ಬ್ಯಾಟಿಂಗ್ ಇಂಡಿಯಾ ಮಾಸ್ಟರ್ಸ್ ತಂಡಕ್ಕೆ ಗೆಲುವು ತಂದುಕೊಟ್ಟಿತು. ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಅಂತರರಾಷ್ಟ್ರೀಯ ಮಾಸ್ಟರ್ಸ್ ಲೀಗ್ ಟಿ20 ಲೀಗ್‌ನ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ ನಾಯಕತ್ವದ ಇಂಡಿಯಾ ಮಾಸ್ಟರ್ಸ್ ತಂಡವು, ಶೇನ್ ವಾಟ್ಸನ್ ನಾಯಕತ್ವದ ಆಸ್ಟ್ರೇಲಿಯಾ ಮಾಸ್ಟರ್ಸ್ ತಂಡವನ್ನು ಹೀನಾಯವಾಗಿ ಮಣಿಸಿ ಮೊದಲ ತಂಡವಾಗಿ ಫೈನಲ್‌ಗೇರಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಡಿಯಾ ಮಾಸ್ಟರ್ಸ್ ತಂಡ 20 ಓವರ್‌ಗಳಲ್ಲಿ 220 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಮಾಸ್ಟರ್ಸ್ ತಂಡ, ಇಂಡಿಯಾ ಬೌಲರ್‌ಗಳ ಮಾರಕ ದಾಳಿಗೆ ತತ್ತರಿಸಿ ಕೇವಲ 126 ರನ್‌ಗಳಿಗೆ ಆಲೌಟ್ ಆಯಿತು.

**ಭಾರತಕ್ಕೆ ಆರಂಭಿಕ ಆಘಾತ**

ಈ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ಮಾಸ್ಟರ್ಸ್ ತಂಡ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿತು. ಹೀಗಾಗಿ ಮೊದಲು ಬ್ಯಾಟಿಂಗ್ ಮಾಡಿದ ಇಂಡಿಯಾ ಮಾಸ್ಟರ್ಸ್ ತಂಡಕ್ಕೆ ಆರಂಭ ಉತ್ತಮವಾಗಿರಲಿಲ್ಲ. ಆರಂಭಿಕ ಅಂಬಾಟಿ ರಾಯುಡು ಕೇವಲ 5 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಆದರೆ ಆ ಬಳಿಕ ಜೊತೆಯಾದ ನಾಯಕ ಸಚಿನ್ ತೆಂಡೂಲ್ಕರ್ ಹಾಗೂ ಪವನ್ ನೇಗಿ 46 ರನ್‌ಗಳ ಜೊತೆಯಾಟ ಕಟ್ಟಿದರು. ಈ ವೇಳೆ ನೇಗಿ 14 ರನ್ ಬಾರಿಸಿ ಔಟಾದರು.

**ಸಚಿನ್ - ಯುವಿ ಸ್ಫೋಟಕ ಬ್ಯಾಟಿಂಗ್**

ನಂತರ ಬಂದ ಯುವರಾಜ್ ಸಿಂಗ್ ತಮ್ಮ ಹೊಡಿಬಡಿ ಆಟದ ಮೂಲಕ ಬೌಂಡರಿಗಳ ಮಳೆಗರೆದರು. ಯುವಿ ಕೇವಲ 30 ಎಸೆತಗಳಲ್ಲಿ 1 ಬೌಂಡರಿ ಹಾಗೂ 7 ಭರ್ಜರಿ ಸಿಕ್ಸರ್‌ಗಳ ಸಹಿತ 59 ರನ್ ಕಲೆಹಾಕಿ ಪೆವಿಲಿಯನ್ ಸೇರಿಕೊಂಡರು. ಆದರೆ ಯುವಿ ವಿಕೆಟ್ ಪತನಕ್ಕೂ ಮುನ್ನ ತಾಳ್ಮೆಯ ಇನ್ನಿಂಗ್ಸ್ ಕಟ್ಟಿದ ನಾಯಕ ಸಚಿನ್ ಕೂಡ 30 ಎಸೆತಗಳಲ್ಲಿ 7 ಬೌಂಡರಿಗಳ ಸಹಿತ 42 ರನ್ ಬಾರಿಸಿ ಬ್ಯಾಟ್ ಎತ್ತಿಟ್ಟರು. ಕೆಳಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಸ್ಟುವರ್ಟ್ ಬಿನ್ನಿ 36 ರನ್, ಯೂಸುಫ್ ಪಠಾಣ್ 36 ರನ್, ಇರ್ಫಾನ್ ಪಠಾಣ್ 19 ರನ್ ಬಾರಿಸಿ ತಂಡವನ್ನು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 220 ರನ್‌ಗಳಿಗೆ ಕೊಂಡೊಯ್ದರು.

**ತತ್ತರಿಸಿದ ಆಸ್ಟ್ರೇಲಿಯಾ ಇನ್ನಿಂಗ್ಸ್**

ಗೆಲ್ಲಲು 221 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಮಾಸ್ಟರ್ಸ್ ತಂಡಕ್ಕೆ ಯಾವ ಹಂತದಲ್ಲೂ ಒಂದು ಉತ್ತಮ ಜೊತೆಯಾಟ ಸಿಕ್ಕಲಿಲ್ಲ. ತಂಡ 15 ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡಿತು. ಆ ನಂತರ ಶಾನ್ ಮಾರ್ಷ್, ಬೆನ್ ಡಂಕ್ ಹಾಗೂ ನಾಥನ್ ರಿಯರ್ಡನ್ ತಲಾ 21 ರನ್‌ಗಳನ್ನು ಕಲೆಹಾಕಿ ಇನ್ನಿಂಗ್ಸ್ ನಿಭಾಯಿಸುವ ಕೆಲಸಕ್ಕೆ ಮುಂದಾದರಾದರೂ ಅದಕ್ಕೆ ಭಾರತದ ಬೌಲರ್‌ಗಳು ಅವಕಾಶ ನೀಡಲಿಲ್ಲ.

# ಐಪಿಎಲ್‌ಗಾಗಿ ಹೇರ್ ಸ್ಟೈಲ್ ಬದಲಿಸಿದ ವಿರಾಟ್ ಕೊಹ್ಲಿ

18ನೇ ಆವೃತ್ತಿಯ ಐಪಿಎಲ್ ಮಾರ್ಚ್ 22 ರಿಂದ ಆರಂಭವಾಗಲಿದೆ. ಮೊದಲ ಪಂದ್ಯದಲ್ಲೇ ಆರ್‌ಸಿಬಿ ಹಾಗೂ ಕೆಕೆಆರ್ ಮುಖಾಮುಖಿಯಾಗಲಿವೆ. ಈ ನಡುವೆ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಹೊಸ ಹೇರ್ ಸ್ಟೈಲ್ ಜೊತೆ ಕಣಕ್ಕಿಳಿಯಲಿದ್ದಾರೆ. ಇದೀಗ ಆರ್‌ಸಿಬಿ ತಂಡದ ತಯಾರಿ ಮತ್ತು ಕೊಹ್ಲಿ ಹೊಸ ಲುಕ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. 18ನೇ ಆವೃತ್ತಿಯ ಐಪಿಎಲ್ ಇದೇ ಮಾರ್ಚ್ 22 ರಿಂದ ಪ್ರಾರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ. ಉಭಯ ತಂಡಗಳು ನೂತನ ನಾಯಕರೊಂದಿಗೆ ಕಣಕ್ಕಿಳಿಯುತ್ತಿರುವ ಕಾರಣ ಯಾರ ತಂತ್ರ ಕೈಹಿಡಿಯಲಿದೆ ಎಂಬುದನ್ನು ನೋಡಲು ಅಭಿಮಾನಿಗಳು ಕಾದು ಕುಳಿತಿದ್ದಾರೆ. ಟೂರ್ನಿಯಲ್ಲಿ ಮೊದಲ ಪಂದ್ಯದಲ್ಲೇ ಕಣಕ್ಕಿಳಿಯುತ್ತಿರುವ ಕಾರಣ ಆರ್‌ಸಿಬಿ ಈಗಾಗಲೇ ತಯಾರಿ ಆರಂಭಿಸಿದೆ. ತಂಡದ



ಭಾಗಶಃ ಆಟಗಾರರು ನೆಟ್ಸ್‌ನಲ್ಲಿ ಬೆವರು ಹರಿಸುತ್ತಿದ್ದಾರೆ. ಆದರೆ ತಂಡದ ಬ್ಯಾಟಿಂಗ್ ಜೀವಾಳ ಎನಿಸಿಕೊಂಡಿರುವ ವಿರಾಟ್ ಕೊಹ್ಲಿ ಮಾತ್ರ ಇದುವರೆಗೆ ತಂಡವನ್ನು ಸೇರಿಕೊಂಡಿಲ್ಲ. ಆದಾಗ್ಯೂ ಕೊಹ್ಲಿ ಇಷ್ಟರಲ್ಲೇ ತಂಡ ಸೇರಿಕೊಳ್ಳಲಿದ್ದಾರೆ. ಕೊಹ್ಲಿ ತಡವಾಗಿ ತಂಡವನ್ನು ಸೇರಿಕೊಳ್ಳುವುದಕ್ಕೆ ಕಾರಣವೂ ಇದ್ದು, ದುಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾಗಿಯಾಗಿದ್ದ ಕೊಹ್ಲಿ ತಂಡವನ್ನು ಚಾಂಪಿಯನ್ ಮಾಡಿದ ಬಳಿಕ ಎರಡು ದಿನಗಳ ಹಿಂದಷ್ಟೇ ಭಾರತಕ್ಕೆ ವಾಪಸ್ಸಾಗಿದ್ದಾರೆ. ಹೀಗಾಗಿ ವಿಶ್ರಾಂತಿಯಲ್ಲಿರುವ ಕೊಹ್ಲಿ ಕೆಲವೇ ದಿನಗಳಲ್ಲಿ ತಂಡವನ್ನು ಕೂಡಿಕೊಳ್ಳಲಿದ್ದಾರೆ. ಆದರೆ ಅದಕ್ಕೂ ಮುನ್ನ ಕೊಹ್ಲಿ ತನ್ನ ಹೊಸ ಲುಕ್‌ನೊಂದಿಗೆ ಸೋಶಿಯಲ್ ಮೀಡಿಯಾಕ್ಕೆ ಬೆಂಕಿ ಹಚ್ಚಿದ್ದಾರೆ. ವಾಸ್ತವವಾಗಿ ಪ್ರತಿಯೊಂದು ಪ್ರಮುಖ ಈವೆಂಟ್ ಆರಂಭಕ್ಕೂ ಮುನ್ನ ವಿರಾಟ್ ಕೊಹ್ಲಿ ತನ್ನ ಹೇರ್ ಸ್ಟೈಲ್ ಬದಲಿಸುತ್ತಾರೆ. ಈ ಪ್ರವೃತ್ತಿಯನ್ನು ಕೊಹ್ಲಿ ಬಹಳ ವರ್ಷಗಳಿಂದ ನಡೆಸುಕೊಂಡು ಬಂದಿದ್ದಾರೆ. ಇದೀಗ ಐಪಿಎಲ್ ಆರಂಭಕ್ಕೂ ಮುನ್ನ ತನ್ನ ಹೇರ್ ಸ್ಟೈಲ್ ಬದಲಿಸಿಕೊಂಡಿರುವ ವಿರಾಟ್ ಕೊಹ್ಲಿ ಫೋಟೋಗಳು ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿವೆ. ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್ - ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿ ಆರಂಭವಾಗುವುದಕ್ಕೂ ಮುನ್ನ ಕೊಹ್ಲಿ ತಮ್ಮ ಹೇರ್ ಸ್ಟೈಲ್ ಬದಲಿಸಿದ್ದರು. ಆ ಸಮಯದಲ್ಲಿ ಕೊಹ್ಲಿಗೆ ಹೊಸ ಲುಕ್ ನೀಡಿದ್ದು, ಆಸ್ಟ್ರೇಲಿಯಾದ ಖ್ಯಾತ ಸೆಲೆಬ್ರಿಟಿ ಹೇರ್ ಸ್ಟೈಲಿಸ್ಟ್ ಜೋರ್ಡಾನ್ ತಬಕ್‌ಮನ್. ಇದೀಗ ಭಾರತದ ಖ್ಯಾತ ಸೆಲೆಬ್ರಿಟಿ ಕೇಶ ವಿನ್ಯಾಸಕ ಆಲಿಮ್ ಹಕೀಮ್ ಕೊಹ್ಲಿಗೆ ಹೊಸ ಲುಕ್ ನೀಡಿದ್ದಾರೆ. ಆರ್‌ಸಿಬಿ ತಂಡ: ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ಯಶ್ ದಯಾಳ್, ಜೋಶ್ ಹೇಜಲ್‌ವುಡ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಲಿಯಾಮ್ ಲಿವಿಂಗ್‌ಸ್ಟೋನ್, ರಸಿಖ್ ದಾರ್, ಸುಯಶ್ ಶರ್ಮಾ, ಕೃನಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ನುವಾನ್ ತುಷಾರ, ಮನೋಜ್ ಭಾಂಡಗೆ, ಜೇಕಬ್ ಬೆತೆಲ್, ದೇವದತ್ತ್ ಪಡಿಕ್ಕಲ್, ಸ್ವಸ್ತಿಕ್ ಚಿಕಾರಾ, ಲುಂಗಿ ಎನ್‌ಗಿಡಿ, ಅಭಿನಂದನ್ ಸಿಂಗ್, ಮೋಹಿತ್ ರಾಠಿ.


**ಕೊಹ್ಲಿಗೆ ಹೊಸ ಲುಕ್ ನೀಡಿದ್ದು ತಬಕ್‌ಮನ್**

# ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ನೂತನ ನಾಯಕನ ನೇಮಕ



2025ರ ಐಪಿಎಲ್ ಟೂರ್ನಿಗೆ ಕೆಲವೇ ದಿನಗಳು ಬಾಕಿ ಇರುವಾಗ, ದೆಹಲಿ ಕ್ಯಾಪಿಟಲ್ಸ್ ತಂಡ ಅಕ್ಷರ್ ಪಟೇಲ್ ಅವರನ್ನು ತಂಡದ ನಾಯಕನನ್ನಾಗಿ ನೇಮಿಸಿದೆ. ರಿಷಭ್ ಪಂತ್ ಲಕ್ನೋ ಸೂಪರ್ ಜೈಂಟ್ಸ್ ತಂಡಕ್ಕೆ ಸೇರಿದ ನಂತರ, ಅಕ್ಷರ್ ಪಟೇಲ್ ಅವರಿಗೆ ಈ ಜವಾಬ್ದಾರಿ ವಹಿಸಲಾಗಿದೆ. ಅಕ್ಷರ್ ಪಟೇಲ್ ಅವರು ತಮ್ಮ ಅದ್ಭುತ ಆಲ್-ರೌಂಡ್ ಪ್ರದರ್ಶನದಿಂದಾಗಿ ಈ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. 2025 ರ ಐಪಿಎಲ್ ಇದೇ ಮಾರ್ಚ್ 22 ರಂದು ಪ್ರಾರಂಭವಾಗಲಿದೆ. ಅಂದರೆ ಟೂರ್ನಿ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಉಳಿದಿವೆ. ಇದಕ್ಕೂ ಮುನ್ನ, ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ತನ್ನ ತಂಡಕ್ಕೆ ಹೊಸ ನಾಯಕನ ಹೆಸರನ್ನು ಘೋಷಿಸಿದೆ. 18ನೇ ಸೀಸನ್‌ನಲ್ಲಿ ಡೆಲ್ಲಿ ತಂಡದ ನಾಯಕತ್ವವನ್ನು ಅಕ್ಷರ್ ಪಟೇಲ್‌ಗೆ ಹಸ್ತಾಂತರಿಸಿದೆ. ಈ ಆವೃತ್ತಿಗೂ ಮೊದಲು ರಿಷಭ್ ಪಂತ್ ದೆಹಲಿ ತಂಡದ ನಾಯಕತ್ವ ವಹಿಸಿದ್ದರು. ಆದರೆ ಈ ಸೀಸನ್‌ನಲ್ಲಿ ಅವರು ಲಕ್ನೋ ಸೂಪರ್ ಜೈಂಟ್ಸ್‌ನ ಭಾಗವಾಗಿದ್ದಾರೆ. ಹೀಗಾಗಿ ತನ್ನ ತಂಡಕ್ಕೆ ನೂತನ ನಾಯಕನ ಹುಡುಕಾಟದಲ್ಲಿದ್ದ ಡೆಲ್ಲಿ ಫ್ರಾಂಚೈಸಿ, ಚಾಂಪಿಯನ್ಸ್ ಟ್ರೋಫಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಆಲ್ ರೌಂಡರ್ ಅಕ್ಷರ್ ಪಟೇಲ್‌ಗೆ ತಂಡವನ್ನು ಮುನ್ನಡೆಸುವ ಅಧಿಕಾರ ಸಿಕ್ಕಿದೆ. ಅಕ್ಷರ್ ಪಟೇಲ್ ಇದುವರೆಗೆ 150 ಐಪಿಎಲ್ ಪಂದ್ಯಗಳನ್ನು ಆಡಿದ್ದು, ಸುಮಾರು 131 ಸ್ಟ್ರೈಕ್ ರೇಟ್‌ನಲ್ಲಿ 1653 ರನ್ ಗಳಿಸಿದ್ದಾರೆ. ಹಾಗೆಯೇ ಬೌಲಿಂಗ್‌ನಲ್ಲೂ ಕಮಾಲ್ ಮಾಡಿರುವ ಅಕ್ಷರ್, 7.28 ರ ಎಕಾನಮಿಯಲ್ಲಿ 123 ವಿಕೆಟ್‌ಗಳನ್ನು ಪಡೆದಿದ್ದಾರೆ. ಆದರೆ, ಐಪಿಎಲ್‌ನಲ್ಲಿ ವರ್ಷಗಳಿಂದ ಆಡುತ್ತ ಬರುತ್ತಿರುವ ಅಕ್ಷರ್‌ಗೆ ಹೆಚ್ಚಿನ ನಾಯಕತ್ವದ ಅನುಭವವಿಲ್ಲ. ಆದಾಗ್ಯೂ ಕಳೆದ 7 ವರ್ಷಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ಪರ ಆಡುತ್ತಿರುವ ಅಕ್ಷರ್, ತಮ್ಮ ಆಲ್‌ರೌಂಡ್ ಆಟದ ಮೂಲಕ ಡೆಲ್ಲಿ ಕ್ಯಾಪಿಟಲ್ಸ್‌ನ ಬೆನ್ನೆಲುಬಾಗಿದ್ದಾರೆ. ಹೀಗಾಗಿ ಅನುಭವವಿಲ್ಲದಿದ್ದರೂ ಅಕ್ಷರ್‌ಗೆ ಡೆಲ್ಲಿ ತಂಡದ ನಾಯಕನನ್ನಾಗಿ ನೇಮಿಸಿದೆ.

# ಹೋಳಿ ಆಡಿದ ಮೊಹಮ್ಮದ್ ಶಮಿ ಮಗಳಿಗೆ ಇದೆಂಥಾ 'ಧರ್ಮ' ಸಂಕಟ..!



ಮೊಹಮ್ಮದ್ ಶಮಿ ಅವರ ಮಗಳು ಐರಾ ಹೋಳಿ ಹಬ್ಬವನ್ನು ಆಚರಿಸಿದ್ದಕ್ಕೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಹಸೀನ್ ಜಹಾನ್ ಅವರು ತಮ್ಮ ಮಗಳ ಫೋಟೋಗಳನ್ನು ಹಂಚಿಕೊಂಡಿದ್ದಕ್ಕೆ ಕೆಲವರು ಅವರನ್ನು ಟ್ರೋಲ್ ಮಾಡಿದ್ದಾರೆ. ಇದು ರಂಜಾನ್ ತಿಂಗಳು ಎಂದು ಹೇಳಿ ಅವರನ್ನು ಟೀಕಿಸಿದ್ದಾರೆ. ಆದರೆ ಅನೇಕರು ಐರಾಳಿಗೆ ಶುಭ ಹಾರೈಸಿದ್ದಾರೆ. ಈ ಘಟನೆಯು ಧರ್ಮೀಯ ವಿವಾದಕ್ಕೆ ಕಾರಣವಾಗಿದೆ. ಇಡೀ ದೇಶವೇ ಬಣ್ಣದೊಕ್ಕುಳಿಯಲ್ಲಿ ಮುಳುಗೇಳುತ್ತಿದೆ. ಇದಕ್ಕೆ ಕಾರಣ ರಂಗು ರಂಗಿನ ಹೋಳಿ ಹಬ್ಬ. ಭಾರತೀಯರು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸುವ ಹಬ್ಬಗಳಲ್ಲಿ ಈ ಹೋಳಿ ಹಬ್ಬವು ಒಂದು. ತಮ್ಮ ಆಪ್ತರು, ಸ್ನೇಹಿತರು, ಕುಟುಂಬದವರೆಲ್ಲ ಪರಸ್ಪರ ಒಬ್ಬರಿಗೊಬ್ಬರು ಬಣ್ಣವನ್ನು ಬಳಿಯುತ್ತ ಬಣ್ಣಗಳಲ್ಲಿ ಮಿಂದೇಳುತ್ತಾರೆ. ಅದರಂತೆ ತನ್ನ ಸ್ನೇಹಿತರೊಂದಿಗೆ ಹೋಳಿ ಹಬ್ಬವನ್ನು ಆಚರಿಸಿರುವ ಟೀಂ ಇಂಡಿಯಾ ಕ್ರಿಕೆಟಿಗ ಮೊಹಮ್ಮದ್ ಶಮಿ ಅವರ ಮಗಳು ಐರಾಗೆ ಇದೀಗ 'ಧರ್ಮ' ಸಂಕಟ ಎದುರಾಗಿದೆ. ತನ್ನ ಮಗಳ ಹೋಳಿ ಆಚರಣೆಯನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ಐರಾ ತಾಯಿ ಹಸಿನ್ ಜಹಾನ್ ಅವರನ್ನು ಕೆಲವು ಕಿಡಿಗೇಡಿಗಳು ಟ್ರೋಲ್ ಮಾಡಲು ಪ್ರಾರಂಭಿಸಿದ್ದಾರೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**